ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 4

ರೂ. 5/-

ಜನವರಿ 23, 2011

ಪುಟ 16

ಕನ್ನಡ ವಾರಪತ್ರಿಕೆ

Blog : janashakthi.wordpress.com
e-mail : js_weekly@yahoo.com





ಬೆಲೆ ಏರಿಕೆ ಹೆಮ್ಮಾರಿ ಜನತೆಯ ಮೇಲೆ ಸವಾರಿ



ಬೆಲೆ ನಿಯಂತ್ರಣ : ಯುಪಿಎ ಸರ್ಕಾರ ಪೂರ್ಣ ವಿಫಲ



ಅಂಗನವಾಡಿ ನೌಕರರ ಪೆನ್‌ಷನ್ ವಚನ ತಪ್ಪಿದ ಸರ್ಕಾರ

ಪಂಚಾಯತ್ : ಬಾಗೇಪಲ್ಲಿ - ಗುಡಿಬಂಡೆ ಸಿಪಿಐ(ಎಂ) ಮುನ್ನಡೆ

SFI 40 ಸಂಭ್ರಮ

ಭಂಡ ಬಿಜೆಪಿಯ ಪ್ರಜಾಪ್ರಭುತ್ವದ ಕಗ್ಗೊಲೆ

ಎಸ್‌ಎಫ್‌ಐ ಗೆ ನಾಲ್ಕು ದಶಕಗಳು ಉಡುಪಿಯಲ್ಲಿ ಸಂಭ್ರಮಾಚರಣೆ


■ ಹೆಚ್. ಆರ್. ನವೀನ್‌ಕುಮಾರ್


ಉಡುಪಿ ನಗರದಲ್ಲಿ ಹಾರಾಡಿತು ಶ್ವೇತ ಪತಾಕೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಗೆ 40 ವರ್ಷಗಳು ತುಂಬಿರುವ ಸಂದರ್ಭದಲ್ಲಿ ಇದರ ಸಂಭ್ರಮಾಚರಣೆಯನ್ನು ಹಾಗೂ ರವೀಂದ್ರನಾಥ ಠಾಗೂರ್ 150ನೇ ವರ್ಷಾಚರಣೆಯನ್ನು ಎಸ್‌ಎಫ್‌ಐನ ಕರ್ನಾಟಕ ರಾಜ್ಯ ಸಮಿತಿ ಜನವರಿ 8-9 ರಂದು ಎರಡು ದಿನಗಳ ಕಾಲ ಉಡುಪಿಯಲ್ಲಿ ಆಚರಿಸಿತು.

ಅಷ್ಟಮಠಗಳ ಕೇಂದ್ರ ಉಡುಪಿಯ ಬೀದಿಗಳಲ್ಲಿ ಅಂದು ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಘೋಷಣೆಯನ್ನು ಒಳಗೊಂಡ ಕೆಂಪು ನಕ್ಷತ್ರದ ಶ್ವೇತ ಪತಾಕೆ ಹಾರಾಡಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ವಿದ್ಯಾರ್ಥಿಗಳು, ಕಾರ್ಯಕರ್ತರು ಮತ್ತು ಉಡುಪಿಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನಗರದ ಪುರಭವನದ ಮೈದಾನದಿಂದ ಮೆರವಣಿಗೆ ಹೊರಟು ಮುಖ್ಯರಸ್ತೆಗಳಲ್ಲಿ ಸಾಗುತ್ತಾ ಎಸ್‌ಎಫ್‌ಐನ 4 ದಶಕಗಳ ಅಭ್ಯಾಸ, ಹೋರಾಟ, ತ್ಯಾಗದ ಪರಂಪರೆಯನ್ನು ಘೋಷಣೆಗಳ ಮೂಲಕ ಕೂಗುತ್ತಾ ಶ್ರೀ ನಾರಾಯಣಗುರು ಕಲ್ಯಾಣ ಮಂಟಪಕ್ಕೆ ಬಂದು ಸಮಾವೇಶಗೊಂಡರು.

ಈ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರೂ ಹಾಗೂ ಲೋಕಸಭಾ ಸದಸ್ಯರೂ ಆದ ಕಾಂ. ಪಿ.ಕೆ.ಬಿಜುರವರು 1970 ಡಿಸೆಂಬರ್ 27-30ರವರೆಗೆ ಕೇರಳದ ತಿರುವನಂತಪುರದಲ್ಲಿ ನಡೆದ ಪ್ರಥಮ ಅ.ಭಾ.ಸಮ್ಮೇಳನದಲ್ಲಿ ಎಸ್‌ಎಫ್‌ಐ ಸ್ಥಾಪನೆಯಾಗಿದ್ದು, ಅಂದು ಕೇವಲ 1 ಲಕ್ಷದ 24 ಸಾವಿರ ಇದ್ದ ಸದಸ್ಯತ್ವ ಇಂದು 44 ಲಕ್ಷಕ್ಕೇರಿ ದೇಶದ ಅತಿದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿ ಹೊರಹೊಮ್ಮಿದೆ. ಈ ರೀತಿ ವೇಗವಾದ ಬೆಳವಣಿಗೆಗೆ ನಾವು ಅನುಸರಿಸಿದ ಸರಿಯಾದ ರಾಜಕೀಯ ಮತ್ತು ಸೈದ್ಧಾಂತಿಕ ನಿಲುವು ಮತ್ತು ಅದನ್ನು ಜಾರಿಗೊಳಿಸಲು ದೇಶಾದ್ಯಂತ ನಮ್ಮ ಸಂಗಾತಿಗಳು ಮಾಡಿದ ತ್ಯಾಗ ಬಲಿದಾನಗಳಿಂದ ಸಾಧ್ಯವಾಗಿದೆ ಎಂದರು. ಮುಂದುವರೆದು ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಶಿಕ್ಷಣ ಕ್ಷೇತ್ರವನ್ನು ಮಾರಾಟದ ಸರಕನ್ನಾಗಿಸಿ ಉಳ್ಳವರಿಗೆ ಶಿಕ್ಷಣದ ಹೆಬ್ಬಾಗಿಲನ್ನು ತೆರೆದು ಇಲ್ಲದವರ ಪಾಲಿಗೆ ಶಾಶ್ವತವಾಗಿ ಬಾಗಿಲುಗಳನ್ನು ಮುಚ್ಚುತ್ತಿದ್ದು, ಶಿಕ್ಷಣ ಕೇಂದ್ರೀಕರಣ, ಖಾಸಗೀಕರಣ ನೀತಿಗಳನ್ನು ವ್ಯಾಪಕವಾಗಿ ಜಾರಿಗೆ ತರುತ್ತಿದೆ. ವಿದೇಶಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶಗಳನ್ನು ಕಲ್ಪಿಸುವ ಮೂಲಕ ದೇಶದ ಬೌದ್ಧಿಕ ಸ್ವಾವಲಂಬನೆಗೆ ಸವಾಲೊಡ್ಡಿದೆ. ಇಂತಹ ಸಂದರ್ಭದಲ್ಲಿ ದೇಶದ ವಿದ್ಯಾರ್ಥಿ ಸಮುದಾಯ ಈ ಜನವಿರೋಧಿ ನೀತಿಗಳ ವಿರುದ್ಧ ವ್ಯಾಪಕ ಚಳುವಳಿಗಳನ್ನು ನಡೆಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.


ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷ ಪಿ.ಕೆ. ಬಿಜು ಮಾತನಾಡುತ್ತಿರುವುದು

ಸಮಾರಂಭದ ಮುಖ್ಯ ಅತಿಥಿಗಳಾದ ಎಸ್‌ಎಫ್‌ಐ ಸಂಸ್ಥಾಪಕ ಮುಖಂಡರುಗಳಲ್ಲೊಬ್ಬರು ಮತ್ತು ಮಾಜಿ ಶಾಸಕರೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ ಜಾಗತೀಕರಣದ ಬೆಳವಣಿಗೆ ಮತ್ತು ಮಾಧ್ಯಮಗಳ ಪ್ರಭಾವದಿಂದ ವಿದ್ಯಾರ್ಥಿ ಸಮುದಾಯ ಸಾಮಾಜಿಕ ಕಳಕಳಿಯನ್ನು ಕಳೆದುಕೊಂಡು ವೈಯಕ್ತಿಕ ನೆಲೆಗಟ್ಟಿನಲ್ಲಿ ಚಿಂತಿಸುತ್ತಿದೆ. ಇದು ದೇಶದ ಅಭಿವೃದ್ಧಿಗೆ ಪೂರಕ ಬೆಳವಣಿಗೆಯಲ್ಲ. ಆದರೆ ನಮ್ಮ ಇತಿಹಾಸ ಇದಕ್ಕೆ ತದ್ವಿರುದ್ಧವಾಗಿದೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ದೇಶದ ವಿದ್ಯಾರ್ಥಿ ಸಮುದಾಯ ಸಮರಶೀಲ ಹೋರಾಟಗಳನ್ನು ಸಂಘಟಿಸಿತ್ತು. ಇದರ ಭಾಗವಾಗಿಯೇ 1936 ಆಗಸ್ಟ್ 12 ರಂದು ಸಂಘಟಿತ ವಿದ್ಯಾರ್ಥಿ ಚಳುವಳಿಯಾಗಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಹೊರಹೊಮ್ಮಿತು ಎಂದರು. ಜೊತೆಗೆ ದೇಶ ಮತ್ತು ರಾಜ್ಯದಲ್ಲಿ ಭ್ರಷ್ಟಾಚಾರ ಅತ್ಯಂತ ವ್ಯಾಪಕವಾಗಿದ್ದು, ಇದರ ವಿರುದ್ಧವು ವಿದ್ಯಾರ್ಥಿ ಸಮುದಾಯ ಬೀದಿಗಿಳಿದು ಪ್ರತಿಭಟಿಸಬೇಕೆಂದು ಕರೆ ನೀಡಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಾಹಿತಿ ಫಕೀರ್‌ಮೊಹಮದ್ ಕಟ್‌ಪಾಡಿಯವರು ಮಾತನಾಡಿ ದೇಶದಲ್ಲಿ ಕೋಮುವಾದ, ಭ್ರಷ್ಟಾಚಾರ ಎರಡು ಪೆಡಂಭೂತಗಳಾಗಿ ಬೆಳೆದಿವೆ. ಇವುಗಳನ್ನು ಬೇರು ಸಮೇತ ಕಿತ್ತೊಗೆಯುವ ಕರ್ತವ್ಯ ನಮ್ಮದು, ಎಸ್‌ಎಫ್‌ಐ ಜಾತ್ಯಾತೀತ ಮತ್ತು ಪ್ರಗತಿಗೆ ಪೂರಕವಾಗಿದೆ ಎಂದರು.



ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ: ಹೆಚ್.ಆರ್.ನವೀನ್‌ಕುಮಾರ್ ವಹಿಸಿದ್ದರು. ಕಾರ್ಯದರ್ಶಿ ಅನಂತನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿದರೆ ಕಾಂ:ಸುಜಿತ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ಅಂದು ಸಂಜೆ 'ಹಳೇಬೇರು ಹೊಸ ಚಿಗುರು' ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿಗಳಾಗಿದ್ದ ಎಸ್.ವೈ.ಗುರುಶಾಂತ್ ಮತ್ತು ಆರ್. ರಾಮಕೃಷ್ಣರವರು ಭಾಗವಹಿಸಿ, ರಾಜ್ಯದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಿದ ತಮ್ಮ ಅನುಭವಗಳನ್ನು ಪ್ರತಿನಿಧಿ ಸಂಗಾತಿಗಳಿಗೆ ವಿವರವಾಗಿ ತಿಳಿಸಿದರು. ಸಂಜೆ ಸೌಹಾರ್ದ ಕಲಾ ತಂಡ ಮತ್ತು ಪ್ರತಿನಿಧಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.


ಪಾಲ್ಗೊಂಡ ವಿದ್ಯಾರ್ಥಿ ಪ್ರತಿನಿಧಿಗಳು

ಉಪನ್ಯಾಸ : ಈ ಕಾರ್ಯಕ್ರಮದ ಅಂಗವಾಗಿ ಭಾರತದ ವಿದ್ಯಾರ್ಥಿ ಚಳುವಳಿಯ ಇತಿಹಾಸ ಕುರಿತು ಎಸ್‌ಎಫ್‌ಐನ ಅ.ಭಾ. ಪ್ರ. ಕಾರ್ಯದರ್ಶಿಗಳಾದ ಕಾಂ. ಚಿತ್ರೋಬ್ರತ ಬ್ಯಾನರ್ಜಿಯವರು ಉಪನ್ಯಾಸ ನೀಡಿದರು. 19 ಜಿಲ್ಲೆಗಳಿಂದ 250 ಪ್ರತಿನಿಧಿಗಳು ಎರಡು ದಿನಗಳ ಕಾರ್ಯಕ್ರಮದಲ್ಲಿ ಅತ್ಯಂತ ಹುಮ್ಮಸ್ಸಿನಿಂದ ಭಾಗವಹಿಸಿದ್ದರು.

ವೇದಗಳ ಸಾರ

ವೇದಗಳ ತಿರುಳೇನು ಬಲ್ಲೆಯಾ ತಮ್ಮ
ಬ್ರಾಹ್ಮಣ್ಯನು ಮಾತ್ರ ಸಾಕ್ಷಾತ್ ಬ್ರಹ್ಮ
ಉಳಿದವರು ಕುರಿ ಕತ್ತೆ ನಾಯಿಗೂ ಕೀಳು
ಎಂಬುದೇ ಆಗಿಹುದು ಅದರೊಳ ತಿರುಳು

■ ವಿಡಂಬಾರಿ

ಸಂಪಾದಕೀಯ

ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿ

ಹನ್ನೊಂದು ದಿನಗಳಿಗೆಂದು ಕರೆದಿದ್ದ ಈ ವಿಧಾನಸಭಾ ಅಧಿವೇಶನದಲ್ಲಿ ಕಲಾಪಗಳು ಪೂರ್ಣ ನಡೆಯದಂತಾಗಿ ಅಂತಿಮವಾಗಿ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ಸಂಘರ್ಷ ಮುಂದುವರಿಯುವಲ್ಲಿ ಅಧಿಕಾರ ರೂಢ ಬಿಜೆಪಿ ಪಕ್ಷದ ಭಂಡತನದ ವರ್ತನೆ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳೇ ಪ್ರಮುಖ ಕಾರಣ. ಹೀಗಾಗಿ ಸದನದ ಕಲಾಪಗಳಲ್ಲಿ ವಿರೋಧ ಪಕ್ಷಗಳು ಬೇಡಿಕೆ ಒಪ್ಪಿಕೊಳ್ಳದೇ ಸರ್ಕಾರದ ಮೊಂಡುತನದಿಂದಾಗಿ ಬಹಿಷ್ಕಾರ ಹಾಕಿ ಪ್ರತಿಭಟನೆ ನಡೆಸುವುದು ಅನಿವಾರ್ಯವಾಯಿತು. ಗಣಿ, ಭೂ ಹಗರಣಗಳು, ಸರ್ಕಾರದಲ್ಲಿನ ಭ್ರಷ್ಟಾಚಾರದಂತಹ ಪ್ರಮುಖ ಪ್ರಶ್ನೆಗಳನ್ನು ಪ್ರಥಮ ಆದ್ಯತೆಯ ವಿಷಯಗಳನ್ನಾಗಿ ಚರ್ಚೆಗೆ ಎತ್ತಿಕೊಳ್ಳಲು ನಿಲುವಳಿ ಸೂಚನೆಯ ಗೊತ್ತುವಳಿಯನ್ನು ಮಂಡಿಸಿದ ವಿರೋಧ ಪಕ್ಷಗಳ ಕೋರಿಕೆಯನ್ನು ಸಭಾಧ್ಯಕ್ಷರು ಒಳಗೊಂಡು ಸರ್ಕಾರ ಮನ್ನಿಲಿಲ್ಲ. ಆದರೆ ಮುಖ್ಯಮಂತ್ರಿ ಹಾಗೂ ಸಚಿವರು ಬಿಜೆಪಿ ನಾಯಕರು ನಡೆಸಿರುವ ಭಾರೀ ಹಗರಣಗಳ ಆರೋಪಗಳ ಬಗ್ಗೆ ವಿಧಾನಸಭೆಯಲ್ಲಿ ಮಂಡಿಸಿ ಚರ್ಚಿಸಬೇಕೆಂದೂ ಅದಕ್ಕೆ ತಕ್ಕ ಉತ್ತರ ಅಲ್ಲೇ ಕೊಡುವುದಾಗಿ ರಾಜ್ಯಾದ್ಯಂತ ಹೇಳಿಕೊಂಡು ತಿರುಗಿದ್ದ ಮುಖ್ಯಮಂತ್ರಿಗಳೇ ಈಗ ಅಂತಹ ಚರ್ಚೆಗೆ ನಿರಾಕರಿಸುತ್ತಿರುವುದು ಪಲಾಯನ ಮಾತ್ರವಲ್ಲ. ಆರೋಪಗಳನ್ನು ಒಪ್ಪಿಕೊಂಡಂತೆಯೇ ಆಗಿದೆ. ಒಂದು ವೇಳೆ ಎಲ್ಲವೂ ಸರಿಯಿದ್ದರೆ ಹಗರಣಗಳು ನಡೆಯದೇ ಇದ್ದಿದ್ದರೆ ಚರ್ಚೆಯನ್ನೇ ನಾಜೂಕಿನಿಂದ ನಿರಾಕರಿಸುವ ತಂತ್ರ ಯಾಕೆ ಅನುಸರಿಸಬೇಕಿತ್ತು. ದಾಖಲೆಗಳ ಸಮೇತ ಆರೋಪಗಳನ್ನು ಸಮರ್ಥಿಸಿಕೊಳ್ಳಲು ಸಿದ್ಧವಿರುವ ವಿರೋಧ ಪಕ್ಷಗಳಿಗೆ ಚರ್ಚೆಗೆ ಅವಕಾಶ ನೀಡಿದರೆ ಬಣ್ಣವೆಲ್ಲಾ ಬಯಲಾಗುವುದು ಎಂಬ ಖಚಿತ ಅಳುಕು ಸರ್ಕಾರವನ್ನು ಕಾಡುತ್ತಿದೆ.

ಇಂತಹ ಕ್ಲಿಷ್ಟ ಪ್ರಶ್ನೆ ಎದ್ದಿರುವಾಗ ಸಭಾಧ್ಯಕ್ಷರಾದ ಬೋಪಯ್ಯನವರ ಪಾತ್ರವೂ ತೀರಾ ಪಕ್ಷಪಾತದಿಂದ ಕೂಡಿದೆ. ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಬಂದಾಗ ಪರಿಸ್ಥಿತಿ ತಿಳಿಯಾಗಿಸಿ ಒಂದು ಪರಿಹಾರ ಕಂಡುಕೊಳ್ಳುವ ಪಾತ್ರ ವಹಿಸಬೇಕಾದ ಸಭಾಧ್ಯಕ್ಷರು ಅಂತಹ ಯಾವುದೇ ಕ್ರಮ ವಹಿಸಲಿಲ್ಲ. ಬದಲಾಗಿ ಆಡಳಿತ ಪಕ್ಷವಾದ ಬಿಜೆಪಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಈ ಹಿಂದೆಯೂ ಅಕ್ರಮ ವಿಧಾನಗಳ ಮೂಲಕ ಬಹುಮತ ಸಾಬೀತುಪಡಿಸಲು ಬಿಜೆಪಿ ಮುಂದಾದಾಗಲೂ ಸದನದ ನೀತಿ, ನಿಯಮ, ಸ್ಥಾನದ ಗೌರವವನ್ನು ಮಣ್ಣುಪಾಲು ಮಾಡಿ ಅಕ್ರಮಗಳನ್ನೇ ರಕ್ಷಿಸುವ, ಕ್ರಮಗಳನ್ನು ಆಕ್ಷೇಪಿಸಿದ ವಿರೋಧ ಪಕ್ಷಗಳನ್ನು 'ಶಿಕ್ಷಿಸುವ' ಹಂತಕ್ಕೆ ಹೋಗಿದ್ದು ಇನ್ನೂ ಹಸಿರಾಗಿದೆ. ಹೀಗೆ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿರುವ ಸಭಾಧ್ಯಕ್ಷರು ಆ ಸ್ಥಾನದಲ್ಲಿ ಮುಂದುವರಿಯುವುದು ಅನೈತಿಕವಾಗಿದೆ. ಹೀಗಾಗಿ ಅವರನ್ನು ಪದ ತ್ಯಾಗಗೊಳಿಸಲು ವಿರೋಧ ಪಕ್ಷಗಳ ಆಗ್ರಹ ಸೂಕ್ತವಾದುದೇ ಆಗಿದೆ. ಅದೇ ರೀತಿ ದಾಖಲೆಗಳ ಸಮೇತ ಸಿಕ್ಕಿಬಿದ್ದಿರುವ ಭ್ರಷ್ಟ ಮುಖ್ಯಮಂತ್ರಿ, ವಾಸ್ತವದಲ್ಲಿ ಬಹುಮತವಿಲ್ಲದಿದ್ದರೂ ಕುತಂತ್ರದಿಂದ ತಾಂತ್ರಿಕವಾಗಿ ಅಧಿಕಾರದಲ್ಲಿ ಮುಂದುವರೆದಿರುವುದು ಭಂಡತನ, ಅನೈತಿಕ ಮತ್ತು ಸಂಪುಟದ ಸಚಿವರಾದ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ಕಾಂ.ಜನಾರ್ಧನ ರೆಡ್ಡಿ ಬಳದ ಸಚಿವರ ಅಕ್ರಮಗಳನ್ನೂ ತೆರಿಗೆ ಇಲಾಖೆ, ಸುಪ್ರೀಂ ಕೋರ್ಟ್‌ನ ಸಮಿತಿ ವರದಿ ನೀಡಿರುವಾಗ ಮುಖ್ಯಮಂತ್ರಿ ಒಳಗೊಂಡು ಇಂತಹವರು ರಾಜೀನಾಮೆ ಕೊಡಬೇಕೆಂಬ ಒತ್ತಾಯ ಸರಿಯಾದುದೇ ಆಗಿದೆ. ಆದರೆ ಎಲ್ಲವನ್ನೂ ಆಡಳಿತ ಪಕ್ಷ ಸಾರಾಸಗಟು ನಿರಾಕರಿಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಎಸಗುತ್ತಿರುವ ದ್ರೋಹವಾಗಿದೆ. ಇವುಗಳ ಸುತ್ತ ಸಂಘರ್ಷ ಏರ್ಪಟ್ಟು ಹೀಗೆ ಸನ್ನಿವೇಶ ಗಂಭೀರವಾಗಿರುವಾಗ ವಿರೋಧ ಪಕ್ಷಗಳೇ ಅಲ್ಲಿರದಿರುವಾಗ ಏಳು ವಿಧೇಯಗಳನ್ನು ಏಕಪಕ್ಷೀಯವಾಗಿ ಮಂಡಿಸಿ, ಯಾವುದೇ ಚರ್ಚೆಯೂ ಇಲ್ಲದೇ ಧ್ವನಿಮತದಿಂದ ಅಂಗೀಕರಿಸಿಕೊಂಡ ಬಿಜೆಪಿಯ ವರ್ತನೆ ಫ್ಯಾಸಿಸ್ಟ್ ಮನೋಭಾವವಾಗಿದ್ದು ಖಂಡನೀಯವಾಗಿದೆ. ಈ ಮೂಲಕ ಬಿಜೆಪಿಯು ಪ್ರಜಾಪ್ರಭುತ್ವಕ್ಕೆ ಕಂಟಕವಾಗಿದೆ ಎಂಬುದನ್ನು ಪದೇ ಪದೇ ಸಾಬೀತುಪಡಿಸುತ್ತಿದೆ.


ಈ ನಡುವೆಯೇ ವಿಧಾನಸಭೆಯ ಉಪಾಧ್ಯಕ್ಷರ ಆಯ್ಕೆ ನಡೆಸಿದ್ದು ವಿಚಿತ್ರ ಪ್ರಸಂಗ. ಬಿಜೆಪಿ ಪ್ರತಿಯೊಂದು ಹಂತದಲ್ಲಿಯೂ ಸತತವಾಗಿ ಸಂವಿಧಾನಾತ್ಮಕ ಪರಂಪರೆಯನ್ನು ಉಲ್ಲಂಘಿಸಿ ಪ್ರಜಾಪ್ರಭುತ್ವದ ಮೇಲೆ ನಿರಂತರ ಧಾಳಿ ನಡೆಸುತ್ತಾ ಕಗ್ಗೊಲೆ ಮಾಡುತ್ತಿದೆ. ಹಿಂದಿನಿಂದಲೂ ಹಲವಾರು ಬಾರಿ ಇಂತಹ ಗದ್ದಲಗಳ ನಡುವೆ ಬಜೆಟ್, ಮಸೂದೆಗಳ ಅಂಗೀಕಾರ ಮಾಡಿಕೊಳ್ಳಲಾಗಿದೆ. ಇಂತಹುದೇ ವಂಚಕ ಮಾರ್ಗವನ್ನು ಅನುಸರಿಸುವುದು ಪ್ರಜಾತಂತ್ರಕ್ಕೆ ಅಪಾಯಕಾರಿ.

ಆಡಳಿತ ಪಕ್ಷದ ಈ ಭಂಡತನದ ಮುಂದುವರಿಕೆ ಸದನದ ಕಲಾಪಗಳನ್ನು ಹಾಗೂ ಗೌರವವನ್ನು ಇನ್ನಷ್ಟು ಹಾಳುಗೆಡಹುವುದರಲ್ಲಿ ಸಂಶಯವಿಲ್ಲ. ಇಂತಹ ಸ್ಥಿತಿಯಲ್ಲಿ ಸರ್ಕಾರ ತೊಲಗಿಸುವುದು ಅನಿವಾರ್ಯ, ಅಗತ್ಯ ಹಾಗೂ ಉಳಿದಿರುವುದು ಜನರ ಕಾರ್ಯಾಚರಣೆ, ರಾಜಕೀಯ ಕ್ರಿಯಾಶೀಲತೆ.

ಕಗ್ಗೊಲೆಗೆ ಎಷ್ಟೊಂದು ಹತ್ಯಾರಗಳು

"ಸಂಸದೀಯ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಒದಗುವುದು ದುಡಿಯುವ ವರ್ಗಗಳಿಂದಲ್ಲ, ಕಮ್ಯೂನಿಸ್ಟ್ ಪಕ್ಷದಿಂದ ಅಲ್ಲವೇ ಅಲ್ಲ. ಆದರೆ ಅಪಾಯವಿರುವುದು ಬಂಡವಾಳಶಾಹಿ- ಭೂಮಾಲಕ ವರ್ಗಗಳಿಂದ ಅವರನ್ನು ಪ್ರತಿನಿಧಿಸುವ ಪಕ್ಷಗಳಿಂದ" ಎಂದಿದ್ದರು ಹಿರಿಯ ಮಾರ್ಕ್ಸ್‌ವಾದಿ ನಾಯಕ, ಕ್ರಾಂತಿಕಾರಿ ಬಿ.ಟಿ.ರಣದಿವೆಯವರು.

ಅವರ ಮಾತು ಪದೇ ಪದೇ ನೆನಪಿಸಿಕೊಳ್ಳುವ, ಅರಿಯುವ ಸಂದರ್ಭಗಳು ಬರುತ್ತಲೇ ಇವೆ. ಭ್ರಷ್ಟಾಚಾರ, ಅಕ್ರಮಗಳ ಬಗ್ಗೆ ಚರ್ಚೆಗೆ ಬಿಲ್‌ಕುಲ್ ನಿರಾಕರಿಸಿರುವ ಸರ್ಕಾರದ ಧೋರಣೆ ವಿರೋಧಿಸಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ಇದೇ ಸಮಯವೆಂದು ಬಿಜೆಪಿ ಹಲವಾರು ಮಸೂದೆಗಳನ್ನು ಸರ್ವಾಧಿಕಾರತನದಿಂದ ಅಂಗೀಕರಿಸಿಬಿಟ್ಟಿದೆ. ಅದರ ದುರ್ವರ್ತನೆ ಇಲ್ಲಿಗೆ ನಿಂತಿಲ್ಲ. ಇಂತಹ ಕೋಲಾಹಲದ ಸ್ಥಿತಿಯಲ್ಲಿಯೇ ಆ ಸ್ಥಾನಕ್ಕೆ ಬಿಜೆಪಿಯ ಯೋಗೇಶ್ ಭಟ್ಟರನ್ನು ಆಯ್ಕೆ ಮಾಡಿರುವುದಾಗಿ ಘೋಷಿಸಿದೆ!



ಸಭಾಪತಿ, ಉಪಸಭಾಪತಿ ಸ್ಥಾನಗಳು ಅತ್ಯಂತ ಗೌರವಯುತವಾದವು: ಅವರು ಯಾವುದೇ ಪಕ್ಷದಿಂದ ಚುನಾಯಿತರಾಗಿದ್ದರೂ ಅವರು ಆಯ್ಕೆಯಾದ ಮೇಲೆ ಯಾವುದೇ ಪಕ್ಷಪಾತವಿಲ್ಲದೇ ಆಳುವ, ವಿರೋಧ ಪಕ್ಷಗಳ ವಿಶ್ವಾಸಕ್ಕೆ ಕುಂದಾಗದೇ, ಮುಖ್ಯವಾಗಿ ಸಂಸದೀಯ ನಿಯಮ, ಪರಂಪರೆ ಕಾನೂನುಗಳಿಗೆ ಅಪಚಾರವಾಗದಂತೆ ನಡೆದುಕೊಳ್ಳುವುದು ಸಾಧಾರಣ ಪಾಲಿಸಿಕೊಂಡು ಬಂದ ಸತ್ಸಂಪ್ರದಾಯ. ಅದರಲ್ಲೂ ಸಭಾಪತಿ ಸ್ಥಾನ ಆಡಳಿತರೂಢ ಪಕ್ಷದ ಕಡೆಯಿಂದ ಇದ್ದಲ್ಲಿ, ಉಪಸಭಾಪತಿ ಸ್ಥಾನ ವಿರೋಧ ಪಕ್ಷಕ್ಕೆ ನೀಡುವುದೂ ಸಹ ಪಾಲಿಸಿಕೊಂಡು ಬಂದ ಸಂಪ್ರದಾಯ. ಈ ಬಗ್ಗೆ ಜಗತ್ತೇ ಬಿರಿಯುವಂತೆ ಪ್ರತಿಪಾದಿಸುತ್ತಿದ್ದ ಬಿಜೆಪಿಯೇ ಇದು ಸತ್ಸಂಪ್ರದಾಯಕ್ಕೆ 'ಎಳ್ಳುನೀರು' ಬಿಟ್ಟಿದೆ. ಮೇಲಾಗಿ ಗದ್ದಲದ ನಡುವೆ ಅವರನ್ನು ಆರಿಸಿಕೊಂಡಿದೆ.

* * *



ಬುಡಮೇಲು ರಾಜಕಾರಣಕ್ಕೆ ಸಾಟಿಯುಂಟೇ?

ಜಿಲ್ಲಾ, ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಎಲ್ಲ ಜಿಲ್ಲೆಗಳನ್ನು ತಾವೇ ಗೆಲ್ಲುವುದು ಎಂಬ ಬಿಜೆಪಿ ಹೇಳಿಕೆಗೆ ಮತದಾರರು ತಡೆಯೊಡ್ಡಿದರು. 12 ರಲ್ಲಿ ಅವರಿಗೆ ಬಹುಮತ 10 ಜಿಲ್ಲೆಗಳಲ್ಲಿ ಅತಂತ್ರ, ಅದರೆ ಈ ವಿರೋಧ ಪಕ್ಷಗಳಾದ ಜೆಡಿ(ಎಸ್), ಕಾಂಗ್ರೆಸ್‌ಗಳಿಗೆ ಬಿಜೆಪಿಗಿಂತ ಅಧಿಕ ಸ್ಥಾನ. ಇಂತಹ ಸ್ಥಿತಿಯಲ್ಲಿ ಆ ಎರಡು ಪಕ್ಷಗಳು ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲೆಂದು ಹೊಂದಾಣಿಕೆ ಮಾಡಿಕೊಂಡು ಅಧಿಕಾರ ಹಿಡಿಯುವ ಸಂದರ್ಭ. ಇದನ್ನು ಬಹುಮತ ಪಡೆಯದ ಬಿಜೆಪಿ ಒಪ್ಪಿಕೊಳ್ಳಬೇಕಿತ್ತು. ತನ್ನ ವಿರುದ್ಧದ ಜನತೆಯ ತೀರ್ಪು ಅದು. ಆಡಳಿತ ಪಕ್ಷಕ್ಕೆ ಮತದಾರ ನೀಡಿದ ತಿರಸ್ಕಾರವೂ ಕೂಡ.

ಆದರೆ ಯಾವುದೇ ನೀತಿ, ನಿಯಮ, ನಾಗರೀಕ ನಡವಳಿಕೆಗಳನ್ನು ಮನ್ನಿಸದ ಬಿಜೆಪಿ ತನ್ನ ಕೈಯಲ್ಲಿರುವ ಸರ್ಕಾರದ ಅಧಿಕಾರ ಬಳಸಿ ಪುನ: ಅಲ್ಲೂ ಬುಡಮೇಲು ರಾಜಕಾರಣ ನಡೆಸುತ್ತಿದೆ. ಬಳ್ಳಾರಿಯಲ್ಲಿ ಕಾಂಗ್ರೆಸ್ ಸದಸ್ಯೆಯೊಬ್ಬರನ್ನು ರೆಡ್ಡಿಬಣ ಖರೀದಿಸಿದೆ. ವಿಜಾಪುರ, ಕೋಲಾರ, ಮಂಡ್ಯ ಮುಂತಾದ ಜಿಲ್ಲೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿಯನ್ನು ತನಗೆ ಅನುಕೂಲವಾಗುವಂತೆ ಬಳಸಿದೆ. ಅಂದರೆ ಜೆಡಿ(ಎಸ್), ಕಾಂಗ್ರೆಸ್ ಪಕ್ಷಗಳಲ್ಲಿ ಪ್ರತಿನಿಧಿಗಳಿಲ್ಲದ ವರ್ಗದಲ್ಲಿ ಮೀಸಲಾತಿ ನಿಗದಿ ಮಾಡಿ ತನ್ನ ಸದಸ್ಯರನ್ನು ಆ ಸ್ಥಾನಗಳಿಗೆ ಆಯ್ಕೆ ಮಾಡುವಂತಹ ಕುತಂತ್ರ, ನೀಚತನ ತೋರಿಸಿದೆ. ಉಳಿದಂತೆ ತಾನು ಬಹುಮತ ಪಡೆದಿರುವಲ್ಲಿ 'ಸಾಮಾನ್ಯ' ವಿಭಾಗಕ್ಕೆ 'ಮೀಸಲಿರಿಸಿದೆ'!

ಇನ್ನೂ ಹಲವೆಡೆ ಆಪರೇಷನ್ ಕಮಲವೆಂಬ ಖರೀದಿ ವ್ಯಾಪಾರವನ್ನು ತಾಲ್ಲೂಕು ಪಂಚಾಯತ್‌ಗಳವರೆಗೂ ಶುರುವಿಟ್ಟುಕೊಂಡಿದೆ.

ಬಿಜೆಪಿ ತಲುಪಿರುವ ಅಧ:ಪತನ ಅರಿಯಲು ಇಷ್ಟು ಸಾಕೆ? ಇನ್ನಷ್ಟು ಬೇಕೆ?

ಗಣಿಗಳ್ಳರ ದರ್ಬಾರು

ಕರ್ನಾಟಕದಲ್ಲಿನ ಅಕ್ರಮ ಗಣಿಗಾರಿಕೆ ಮತ್ತೊಮ್ಮೆ ದೇಶದಾದ್ಯಂತ ಸುದ್ದಿ ಮಾಡಿದೆ. ಸಚಿವರಾದ 'ಜನಾರ್ಧನ ರೆಡ್ಡಿ ಅಂಡ್ ಕೋ' ಬಳ್ಳಾರಿ ಹಾಗೂ ಆಂಧ್ರ ಗಡಿಯಲ್ಲಿ ನಡೆಸಿರುವ ಅಕ್ರಮ ಗಣಿ ಅದಿರಿನ ಲೂಟಿ, ಜಗತ್ತಿನೆದುರೇ ಬಟ್ಟಬಯಲಾಗಿ ನಿಂತಿದ್ದರೂ ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ನಾಯಕರಿಗೆ ಅದು ವಿರೋಧಿಗಳ ಹುಸಿ ಆರೋಪವಾಗಿಯೇ ಕಾಣುತ್ತಿದೆ. ಅದನ್ನೇ ರಾಜ್ಯಪಾಲರಿಗೆ ಬರೆದುಕೊಟ್ಟುಬಿಟ್ಟಿದ್ದಾರೆ. ಆದರೆ ಇದೇ ಮುಖ್ಯಮಂತ್ರಿಗಳು "ಸುಮಾರು ಮೂರುವರೆ ಕೋಟಿ ಟನ್‌ಗಳಷ್ಟು ಅದಿರು ಬಂದರಿನ ಮೂಲಕ ವಿದೇಶಕ್ಕೆ ರಫ್ತು ಮಾಡಲಾಗಿದೆ. ಅಕ್ರಮಗಳು ನಡೆದಿವೆ"ಯೆಂದು ವಿಧಾನಸಭೆಯಲ್ಲಿ ಪ್ರಕಟಿಸಿದ್ದರು. ಈಗ ಹೀಗೇಕೆ? ಮುಖ್ಯಮಂತ್ರಿಗಳಿಗೆ ಮರೆವೇ? ರಾಷ್ಟ್ರ ನಾಯಕರ ಒತ್ತಡವೇ? ಅಥವಾ ಅಧಿಕಾರದ ಕುರ್ಚಿ ಎಲ್ಲಿ ಕಿತ್ತುಕೊಳ್ಳಲಾಗುವುದೋ ಎಂಬ ಭಯವೇ? ಅವರದ್ದು ತಂದರೆ ಇವರದ್ದು ಹೊರಬೀಳುವ ಭಯವೇ? ಎಲ್ಲವೂ ಹೌದು! 'ಸಚಿವರ ಅಕ್ರಮ, ಭ್ರಷ್ಟಾಚಾರಗಳ ಬಗ್ಗೆ

ಪುಟ 14 ಕ್ಕೆ

ಶಕ್ತಿಯುತ ಸಾಂಸ್ಕೃತಿಕ ಅಭಿವ್ಯಕ್ತಿ

ಪುಟ 16 ರಿಂದ

ಹಣದಲ್ಲಿ ತರಬೇತಿ ನೀಡುತ್ತಿವೆ.

ಆಫ್ರಿಕಾ ದೇಶಗಳ ತಂಡಗಳು ಮಾತ್ರವಲ್ಲ ವಿಯೆಟ್ನಾಂ, ಪಶ್ಚಿಮ ಸಹಾರಾ, ಕ್ಯೂಬನ್ ಹಾಡು, ಕುಣಿತದಲ್ಲಿಯೂ ಇದೇ ಪ್ರತಿಭಟನೆಯ ಧ್ವನಿ ಇದ್ದು ಕಾಣುತ್ತಿತ್ತು. ಹಾಡು, ನರ್ತನದ ವಸ್ತುವೇ ಆದೇಶಗಳಲ್ಲಿ ನಡೆದ ಕ್ರಾಂತಿಯ ಕತೆ; ಹುತಾತ್ಮರ ಕುರಿತ ಮೆಚ್ಚುಗೆ; ಹುತಾತ್ಮರಿಂದ ಸ್ಫೂರ್ತಿ, ಶಕ್ತಿ ಬೇಡುವುದು, ಹೋರಾಡಿಯೇ ಸಿದ್ಧ ಎನ್ನುವ ಸಂದೇಶ ನೀಡುವುದು. ಹಾಡು ಆಧುನಿಕವಾಗಿದ್ದರೂ ಅದರ ಧಾಟಿ ಮಾತ್ರ ಜಾನಪದದ್ದು. ಅವರು ಬಳಸುವ ಬಹುತೇಕ ವಾದ್ಯಗಳು ಸಾಂಪ್ರದಾಯಿಕ ವಾದ್ಯಗಳು.

ಬೆಳಿಗ್ಗೆಯಿಂದ ಸಂಜೆಯವರೆಗೆ ಕುಣಿಯುತ್ತೀರಿ. ನಿಮಗೆ ಆಯಾಸ-ದಣಿವು ಆಗುವುದಿಲ್ಲವೇ ಎಂದು ಕೇಳಿದರೆ 'ನಮಗ್ಯಾಕೆ ದಣಿವಾಗಬೇಕು? ನಾವು ವಿಯೆಟ್ನಾಂ ಹುಡುಗಿಯರು, ಹೊಚಿಮಿನ್ ನಾಡಿನವರು. ಇನ್ನೂ ನಾಲ್ಕು ತಾಸು ಹಾಡುತ್ತೇವೆ; ಕುಣಿಯುತ್ತೇವೆ. ಬನ್ನಿ, ನಮ್ಮೊಂದಿಗೆ ಹೆಜ್ಜೆ ಹಾಕಿ.' ಎಂದು ಕೈ ಹಿಡಿದು ಹತ್ತಾರು ಬಿದಿರುಗಳ ಬಲೆಯೊಳಗೆ ಹೆಜ್ಜೆ ಹಾಕುವುದನ್ನು ಹೇಳಿಕೊಡುತ್ತಾರೆ. ಹೀಗೆ 8 ದಿನ ಕುಣಿದಿದ್ದಾರೆ, ವಿವಿಧ ದೇಶಗಳ ಪ್ರತಿನಿಧಿಗಳನ್ನು ಕುಣಿಸಿದ್ದಾರೆ. ಇಂಪಾದ ಸಂಗೀತ ಅವರದು. ಕೊಳಲು, ಬಿದಿರಿನಿಂದ ಮಾಡಿದ ವಾದ್ಯಗಳು, ತಂತಿ ವಾದ್ಯಗಳು ಉತ್ಸವದ ಗಮನ ಸೆಳೆದವು. ಸುಂದರ ಧ್ವನಿ ಅವರದು; ವಿಯೆಟ್ನಾಮಿ ಜನರ ಹಾಗೆ.

ಆದರೆ ಕ್ಯೂಬಾದ ಹಾಡು, ಕುಣಿತ ಹಾಗಲ್ಲ. ಏರಿದ ಧ್ವನಿ, ಅಬ್ಬರದ ವಾದ್ಯ, ಮೈ ಮುರಿದ ಕುಣಿತ.... ಅವರ ಹೋರಾಟದಂತೆ; ಜಗತ್ತಿಗೆ ಕೇಳುವಂತೆ. ಅಮೇರಿಕಾವನ್ನೇ ಬೆದರಿಸುವಂತೆ. ಹೆಚ್ಚು ಕುಣಿಯುವುದು ಹುಡುಗಿಯರೇ. ಬಿಳಿ, ಕಪ್ಪು, ಕಂದು ಬಣ್ಣದ ಬೆಡಗಿಯರು. ವಿಶ್ವಾಸದ ನರ್ತನ. ಎಲ್ಲಾ ದೇಶಗಳ ವೈವಿಧ್ಯತೆಗಳನ್ನೂ ಪ್ರದರ್ಶಿಸಲು ಕೊಟ್ಟ ಸ್ಟಾಲ್‌ಗಳಿವೆ. ಒಂದು ಸುತ್ತು ಮೆರವಣಿಗೆಯಲ್ಲಿ ನಡೆದು ಜನರ ಗಮನ ಸೆಳೆದು ಕಾರ್ಯಕ್ರಮ ನೀಡಿ 'ವೀವಾ ಕ್ಯೂಬಾ' ಎಂದು ಜನರ ಬಾಯಲ್ಲೇ ಬರುವಂತೆ ಮಾಡುವ ಸಾಹಸ ಮೆಚ್ಚಲೇ ಬೇಕು.

ಮೊರಕ್ಕೋದಿಂದ ಧಾಳಿಗೊಳಗಾದ ವೆಸ್ಟರ್ನ ಸಹಾರಾ ಮತ್ತು ಇಸ್ರೈಲ್ ನಿಂದ ಧಾಳಿಗೊಳಗಾದ ಪ್ಯಾಲಿಸ್ಟೈನಿಯರ ಹಾಡು, ನೃತ್ಯಗಳು ಜಾನಪದದ ಸೊಗಡಿನಿಂದ ಕೂಡಿರದಿದ್ದರೂ ಮಹಿಳೆಯರೇ ಹೆಚ್ಚಾಗಿ ಕುಣಿಯುವ ಅವರ ಸಾಂಪ್ರದಾಯಿಕ ಉಡುಗೆಯಿಂದ ಗಮನ ಸೆಳೆಯುತ್ತಿದ್ದರು. ಹಲವು ತಂಡಗಳು ಪ್ರತಿನಿಧಿಗಳ ಗಮನ ಸೆಳೆದುವು. ಜುಲು ಡಾನ್ಸ್ ಸುಮಾರು 10-15 ರೀತಿಯ ಹೆಜ್ಜೆಗಳನ್ನು ಕುಣಿಯುತ್ತಾರೆ. ಇವೆಲ್ಲವೂ ಭಿನ್ನಭಿನ್ನವಾದದ್ದೇ. ಬಿಟ್ಟ ಮೈ, ಸೊಂಟಕ್ಕೆ, ಎದೆಗೆ ಚರ್ಮದ ಬಟ್ಟೆ, ಕುತ್ತಿಗೆಗೆ ಮಣಿಸರ, ಎಲುವಿನ ಬಣ್ಣದ ಮಾಲೆಗಳು. ಕಾಲು ಕೈಗಳಿಗೆ ಕೂಡ ಮಣಿಗಳ ಕಟ್ಟುಗಳು. ತಲೆಗೆ ಪ್ರಾಣಿ ಚರ್ಮದ ಕೂದಲಿನಿಂದ ಮಾಡಿದ ಹೆಡ್ ಗೇರ್. ಆಕಾದೆತ್ತರಕ್ಕೆ ಕಾಲುಗಳನ್ನೆತ್ತಿ ಕುಣಿಯುವ ಭಂಗಿ ಆಕರ್ಷಕವಾದದ್ದು. ಕಾಂಗೋ ರೀತಿಯ ಚರ್ಮವಾದ್ಯ ಮತ್ತು ದೊಡ್ಡ ದೊಡ್ಡ ಡೋಲು, ಕಾಡಿನಲ್ಲಿ ಸಿಗುವ ಯಾವುದೋ ಕಾಯಿಯಿಂದ ಮಾಡಿದ ಗೆಜ್ಜೆ, ಹೆಜ್ಜೆಗೊಂದು ಗತ್ತು ತಂದಿದ್ದವು.

THE LUMBOOT DANCING ತಂಡ ಮುಖ್ಯವಾಗಿ ಯುದ್ಧದ ವಸ್ತುವುಳ್ಳ ಕುಣಿತ ಮಾಡುತ್ತದೆ. ಅದನ್ನವರು TRADITIONAL WAR DANCE ಎಂದು ಕರೆಯುತ್ತಾರೆ. ಕೈಯಲ್ಲಿ ಈಟಿ ಇತ್ಯಾದಿ ಆಯುಧಗಳೊಂದಿಗೆ ಯುದ್ಧದ ಕುಣಿತ NALEDI YOUTH CLUB ಪ್ರಸ್ತುತ ಪಡಿಸಿದ ಕುಣಿತದಲ್ಲಿ ದೇವರನ್ನು ಆರಾಧಿಸುವುದು ಮತ್ತು ಬೇಟೆಯ ದೃಶ್ಯ ಪ್ರದರ್ಶನ ಪ್ರಧಾನವಾಗಿತ್ತು. ಸುಮಾರು 36 ಜನರ ತಂಡ. ಅವರು ಸಮೂಹಕ್ಕೆ ಸಂಪತ್ತನ್ನು ಬೇಡುತ್ತಾರೆ. ಮತ್ತು ಹಿರಿಯರಿಗೆ ಸದ್ಗತಿಯನ್ನು ಕೋರುತ್ತಾರೆ. ಉಳಿದಂತೆ ಸಮುದಾಯಕ್ಕೆ ಖುಷಿಯನ್ನು ಬೇಡುತ್ತಾರೆ.

SHWANE TRADITIONAL DANCE, KURU DANCE, KASANE BOSTSWANA TRADITIONAL DANCE, VANUATU TRIBAL DANCE ಹೀಗೆ ವಿವಿಧ ತಂಡಗಳು ಪ್ರಸ್ತುತ ಪಡಿಸಿದ ಹಲವು ನರ್ತನಗಳು ಮತ್ತು ಅವರು ಹಾಕುವ ಹೆಜ್ಜೆಯ ವಿನ್ಯಾಸ ಕರ್ನಾಟಕದ ಹಲವು ಬುಡಕಟ್ಟುಗಳ ಕುಣಿತವನ್ನು ಹೋಲುತ್ತವೆ.

ಎಲ್ಲಾ ಕುಣಿತಗಳೂ ಸಾಮೂಹಿಕ ಕುಣಿತ, ಸ್ತ್ರೀಯರೇ ಪ್ರಧಾನವಾಗಿರುವ ಕುಣಿತ, ಕಾಡಿನ ಮನುಷ್ಯರಂತೆ ಉಡುಪು, ಆಭರಣಗಳನ್ನೇ ಬಟ್ಟೆಯಂತೆ ತೊಡುವ ರೀತಿ, ಶೇಡಿಯಂತಹ ಬಣ್ಣದಿಂದ ನಮ್ಮಲ್ಲಿಯ ವಿದೂಷಕನಂತೆ ಮುಖವರ್ಣಿಕೆ, ಅಪರೂಪಕ್ಕೆ ಕಾಣುವ ಮುಖವಾಡ ಇತ್ಯಾದಿಗಳು ಹೊಸ ಲೋಕವನ್ನೇ ಸೃಷ್ಟಿಸುತ್ತವೆ.

ಉತ್ಸವದ ಪ್ರತಿ ದಿನವೂ ಬೇರೆ ಬೇರೆ ದೇಶಗಳ, ಖಂಡಗಳ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದ್ದರು. ಏಷ್ಯಾ, ಯುರೋಪ್, ಅಮೇರಿಕಾ, ಆಫ್ರಿಕಾ ಮುಂತಾದ ಖಂಡಗಳ ಪ್ರತಿನಿಧಿಗಳು ಪರಸ್ಪರ ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳಲು ಇದೊಂದು ಸದವಕಾಶವಾಗಿತ್ತು.

ಸಾಮ್ರಾಜ್ಯ ಶಾಹಿ ಶಕ್ತಿಗಳ ಕ್ರೂರ ಧಾಳಿಗೆ ಒಳಗಾಗಿರುವ ದೇಶಗಳು ಪ್ರಭುತ್ವದ ಧಾಳಿಗೆ ವಿರುದ್ಧವಾಗಿ ರಾಜಕೀಯ ಹೋರಾಟವನ್ನು ಮಾಡುತ್ತಲೇ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತೆ ಮತ್ತೆ ಅಪ್ಪಿಕೊಳ್ಳುತ್ತಿವೆ. ಆಫ್ರಿಕಾದ ಅನೇಕ ದೇಶಗಳು ಸಾಂಪ್ರದಾಯಿಕ ಕಲೆಗಳನ್ನು ಯಥಾವತ್ತಾಗಿ ಪ್ರದರ್ಶಿಸಿದರೆ ಕ್ಯೂಬಾ, ವಿಯೆಟ್ನಾಂ ನಂಥ ದೇಶಗಳು ಟ್ರೆಡಿಶನಲ್ ಕಲೆಗಳಿಗೆ ಹೊಸಕಾಲದ ಆಶಯವನ್ನು ಅನುಸಂಧಾನಿಸಿ ಜನರ ಮಧ್ಯೆ ಹೋಗುತ್ತಿದ್ದಾರೆ. ಜನಸಾಮಾನ್ಯರನ್ನು ಒಳಗೊಳ್ಳುತ್ತಿದ್ದಾರೆ.

ಆದರೆ ಇಡೀ ಉತ್ಸವದಲ್ಲಿ ಭಾರತದ ಪಾಲ್ಗೊಳ್ಳುವಿಕೆ ಮಾತ್ರ ಸಾಂಸ್ಕೃತಿಕ ಕಾರ್ಯಕ್ರಮ ನೀಡುವಲ್ಲಿ ನಿರಾಶಾದಾಯಕವಾಗಿತ್ತು. ಮಣಿಪುರಿ ನರ್ತನವೊಂದನ್ನು ಬಿಟ್ಟರೆ ಗಮನ ಸೆಳೆಯುವ ಯಾವ ಕುಣಿತವಾಗಲೀ, ಹಾಡುಗಳಾಗಲೀ, ವಾದ್ಯಗಳಾಗಲೀ ಇರಲಿಲ್ಲ. ಹಾಗೆ ನೋಡಿದರೆ ಕರ್ನಾಟಕವನ್ನೂ ಒಳಗೊಂಡಂತೆ ಜಾನಪದ ಕಲೆ, ಕುಣಿತ, ಹಾಡುಗಳನ್ನು ಹೋರಾಟದ ಭಾಗವಾಗಿಸಿಕೊಂಡಿಲ್ಲ. ಈ ವಿಷಯಗಳಲ್ಲಿ ನಾವು ಕೇವಲ ಭಾಷಣಕ್ಕೆ ಸೀಮಿತಗೊಂಡಿದ್ದೇವೆ ಎಂದೆನಿಸಿತು.

ಜಗತ್ತಿನಲ್ಲಿಯೇ ಅತ್ಯಂತ ವೈವಿಧ್ಯಮಯ ಸಂಸ್ಕೃತಿಗಳನ್ನು ಭಾರತ ದೇಶವು ಹೊಂದಿದೆ. ಭಾರತದಲ್ಲಿ ಅಸ್ತಿತ್ವದಲ್ಲಿರುವ ಅತ್ಯಂತ ವಿಶಿಷ್ಟವಾದ ಮತ್ತು ವೈವಿಧ್ಯಮಯವಾದ ಜಾನಪದ ಕಲೆ, ಸಾಹಿತ್ಯವನ್ನು ಹೋರಾಟ ಕಟ್ಟುವಲ್ಲಿ, ಜನಸಾಮಾನ್ಯರ ಬಳಿ ಹೋಗುವಲ್ಲಿ ಹೇಗೆ ದುಡಿಸಿಕೊಂಡಿದ್ದೀರಿ? ಎಂದು ಕೆಲವು ದೇಶಗಳ ಪ್ರತಿನಿಧಿಗಳು ಕೇಳಿದಾಗ ನಮಗೆ ಸುಮ್ಮನಿರದೇ ಬೇರೆ ದಾರಿಯಿರಲಿಲ್ಲಾ. ಮಾತನ್ನು ಬೇರೆಡೆ ಹೊರಳಿಸುವುದೊಂದೇ ನಮಗಿರುವ ದಾರಿಯಾಗಿತ್ತು! ○

ಮನುಷ್ಯರ ಯಾಪಾರ !!!

ಕ್ಯಾತೆ

ಈ. ಬಸವರಾಜು

ಯಣ್ಣ ಕುರಿ, ಕೋಳಿ, ದನಗಳು, ಈರುಳ್ಳಿ, ಆಲಗೆಡ್ಡೆ ಯಾಪಾರ ನೋಡಿದ್ದೊ. ಮನುಷ್ಯರ ಯಾಪಾರ ನೋಡಿದ್ಯ?

ಅದ್ಯಾವಾಗ್ಲೋ ಬಾಳ ಹಿಂದೆ ಸಾವ್‌ಕಾರ್‍ರು ಕ್ಯಲ್ಸ ಮಾಡಕ್ಕೆ ಗುಲಾಮ್ರು ಅನ್ನರ್ ನ ಇಟ್ಕತಿದ್ರಂತೆ. ಅವ್ರಿಗೆ ಬ್ಯಾಡ ಅಂದ್ರೆ ಬೇರೆಯವ್ರಿಗೆ ಮಾರ್‍ತಿದ್ರಂತೆ. ನಾವು ದನ ಮಾರ್‍ತಿವಲ ಅಂಗೆಯ. ಆಮ್ಯಾಲೆ ಯಾರೋ ವಬ್ಬ ಇದ್ಯಲ್ಲ ಸರಿ ಇಲ್ಲ ಅಂತವ ಓರಾಟ ಸುರು ಮಾಡಿದ್ನಂತೆ. ಅದು ಬ್ಯಳ್ದು ಕಾಲಕ್ರಮೇಣ ಅದು ಇಲ್ದಂಗಾಯ್ತಂತೆ. ಈಗ ಮತ್ತೆ ಸುರು ಆಗಿದ್ದತೆ? ಎಲ್ಲಿ?

ಏ.. ಪೇಪ್ರೇದದಿಲ್ವೆ? ಚನ್ನಾಗಿ ಕ್ರಿಕೇಟ್ ಆಡ ಉಡುಗ್ರುನ್ನ ಸ್ರೀಮಂತ್ರು ಕೊಂಡ್‌ಕಂಡಿದ್ದರಂತೆ. ವಬ್ಬೊಂಗುಂಗೆ 10 ಕೋಟಿ ತಕ ದುಡ್ಡಂತೆ. ವಬ್ಬ ಸಾವ್ಕಾರ ಒಂದ್ ಟೀಂ ಆಗವಷ್ಟು ಜನಗಳ್ನ ಕೊಂಡ್ಕಂಡು ಅವ್ರು ಕೈಲಿ ಆಟ ಆಡುಸ್ತನಂತೆ. ಅದ್ರಲಿ ದುಡ್ ಮಾಡ್ಕತನಂತೆ!

ಯಂಗ್ ಕೊಂಡ್ಕತರಂತೆ? ಬೂಕುನ್ ಬ್ಯಟ್ಬುದ್ ಜಾತ್ರೆಲಿ ಎತ್ತುಗಳ್ನ ಮಾರ್‍ತರಲ ಅಂಗೇನಾರ ಇವ್ರುದೂ ಜಾತ್ರೆ ಇದ್ದತೆ?

ಇದೂ ಅಂಗೆಯಂತೆ. ಕೊಂಡ್ಕಳರ‍್ಯಲ್ಲ ಒಂದ್ ಕಡೆ ಕೂತ್ಕತರಂತೆ. ಆಟ ಆಡ ಉಡುಗ್ರು ಒಂದ್ ಕಡೆ ಕೂತ್ಕತರಂತೆ. ಕೊಂಡ್ಕಳರು ಅರಾಜ್ ಕೂಗ್ತರಂತೆ. ಸರ್ಕಾರಿ ಸವಾಲ್ ಒಂದು ಲಕ್ಷ ಅಂತ ಸುರು ಮಾಡಿ ಏರಿಸ್ಕಂಡು ಓಗ್ತರಂತೆ. ಕ್ವನಿಗೆ ಯಾರು ಜಾಸ್ತಿ ಕೂಗ್ತರೋ ಅವುರ್ ಕಡಿಕೆ ಸೇರ್‍ಕಂಡು ಆಟ ಆಡ್ಬೇಕಂತೆ.

ಏನೊ ಕಣಪ್ಪ, ಕಾಲ ಕೆಟ್ಟೋಯ್ತು. ಮನುಸ್ರುನ್ನ ಮಾರಾಟ ಮಾಡದು ಅನಿಷ್ಟ. ಅದು ಸರಿ ಇಲ್ಲ ಅಂತವ ಅವ್‌ನ್ಯಾರೋ ಮಾತ್ಮ ಓರಾಟ ಮಾಡಿದ್ದ. ಈಗ ನೋಡಿದ್ರೆ ತಿರ‍್ಗ ಅದೇ ಕಡೆ ಓಯ್ತಾ ಅವ್ರೆ ಅಂದ್ರೆ ಇದ್ಕೇನೇಳದು?

ನಂಗೂ ಏನೇಳದು ಅಂತಲೇ ತಿಳಿತಾ ಇಲ್ಲ.

ದುಡ್ಯಲ್ಲಾನು ಯಾಪಾರ ಆದ್ ಕೂಡ್ಲೇ ಕೊಡ್ತರೋ, ಇಲ್ಲ ಆಟ ಮುಗುದ್ ಮ್ಯಾಲೆ ಕೊಡ್ತರೋ?

ಮದ್ಲೆ ಕೊಡದ ಕಾಣಪ್ಪ. ಅಮ್ಯಾಲೆ ಅವ್ರು ಚನ್ನಾಗಿ ಆಡದೇ ಓದ್ರೆ?

ಚನ್ನಾಗಿ ಆಡದೇ ಓದ್ರೆ ವದ್ದು ದುಡ್ ವಸೂಲಿ ಮಾಡ್ತರೇನೋ!

ಇನ್ನೇನ್ ಮತ್ತೆ. ಯಾಪಾರ ಮಾಡದೇ ಲಾಭ ಮಾಡಕ್ಕೆ. ನೀನೇ ತಗೋ. ಜಾತ್ರೇಲಿ ಎತ್ತ ತರ್ತಿಯ. ಅದು ಚನ್ನಾಗಿ ವರೆ ಯಳಿದೇ ಓದ್ರೆ ಇನ್ನೋಂದ್ ಜಾತ್ರೇಲಿ ಮಾರ್‍ತಿಯ. ಅಂಗೆ ಅವ್ರೂ ಚನ್ನಾಗಿ ಆಡ್ದೇ ಓದ್ರೆ ದುಡ್ನ ಈಸ್ಕತರೆ. ಅಮ್ಯಾಲೆ ಮುಂದಿನ್ ಜಾತ್ರೇಲಿ ಬ್ಯಲೆ ಕಡ್ಮೆ ಮಾಡ್ತರೆ. ಇಲ್ಲ ಅಂದ್ರೆ ಯಾರೂ ಕೊಂಡ್ಕಳದೇ ಇಲ್ಲ.

ಇದ್ಯಲ್ಲ ಸರಿ ಇಲ್ಲ. ಆದ್ರೆ ನಾವು ಏನೋ ಮಾಡಕಾಗ್ತಾ ಇಲ್ಲ. ಯಾಕೆ ಅಂದ್ರೆ ಈಗ ನಡೀತಿರದು ಬರೀ ಯಾಪಾರ. ಸದ್ದಿಕೆ ನಮ್ಮುನ್ನ ಯಾರೂ ಮಾರದೇ ಇರಂಗೆ ನೋಡ್ಕಬೇಕಾಗ್ಯದೆ.

ಪಂಚಾತಿ ಯಲೆಕ್ಷನ್ ಟೈಮಲಿ ನನ್ನೂ ಕೊಂಡ್ಕಳಕೆ ಬಂದಿದ್ರಲ!! ನೀನು ಅವ್ರಿಗೆ ಕ್ಯಾನ್ವಾಸ್ ಮಾಡ್ ಬ್ಯಾಡ, ನಮಿಗ್ ಕ್ಯಾನ್ವಾಸ್ ಮಾಡು ಇಷ್ಟ್ ದುಡ್ ಕೊಡ್ತೀವಿ ಅಂದ್ರು. ನಾನು ಆಗದಿಲ್ಲ ಅಂದೆ. ಓಗ್ಲಿ ಇನ್ನೊಸಿ ದುಡ್ ಕೊಡ್ತೀವಿ, ಏನೂ ಮಾಡ್ ಬ್ಯಾಡ, ಯಲೆಕ್ಷನ್ ಆಗತಕ ಊರ್ ಬುಟ್ ಓಗು ಅಂದ್ರು. ನಾನು ಅಯ್ಯೋ ಅಯೋಗ್ಯರಾ, ನನ್ನ ನಿಮ್ಮಪ್ಪ ಸಾಕಿದ್ನೆ? ಇದು ಪ್ರಜಾಪ್ರಭುತ್ವ. ನನಿಗೆ ಯಾರ್ ಸರಿ ಅನುಸ್ತದೋ ಅವ್ರಿಗೆ ಓಟಾಕ್ತಿನಿ, ಮದ್ಲು ಮನೆ ಬುಟ್ಟು ಆಚೆಗೋಗಿ, ಇಲ್ಲ ಅಂದ್ರೆ ನಾಯ್ ಚೂ ಬುಡ್ತಿನಿ ಅಂದೆ. ಬಾಯಿ ಮುಚ್ಕಂಡು ಓಡಿದ್ರು.

ಓ ಇಷ್ಟೆಲ್ಲಾ ನಡದಿದ್ರೂ ನನಿಗೆ ನೀನು ಏಳೇ ಇಲ್ಲ. ವಳ್ಳೆ ಚಲಗಾರ ನೀನು ಬುಡು. ಚನ್ನಾಗಿ ಏಳಿ ಕಳ್ಸಿದ್ದಿಯ. ಆದ್ರೆ ನಿನ್ ಬುದ್ದಿಯ ಆ ಯಮ್ಮೆಲ್ಲೆಗಳು ಅನಿಸ್ಕಂಡರು ಕಲೀಲಿಲ್ಲ. ಆಪ್ರೇಸನ್ ಕಮಲಕ್ಕೆ ಮಾರಿಕಂಡ್ರು. ಹಿರಿಯಣ್ಣನ್ ಸಾಲಿಗೆ ಮನಿ ಮಕ್ಳು ಅನ್ನಂಗೆ ಈಗ ಜಿಲ್ಲಾ/ತಾಲೂಕು ಪಂಚಾತಿ ಮೆಂಬ್ರೂ ಮಾರಿಕ್ಕತ್ತವ್ರೆ. ಇದ ಸರಿ ಮಾಡದ್ಯಂಗೆ?

ಏನೂ ಇಲ್ಲ, ನಾನೇಳಿದ್ನಲ ಅದ ಯಲ್ಲಾರಿಗೂ ಕಲುಸ್ಬೇಕು. ಮರ್ಯಾದಿಯಿಂದ ಬಾಳದ ಕಲುಸ್ಬೇಕು. ಯಲೆಕ್ಷನ್ ಟೈಮಲಿ ದುಡ್ ಕೊಡಕ್ ಬಂದವುರ‍್ನ ಯಕ್ಡ ತಗಂಡು ಓಡಿಸ್ಕಂಡು ಓಗಿ ವಡೀಬೇಕು. ಅದೇನಾಯ್ತಳೆ ಆಗ್ಲಿ. ಅಂಗೆ ಮಾಡಿದ್ರೆ ನಿದಾನುಕ್ಕೆ ಸರಿ ಆಗ್ ಬೌದು.

ಅದ್ಸರಿ ಯಣ್ಣ, ನಮ್ ಉಡ್ಗ ಕ್ರಿಕೇಟ್ ಆಡ್ತನಿ, ಬ್ಯಾಟ್ ತಕ್ಕೊಡು ಅಂತ ಅವ್ನಲ, ಏನ್ ಮಾಡ್ಲಿ.

ಏನಾರ ತಕ್ಕೊಟ್ಟೆಯ. ಆಟ ಆಡದಾದ್ರೆ ಪುಟ್ ಬಾಲು, ವಾಲಿಬಾಲು, ಇಳ್ಳೇಕೋಲು, ಕಬ್ಬಡಿ ಆಡು ಅಂತ ಏಳು. ಆ ಆಟಗಳಿಗೆ ಇನ್ನೂ ಮರ್ಯಾದಿ ಅದೆ. ○

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಂಚಾಯ್ತಿ ಚುನಾವಣೆ

ಇಲ್ಲಿ ಬಂಡವಾಳಶಾಹಿ ಪಕ್ಷಗಳೆಲ್ಲವೂ ಸೇರಿಕೊಂಡು ಶಾಮೀಲಾಗಿ ನಡೆಸಿದ ಪಿತೂರಿಯನ್ನು ಜನರು ಸೋಲಿಸಿದ್ದಾರೆ.

ಬಾಗೇಪಲ್ಲಿ - ಗುಡಿಬಂಡೆ

ಸಿಪಿಐ(ಎಂ)ನ ಮುನ್ನಡೆ ವಿಶ್ವಾಸವಿರಿಸಿದ ಮತದಾರರು

ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ಮತದಾರ ತನ್ನ ಬೆಂಬಲವನ್ನು ಸಿಪಿಐ(ಎಂ) ಪಕ್ಷಕ್ಕೆ ನೀಡಿದ್ದಾನೆ. ಇದೇ ಮೊದಲಬಾರಿಗೆ ಸ್ಥಳೀಯ ಮಟ್ಟದ ಚುನಾವಣೆಯಲ್ಲಿ ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿಯಲ್ಲಿ ಸಿಪಿಐ(ಎಂ) ಅಧಿಕಾರ ಹಿಡಿದಿದೆ. ಅದೇ ರೀತಿ ಗುಡಿಬಂಡೆ ತಾಲ್ಲೂಕು ಪಂಚಾಯ್ತಿಯಲ್ಲಿ ಸಿಪಿಐ(ಎಂ) ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ಬಾಗೇಪಲ್ಲಿ ತಾಲ್ಲೂಕಿನ ನಾಲ್ಕು ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಎರಡು ಕ್ಷೇತ್ರಗಳಲ್ಲಿ ಗೆದ್ದಿದೆ. ಅದೇ ರೀತಿ ಹದಿನೈದು ಸ್ಥಾನಗಳ ತಾಲ್ಲೂಕು ಪಂಚಾಯ್ತಿಯಲ್ಲಿ ಎಂಟು ಸ್ಥಾನಗಳನ್ನು ಪಡೆದು ಅಧಿಕಾರಕ್ಕೇರಿದೆ. ಗುಡಿಬಂಡೆ ತಾಲ್ಲೂಕಿನ ತಾಲ್ಲೂಕು ಪಂಚಾಯ್ತಿಯಲ್ಲಿ ಐದು ಸ್ಥಾನ ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಒಟ್ಟಾರೆಯಾಗಿ ಸಿಪಿಐ(ಎಂ) ಪಕ್ಷದ ಹೋರಾಟಗಳು ಹಾಗೂ ಶಾಸಕರ ಕಾಲದ ಅಭಿವೃದ್ಧಿ ಕಾರ್ಯಗಳು ಆಳುವ ವರ್ಗಗಳ ಪಕ್ಷಗಳ ವೈಫಲ್ಯ, ಜನವಿರೋಧಿ ನೀತಿಗಳು ಪ್ರಮುಖವಾಗಿ ಜನತೆ ಸಿಪಿಐ(ಎಂ)ಗೆ ಮತ ನೀಡಲು ಕಾರಣವಾಗಿದೆ. ಅದೇ ರೀತಿ ಕಳೆದ ವಿಧಾನಸಭಾ ಚುನಾವಣೆಗಿಂತ ಸುಮಾರು ಆರು ಸಾವಿರಕ್ಕಿಂತಲೂ ಹೆಚ್ಚಿನ ಮತಗಳನ್ನು ಸಿಪಿಐ(ಎಂ) ಪಡೆದಿದೆ. ಹೊಸ ಪ್ರದೇಶಗಳಾದ ಮಿಟ್ಟೇಮರಿ ಹೋಬಳಿಯ ಪೋಲನಾಯಕನಹಳ್ಳಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಜಯಭೇರಿ ಬಾರಿಸಿದೆ. ಗುಡಿಬಂಡೆ ತಾಲ್ಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ಐದು ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಲ್ಲಿ ಗೆದ್ದು ಪಕ್ಷ ಬಲಿಷ್ಠವಾಗಿದೆ ಎಂದು ತೋರಿಸಿಕೊಟ್ಟಿದೆ.

ಬಂಡವಾಳಶಾಹಿ ಪಕ್ಷಗಳ ಕುತಂತ್ರಗಳನ್ನು ಬಗ್ಗುಬಡಿದು ಕೆಂಬಾವುಟ ಕೈಹಿಡಿದ ಮತದಾರ

ಕಳೆದ ವಿಧಾನಸಭಾ ಚುನಾವಣೆಗಳಿಂದ ಸತತವಾಗಿ ಸಿಪಿಐ(ಎಂ). ಪಕ್ಷವನ್ನು ಬಲಹೀನಗೊಳಿಸಲು ಹಾಗೂ ದುಡಿಯುವ ಜನರ ಚಳುವಳಿಯನ್ನು ದಮನಗೊಳಿಸಲು ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ. ಜೆಡಿ(ಎಸ್) ಪಕ್ಷಗಳು ಅನೈತಿಕವಾಗಿ ಒಂದಾಗಿ ಹಲವಾರು ತಂತ್ರ ಕುತಂತ್ರಗಳನ್ನು ಹೆಣೆದು ಸಿಪಿಐ(ಎಂ) ಪಕ್ಷವನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಾ ಬಂದಿವೆ. ಕಳೆದ ಗ್ರಾಮಪಂಚಾಯ್ತಿ ಚುನಾವಣೆಯಲ್ಲಿ ಈ ಮೂರು ಪಕ್ಷಗಳು ಒಳ ಒಪ್ಪಂದ ಮಾಡಿಕೊಂಡು ಸಿಪಿಐ(ಎಂ)ನ್ನು ಮಟ್ಟಹಾಕಲು ಹಣ, ಹೆಂಡ, ಜಾತಿ ರಾಜಕಾರಣವನ್ನು ಹರಿಯಬಿಟ್ಟಿದ್ದರು. ಅಲ್ಲದೆ ಸಿಪಿಐ(ಎಂ) ಪಕ್ಷಕ್ಕೆ ಉಳಿಗಾಲವಿಲ್ಲ ಎಂಬ ಅಪಪ್ರಚಾರವನ್ನು ಜನರ ನಡುವೆ ನಡೆಸಿದ್ದರು. ಆದರೆ ಬಡ ಜನರ ಹಾಗೂ ದಲಿತರ ಜೀವನಾಡಿಯಾಗಿ ಚಳುವಳಿ ನಡೆಸುತ್ತಿರುವ ಸಿಪಿಐ(ಎಂ) ಪಕ್ಷ ನಿರಂತರವಾಗಿ ಜನರ ಸಮಸ್ಯೆಗಳನ್ನು ಗುರುತಿಸಿ ಹೋರಾಟಕ್ಕೆ ಇಳಿಯಿತು. ಇದೇ ರೀತಿ ಬಂಡವಾಳಶಾಹಿ ಪಕ್ಷಗಳ ನಿಜ ಸ್ವರೂಪವನ್ನು ಜನತೆಗೆ ವಿವರಿಸುವುದರಲ್ಲಿ ಯಶಸ್ವಿಯಾಯಿತು. ಇಷ್ಟು ವರ್ಷಗಳು ಜನತೆಯನ್ನು ಮೋಸಗೊಳಿಸಿ ಓಟು ಪಡೆದು ಜನತೆಗೆ ಮೋಸ ಮಾಡುತ್ತಿದ್ದ ಕಾಂಗ್ರೆಸ್‌ನ್ನು ಜನತೆ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಅದೇ ರೀತಿ ಬಿಜೆಪಿ ಪಕ್ಷಕ್ಕೆ ಇಲ್ಲಿ ಉಳಿಗಾಲವಿಲ್ಲ ಎಂದು ಹೇಳಿದ್ದಾರೆ.

ಸಿಪಿಐ(ಎಂ) ಶಾಸಕರ ಹೋರಾಟ - ಅಭಿವೃದ್ಧಿ ಕೆಲಸಗಳ ಪ್ರಭಾವ

ಸಿಪಿಐ(ಎಂ) ನಾಯಕ ಜಿ.ವಿ.ಶ್ರೀರಾಮರೆಡ್ಡಿ ಶಾಸಕರಾಗಿದ್ದ ಅವಧಿಯಲ್ಲಿ ಈ ಕ್ಷೇತ್ರ ಅಭಿವೃದ್ಧಿಯನ್ನು ಕಂಡಿತ್ತು. ಗ್ರಾಮೀಣ ಪ್ರದೇಶದ ಜನರಿಗೆ ಹಾಗೂ ಎಲ್ಲಾ ನಾಗರೀಕರಿಗೆ ಕುಡಿಯುವ ನೀರು, ರಸ್ತೆ, ಆರೋಗ್ಯ, ಶಿಕ್ಷಣ, ನೀರಾವರಿ ಯೋಜನೆಗಳಿಗೆ ಹೆಚ್ಚು ಗಮನ ನೀಡಿ ಇಡೀ ಕ್ಷೇತ್ರದ ಸರ್ವತೋಮುಖಿ ಅಭಿವೃದ್ಧಿಗೆ ಕಂಕಣಬದ್ಧವಾಗಿ ಪಕ್ಷವು ಕೆಲಸ ನಡೆಸಿತ್ತು. ಆದರೆ ಮೂರು ವರ್ಷಗಳಿಂದ ಬಾಗೇಪಲ್ಲಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಹಿನ್ನಡೆ ಆಗಿದೆ. ಕುಡಿಯುವ ನೀರಿನ ಸಮಸ್ಯೆ, ಓಡಾಡಲು ಕಷ್ಟಕರವಾದಂತಹ ಸನ್ನಿವೇಶಗಳು ಉದ್ಭವವಾಗಿದೆ. ಹಾಲಿ ಶಾಸಕರ ಬೇಜವಾಬ್ದಾರಿತನದಿಂದ ಇಡೀ ಕ್ಷೇತ್ರ ಅಭಿವೃದ್ಧಿಯಲ್ಲಿ 20 ವರ್ಷಗಳ ಹಿಂದಕ್ಕೆ ಹೋಗಿದೆ. ಈ ಎಲ್ಲದರ ಬಗ್ಗೆ ಗಮನಿಸಿದ ಮತದಾರರು ಅಭಿವೃದ್ಧಿಯನ್ನು ಕೇವಲ ಸಿಪಿಐ(ಎಂ) ಮಾತ್ರ ಮಾಡಲು ಸಾಧ್ಯ ಎಂದು ಮನಗಂಡು ಈ ಚುನಾವಣೆಯಲ್ಲಿ ನಿರಂತರವಾಗಿ ಜನಸಾಮಾನ್ಯರ ಪರವಾಗಿ ಹೋರಾಡುವ ಸಿಪಿಐ(ಎಂ)ಗೆ ಮತ ನೀಡಿದ್ದಾರೆ.

ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಚುನಾವಣೆಗಳಲ್ಲಿ ಇಡೀ ಬಾಗೇಪಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷಗಳು ಒಳ ಒಪ್ಪಂದಗಳೊಂದಿಗೆ ಸಿಪಿಐ(ಎಂ)ನ್ನು ಸೋಲಿಸಲು ಹಲವಾರು ತಂತ್ರಗಳನ್ನು ಹೆಣೆದಿವೆ. ಜನತೆಗೆ ಅಭಿವೃದ್ಧಿ ಬಗ್ಗೆ ತಿಳುವಳಿಕೆ ನೀಡುವುದರ ಬದಲು ಹೆಂಡ, ಹಣ, ಜಾತಿ ಈ ಮೂರು ಅಂಶಗಳನ್ನು ಪ್ರಧಾನವಾಗಿ ಜನತೆಯ ಮಧ್ಯೆ ಬಳಸಿ ಸಿಪಿಐ(ಎಂ)ನ್ನು ಸೋಲಿಸಲು ಪ್ರಯತ್ನಿಸಿದ್ದಾರೆ. ಆದರೆ ಪ್ರಜ್ಞಾವಂತ ಮತದಾರ ಸಿಪಿಐ(ಎಂ)ನ್ನು ಬೆಂಬಲಿಸಿ ಹಣ, ಹೆಂಡಕ್ಕೆ ಹಾಗೂ ಜಾತಿಗೆ ಕಿಮ್ಮತ್ತು ನೀಡದೆ ಮುಕ್ತವಾಗಿ ಮತವನ್ನು ಚಲಾಯಿಸಿದ್ದಾರೆ.

ವರದಿ: **ಮುನಿವೆಂಕಟಪ್ಪ.ಪಿ.**

ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆ ಫಲಿತಾಂಶದ ವಿವರ
ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ

ಜಿಲ್ಲಾ ಪಂಚಾಯತಿ ಕ್ಷೇತ್ರಗಳು	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್
ಮಿಟ್ಟೇ ಮರಿ	7210	7717	749	1808
ಚೇಳೂರು	2855	7739	1114	8979
ಕಸಬಾ *	9135	8659	2186	1169
ಗೂಳೂರು *	9427	9073	910	1363
ಬೀಚಗಾನಹಳ್ಳಿ(ಗುಡಿಬಂಡೆ)	5157	7163	1085	1427
ಸೋಮೇನಹಳ್ಳಿ(ಗುಡಿಬಂಡೆ)	2983	3341	670	2925
ಒಟ್ಟು	36,767	43692	6714	17671
ತಾಲ್ಲೂಕು ಪಂಚಾಯತಿ ಕ್ಷೇತ್ರಗಳು	**ಸಿಪಿಐ(ಎಂ)**	**ಕಾಂಗ್ರೆಸ್**	**ಬಿಜೆಪಿ**	**ಜೆಡಿಎಸ್**
ಬಿಳ್ಳೂರು	1518	2344		
ಚೇಳೂರು	1221	2426	544	2860
ಚಾಕವೇಲು	506	1886	355	2409
ದೇವರಗುಡಿಪಲ್ಲಿ *	2092	1736	864	267
ಗೊರ್ತಪಲ್ಲಿ	2248	2476	552	206
ಗೂಳೂರು *	1680	912	100	208
ತುಲಗಲ್	808	2385	299	2778
ಕೊತ್ತಕೋಟೆ	2268	2270	319	447
ಮಿಟ್ಟೇಮರಿ	1093	1651		
ನಲಪರೆಡ್ಡಿಪಲ್ಲಿ *	1948	1833		
ಪರಗೋಡು *	2718	2342		
ಪಾತಪಾಳ್ಯ *	1764	1664		
ಪೋಲನಾಯಕನಪಲ್ಲಿ *	2278	2013		
ಸೋಮನಾಥಪುರ *	3054	2177		
ಯಲ್ಲಂಪಲ್ಲಿ *	2686	1996		
ಬೀಚಗಾನಹಳ್ಳಿ	1014	1279		
ಚೆಂಡೂರು *	1390	923		
ದೊಡ್ಡನಂಚೇರ್ಲು	286	560		830
ಹಂಪಸಂದ್ರ *	1545	1400		
ಕಾಟೇನಹಳ್ಳಿ *	540	482		
ಪೋಲಂಪಲ್ಲಿ	593	243		874
ಸೋಮೇನಹಳ್ಳಿ *	596	413		
ತಿರುಮಣಿ *	687	465		
ವರ್ಲಕೊಂಡ	881	1039		
ಎಲ್ಲೋಡು	996	1064		
ಉಲ್ಲೋಡು	729	983		
ಒಟ್ಟು	37089	38962		

*ಗೆಲುವು

ಡಾ. ವಿನಾಯಕಸೇನ್‌ಗೆ ಜೀವಾವಧಿ ಶಿಕ್ಷೆ ನ್ಯಾಯವೆಂಬುದರ ಅಣಕ

ವೈದ್ಯರು, ಜನಾರೋಗ್ಯ ತಜ್ಞರೂ ಆದ ಡಾ. ವಿನಾಯಕ ಸೆನ್ ಅವರಿಗೆ ಚತ್ತೀಸ್‌ಗಢದ ಹೆಚ್ಚುವರಿ ಸೆಷನ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿರುವುದು ಅತ್ಯಂತ ಆಘಾತಕಾರಿಯಾಗಿದೆ ಮತ್ತೆ ಅದು ನ್ಯಾಯ ವ್ಯವಸ್ಥೆಯ ಒಂದು ಗಂಭೀರ ವೈಫಲ್ಯವಾಗಿದೆ.

ಭಾರತೀಯ ದಂಡಸಂಹಿತೆ, ಚತ್ತೀಸ್‌ಗಡ ವಿಶೇಷ ಸಾರ್ವಜನಿಕ ಭದ್ರತಾ ಕಾಯ್ದೆ (ಸಿಎಸ್‌ಪಿಎಸ್‌ಎ) ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆಕಾಯ್ದೆ (ಯುಎಪಿಎ) ಪ್ರಕಾರ ಡಾ.ವಿನಾಯ್ಕ್‌ಸೇನ್ ಅಪರಾಧಿ ಎಂದು ತೀರ್ಮಾನಿಸಲಾಗಿದೆ.

ವಿಚಾರಣೆಯ ಸಂದರ್ಭದಲ್ಲಿ ಡಾ.ವಿನಾಯಕ್ ಸೇನ್ ಅವರ ವಿರುದ್ಧ ಒದಗಿಸಲಾದ ಸಾಕ್ಷ್ಯಾಧಾರಗಳು ಅತ್ಯಂತ ಕ್ಷುಲ್ಲಕವಾದುದಾಗಿತ್ತು ಮತ್ತು ಕಟ್ಟು ಕತೆಗಳಿಂದ ಕೂಡಿದ್ದಾಗಿತ್ತು.

ಸಿ.ಎಸ್.ಪಿ.ಎಸ್.ಎ. ಮತ್ತು ಯುಎಪಿಎ ಕಾನೂನುಗಳನ್ನು ತರುವಾಗಲೇ ಈ ಕಾಯ್ದೆಯೊಳಗಿನ ಭಯಾನಕ ಅಂಶಗಳ ಕುರಿತು ಸಿಪಿಐ(ಎಂ) ಎಚ್ಚರಿಸಿತ್ತು.

ಮಾವೋವಾದಿಗಳು ದೊಡ್ಡ ರೀತಿಯ ಹಿಂಸಾಕೃತ್ಯಗಳಲ್ಲಿ ತೊಡಗಿದ್ದಾರೆಂಬುದು ನಿಜ. ಈ ಹಿಂಸಾಕಾಂಡಗಳಿಗೆ ತಡೆ ಹಾಕಬೇಕಾದ ಅಗತ್ಯವಿದೆ ಎಂಬುದೂ ಸರಿಯೇ. ಇದೇ ಉದ್ದೇಶಕ್ಕಾಗಿಯೇ ದಾಂತೇವಾಡ ಮುಂತಾದ ಕಡೆಗಳಲ್ಲಿ ಸಶಸ್ತ್ರ ಪಡೆಗಳನ್ನು ನಿಯೋಜಿಸಲಾಗಿದೆ. ಹಿಂಸಾನಿರತ ಮಾವೋವಾದಿಗಳ ಉಪಟಳ ಹೆಚ್ಚಾದಾಗಲೂ ಕೂಡ ಕಾನೂನುಬದ್ಧವಾಗಿಯೇ ಈ ಪ್ರಶ್ನೆಗಳನ್ನು ನಿರ್ವಹಿಸಬೇಕಾಗಿದೆ. ಆದರೆ ಈ ನೆಪದಲ್ಲಿ ಚತ್ತೀಸ್‌ಗಡದ ಬಿಜೆಪಿ ಸರ್ಕಾರ ನಾಗರೀಕರ ಪ್ರಜಾಪ್ರಭುತ್ವ ಹಕ್ಕುಗಳಿಗೆ ಧಕ್ಕೆ ಉಂಟುಮಾಡುತ್ತಿದೆ.

ಚತ್ತೀಸ್‌ಗಡ ರಾಜ್ಯ ಸರ್ಕಾರ ಬೆಂಬಲಿತ ಸ್ವಾಲ್ವ ಜುಡುಂನ ಸಶಸ್ತ್ರ ಕಾರ್ಯಾಚರಣೆಗಳಿಂದ ಲಕ್ಷಾಂತರ ಆದಿವಾಸಿಗಳು ನೆಲೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ಎಂಬುದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಇಂತಹ ಅಂಶಗಳನ್ನು ಎತ್ತಿ ತೋರಿಸಿದ ಮಾಧ್ಯಮಗಳನ್ನು ಬೆದರಿಸುವ ಕ್ರಮಗಳು ನಡೆದಿದ್ದು, ಅದೂ ಸಹ ಖಂಡನಾರ್ಹ ವಿಷಯ.

ಹಾಡುಗಳ ತರಬೇತಿ....ಆಟೋ ಚಾಲಕರ ಹೋರಾಟ ಇತ್ಯಾದಿ

ವಿಟ್ಲ ಪರಿಸರದ ಎಲ್ಲ ರಸ್ತೆಗಳೂ ಸಂಪೂರ್ಣ ಹದಗೆಟ್ಟಿದ್ದು, ವಾಹನ ಹಾಗೂ ನಾಗರೀಕರಿಗೆ ಸಂಚರಿಸಲು ತೊಂದರೆಯಾಗಿರುವ ಹಿನ್ನೆಲೆಯಲ್ಲಿ ರಸ್ತೆ ದುರಸ್ತಿಗೆ ಆಗ್ರಹಿಸಿ ವಿಟ್ಲ ವಲಯದ ಆಟೋರಿಕ್ಷಾ ಚಾಲಕರ ಸಂಘ ಸಿಐಟಿಯು ವತಿಯಿಂದ ಜನವರಿ 7 ರಂದು ವಿಟ್ಲದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಲಾಯಿತು. ಆಟೋರಿಕ್ಷಾ ಚಾಲಕರು ಮತ್ತು ನಾಗರಿಕರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಬಂಟ್ವಾಳ ತಾಲ್ಲೂಕು ಅಧ್ಯಕ್ಷ ಎ.ರಾಮಣ್ಣ ಹಾಗೂ ಆಟೋರಿಕ್ಷಾ ಚಾಲಕರ ಸಂಘಗಳ ಜಿಲ್ಲಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಲ್.ಟಿ.ಸುವರ್ಣ ಮಾತನಾಡಿದರು. ಪ್ರತಿಭಟನಾ ಸ್ಥಳಕ್ಕೆ ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ ಭೇಟಿ ನೀಡಿ ಮನವಿ ಸ್ವೀಕರಿಸಿ, ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಯಿತು. ಬಳಿಕ ನಾಡ ಕಚೇರಿಯ ಉಪತಹಶೀಲ್ದಾರರ ಮುಖಾಂತರ ಲೋಕೋಪಯೋಗಿ ಸಚಿವರಿಗೆ ಮನವಿ ಸಲ್ಲಿಸಲಾಯಿತು.


ಸಿಐಟಿಯು ತಾಲ್ಲೂಕು ಸಮಿತಿ ಕಾರ್ಯದರ್ಶಿ ಸಂಜೀವ ಬಂಗೇರ, ರೈತಸಂಘದ ಮುಖಂಡ ವೈ.ಕೆ.ನಾರಾಯಣ, ಆಟೋ ಚಾಲಕರ ಸಂಘದ ಬಾಲಕೃಷ್ಣ, ಸಿ.ಎಚ್. ಹಾರಿಸ್, ದಾಮೋದರ, ವಿಠಲ, ಲೋಕೇಶ್ ರೈ, ತಾರಾನಾಥ, ಜನಾರ್ದನ, ರಮೇಶ್, ನಝೀರ್, ಲೋಕೇಶ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹೋರಾಟದಿಂದ ಹೋರಾಟಕ್ಕೆ ಆಟೋಚಾಲಕರಿಗೆ ಜನಬೆಂಬಲ ಹೆಚ್ಚುತ್ತಿರುವುದು ಕಂಡುಬರುತ್ತಿದೆ.

★

ಪಿಚ್ಚಳ್ಳಿ ಶ್ರೀನಿವಾಸರಿಂದ ಹಾಡುಗಳ ತರಬೇತಿ ಕಮ್ಮಟ ಉದ್ಘಾಟನೆ

ಸಾಂಸ್ಕೃತಿಕ ಚಟುವಟಿಕೆಗಳು ಬೆಂಗಳೂರು ಕೇಂದ್ರಿತವಾಗಿ ರೂಪಿತವಾಗುತ್ತಿದೆ. ಬೆಂಗಳೂರಿನ ಹೊರಗೆ ಎಷ್ಟೋ ಜನಪರ ಸಂಸ್ಕೃತಿ ಉಳಿದುಕೊಂಡುಬಂದಿದೆ. ಸಾಫ್ಟ್‌ವೇರ್ ಉದ್ಯಮಿಗಳು ಶಿಕ್ಷಣ ರಂಗದಲ್ಲಿ ತಲೆ ಹಾಕಿ ಸಾಂಪ್ರದಾಯಿಕ ಪದವಿ ಶಿಕ್ಷಣ ಹಾಗೂ ಪರೀಕ್ಷೆಗಳ ಅಗತ್ಯವಿಲ್ಲ ಎಂದು ಸರ್ಕಾರಕ್ಕೆ ಶಿಫಾರಸು ಮಾಡುತ್ತಿದ್ದಾರೆ. ಆದರೆ ಜನಪರ ಕಲಾ ಪ್ರತಿಭೆಗಳು ಹೆಚ್ಚಾಗಿ ಮೂಡಿಬಂದದ್ದೇ ಈ ಸಾಮಾಜಿಕ ವಿಜ್ಞಾನಗಳ ಪದವಿ ತರಗತಿಗಳ ಮೂಲಕ. ಅಲ್ಲದೆ ಸೆಮಿಸ್ಟರ್ ಪರೀಕ್ಷೆ ದಾಪುಗಾಲಿಟ್ಟ ಬಳಿಕ ವಿದ್ಯಾರ್ಥಿಗಳಲ್ಲಿ ಹೆಚ್ಚು ಕಡಿಮೆ ಸಾಂಸ್ಕೃತಿಕ ಚಟುವಟಿಕೆಗಳು ಕ್ಷೀಣವಾಗಿವೆ. ಇದರ ಹಿಂದೆ ಜನವಿರೋಧಿ ಶಕ್ತಿಗಳ ಹುನ್ನಾರ ಇದೆಯೋ ಎಂಬ ಸಂಶಯ ಕಾಡುತ್ತಿದೆ ಎಂಬುದಾಗಿ ಖ್ಯಾತ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ನುಡಿದರು.

ಪಿಚ್ಚಳ್ಳಿ ಅವರು ಜನವರಿ 9 ಮತ್ತು 10 ರಂದು ಮಂಗಳೂರಿನಲ್ಲಿ ಸಮುದಾಯ ಮಂಗಳೂರು ಮತ್ತು ವಿಮಾ ನೌಕರರ ಸಂಘ ಉಡುಪಿ ವಿಭಾಗದ ಸಂಯುಕ್ತ ಭಾಗಿತ್ವದಲ್ಲಿ ಸಂಗಾತಿ ಕೆ.ನಾಗೇಶ್‌ಕುಮಾರ್ ನೆನಪಿನ 'ಜನಪರ ಗೀತೆಗಳ ಗಾಯನ ತರಬೇತಿ ಕಮ್ಮಟ'ವನ್ನು ಹಾಡು, ಮಾತುಗಳ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.




ವಾ.ಉ.

ಆಧುನಿಕರು ರಚಿಸಿದ ಹೋರಾಟದ ಹಾಡುಗಳಷ್ಟೇ ಜನರ ಚಳುವಳಿಗೆ ಸಾಕಾಗದು. ನಮ್ಮ ಜನಪದ, ವಚನ, ದಾಸಪದ, ಸೂಫಿ ಸಾಹಿತ್ಯಗಳಲ್ಲಿ ಬೇಕಾದಷ್ಟು ಜನಪರ ಆಶಯಗಳಿವೆ. ಅವುಗಳನ್ನು ಸಂಶೋಧಿಸಿ ಹೊರತಂದು ಪುರೋಗಾಮಿ ಚಟುವಟಿಕೆಗಳಲ್ಲಿ ಬಳಸುವ ಪ್ರಯತ್ನ ಮಾಡಬೇಕು. ಜಾಗತೀಕರಣ ಹಲವು ರೀತಿಯಲ್ಲಿ ನಮ್ಮ ಅಸ್ತಿತ್ವದ ಮೇಲೆ ದಾಳಿ ಮಾಡುತ್ತಿದೆ. ಇದಕ್ಕೆ ಪ್ರತಿಯಾಗಿ ಜನಸಂಸ್ಕೃತಿಯನ್ನು ಹಾಡು, ನೃತ್ಯ, ನಾಟಕಗಳ ಮೂಲಕ ಕಟ್ಟಬೇಕಾಗಿದೆ ಎಂದು ಪಿಚ್ಚಳ್ಳಿ ಶ್ರೀನಿವಾಸ್ ಹೇಳಿದರು.

ಎರಡು ದಿನಗಳ ಕಾಲ ನಡೆದ ಹಾಡುಗಳ ತರಬೇತಿಯಲ್ಲಿ 35 ಮಂದಿ ಶಿಕ್ಷಣಾರ್ಥಿಗಳಾಗಿ ಭಾಗವಹಿಸಿದ್ದು, ಕರಾವಳಿಯ ಖ್ಯಾತ ಸಮುದಾಯ ಗಾಯಕ ಮೈಮ್ ರಾಮದಾಸ್ ಅವರು ಕಮ್ಮಟವನ್ನು ನಿರ್ದೇಶಿಸಿದರು. ಅವರಿಗೆ ಸಹಾಯಕರಾಗಿ ಕೃಷ್ಣಯ್ಯ ಲಾಯಿಲ ಸಹಕರಿಸಿದರಲ್ಲದೆ, ಸಂಪನ್ಮೂಲ ವ್ಯಕ್ತಿಗಳಾಗಿ ಪಿ.ಕೆ. ಬೋಳುವಾರು, ಐವಾನ್ ಡಿಸಿಲ್ವಾ, ಭಾಸ್ಕರ ನೆಲ್ಲಿತೀರ್ಥ ಸಹಕರಿಸಿದರು.

ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿದ್ದ ಚಿಂತಕ ಆದಮಾರು ಶ್ರೀಪತಿ ಆಚಾರ್ಯ ಅವರು ವಿಮಾನೌಕರರ ಸಂಘದ ಹಾಗೂ ಸಮುದಾಯದ ಪ್ರಮುಖ ಕಾರ್ಯಕರ್ತರಾಗಿದ್ದು, ಕಳೆದ ವರ್ಷದ 'ಹಸಿವು ಮುಕ್ತ ಕರ್ನಾಟಕಕ್ಕಾಗಿ ಸಮುದಾಯದ ಜಾಥಾ'ದಲ್ಲಿ ಅಹರ್ನಿಶಿ ಪಾಲ್ಗೊಂಡು ಮತ್ತೆ ಎರಡೇ ದಿನಕ್ಕೆ ಅಸ್ತಂಗತರಾದ ದಿ.ನಾಗೇಶ್‌ಕುಮಾರರು ಸಮಾಜಕ್ಕೆ ನೀಡಿದ ಕೊಡುಗೆಯ ಸ್ಮರಣೆ ಮಾಡಿ ಮಾತನಾಡಿದರು. ಸಭಾ ಕಾರ್ಯಕ್ರಮಗಳಲ್ಲಿ ವಿಮಾನೌಕರರ ಸಂಘದ ಅಧ್ಯಕ್ಷ ಬಿ.ಪ್ರಭಾಕರ ಕುಂದರ್, ಕಾರ್ಯದರ್ಶಿ ಯು.ಗುರುದತ್, ಸಮುದಾಯ ಮುಖಂಡರಾದ ಪ್ರೊ.ಕೆ. ರಾಜೇಂದ್ರ ಉಡುಪ, ವಾಸುದೇವ ಉಚ್ಚಿಲ್, ಹೆಚ್.ಕೆ.ರಾಘವೇಂದ್ರರಾವ್, ಸಂಜೀವ ಬಳ್ಕೂರು ಭಾಗವಹಿಸಿದ್ದರು. ಸಮಾರೋಪ ಸಮಾರಂಭದ ಬಳಿಕ ಶಿಕ್ಷಣಾರ್ಥಿಗಳು ಹಾಡುವ ಪ್ರದರ್ಶನ ನೀಡಿದರು. ಈ ಕಾರ್ಯಕ್ರಮದಲ್ಲಿ ಮಂಗಳೂರು ಅಲ್ಲದೆ ಉಡುಪಿ, ಮೂಲ್ಕಿ ಮೊದಲಾದೆಡೆಗಳಿಂದಲೂ ವಿಮಾನೌಕರ ಸಂಗಾತಿಗಳು ಭಾಗವಹಿಸಿದ್ದರು.



★

ಪುತ್ತೂರಿನಲ್ಲಿ ಬಲಗೊಳ್ಳುತ್ತಿರುವ ಆಟೋ ಚಾಲಕರ ಸಂಘಟನೆ

ಮಂಗಳೂರಿನ ಆಟೋ ಚಾಲಕರ ಸಂಘದ ಹೋರಾಟದ ಬಳಿಕ ಆಟೋ ದರದಲ್ಲಿ ಹೆಚ್ಚಳವಾಗಿದ್ದು, ಕರಾವಳಿಯ ಹಲವು ಊರುಗಳಲ್ಲಿ ಸಿಐಟಿಯು ಸಂಯೋಜಿತ ಫೆಡರೇಷನ್ ಆಫ್ ಕರ್ನಾಟಕ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಕಡೆಗೆ ಆಟೋರಿಕ್ಷಾ ಚಾಲಕರು ಆಸಕ್ತರಾಗುತ್ತಿದ್ದಾರೆ. ಜನವರಿ 11 ರಂದು ಪುತ್ತೂರಿನಲ್ಲಿ ಸೇರಿದ ವಲಯ ಸಮಿತಿಯ ವಾರ್ಷಿಕ ಮಹಾಸಭೆಯಲ್ಲಿ ಉತ್ಸುಕತೆ ವ್ಯಕ್ತವಾಗುತ್ತಿತ್ತು.

ದಕ್ಷಿಣ ಕನ್ನಡ ಜಿಲ್ಲಾ ಆಟೋ ಚಾಲಕರ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯವರಾದ ಎಲ್.ಜಿ.ಸುವರ್ಣ ಮಹಾಸಭೆಯನ್ನು ಉದ್ಘಾಟಿಸಿದರು. ಸಿಐಟಿಯು ಬೆಳ್ತಂಗಡಿ ತಾಲ್ಲೂಕು ಮುಖಂಡ ಬಿ.ಎಂ.ಭಟ್, ಪುತ್ತೂರು ಆಟೋ ಚಾಲಕರ ಸಂಘದ ಗೌರವಾಧ್ಯಕ್ಷರಾದ ನ್ಯಾಯವಾದಿ ಪಿ.ಕೆ.ಸತೀಶನ್, ವಿಟ್ಲ ವಲಯದ ಸಂಘದ ಗೌರವಾಧ್ಯಕ್ಷರಾದ ರಾಮಣ್ಣ ವಿಟ್ಲ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೋನಪ್ಪ ಪುತ್ತೂರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಆಟೋರಿಕ್ಷಾ ಚಾಲಕರಿಗೆ ಕಲ್ಯಾಣ ಮಂಡಳಿ ರಚನೆಯಾಗಬೇಕು. ಮೊದಲಾದ ಬೇಡಿಕೆಗಳನ್ನು ಒತ್ತಾಯಿಸಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ರಾಜ್ಯಸಂಘ ನೀಡಿದ ಕರೆಯ ಮೇರೆಗೆ ಜನವರಿ 20 ರಂದು ಪುತ್ತೂರು ವಲಯದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಬೇಕೆಂದು ನಿರ್ಣಯಿಸಲಾಯಿತು.

ಮಹಾಸಭೆಯ ಮುಂದಿನ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಿದ್ದು, ಮೇದಪ್ಪ ಅಧ್ಯಕ್ಷರಾಗಿಯೂ ಕೇಶವ ಮೊಟ್ಟೆತಡ್ಕ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುತ್ತಾರೆ. ಶ್ರೀನಿವಾಸ ಧನ್ಯವಾದ ಅರ್ಪಿಸಿದರು.

ದ.ಕ. ಜಿಲ್ಲೆಯಲ್ಲಿ ಮೂರು ಜಿ.ಪಂ. ಕ್ಷೇತ್ರಗಳಲ್ಲಿ ಸಿಪಿಎಂ ಸ್ಪರ್ಧಿಸಿ ಪಡೆದ ಮತಗಳ ವಿವರ

ಕೋಟೆಕಾರು	
ಬಿಜೆಪಿ	9518
ಕಾಂಗ್ರೆಸ್	7119
ಸಿಪಿಎಂ	1331
ಧರ್ಮಸ್ಥಳ	
ಬಿಜೆಪಿ	9233
ಕಾಂಗ್ರೆಸ್	7858
ಸಿಪಿಎಂ	2360
ಕಡಬ	
ಬಿಜೆಪಿ	9331
ಕಾಂಗ್ರೆಸ್	9463
ಸಿಪಿಎಂ	905

ಜಿಲ್ಲೆಯ ಮಂಗಳೂರು ಹಾಗೂ ಬೆಳ್ತಂಗಡಿ ತಾ.ಪಂ.ಗೆ ಸೇರಿದ 12 ತಾಲೂಕು ಪಂಚಾಯತ್ ಕ್ಷೇತ್ರಗಳಲ್ಲಿ ಸಿಪಿಎಂ ಪಡೆದ ಮತಗಳ ವಿವರ.

ಹೊಸಬೆಟ್ಟು (ಮಂ. ತಾ.ಪಂ)	
ಬಿಜೆಪಿ	2282
ಕಾಂಗ್ರೆಸ್	2361
ಸಿಪಿಎಂ	928
ಕುಪ್ಪೆಪದವು (ಮಂ. ತಾ.ಪಂ)	
ಬಿಜೆಪಿ	2929
ಕಾಂಗ್ರೆಸ್	2586
ಸಿಪಿಎಂ	1194
ಹರೇಕಳ (ಮಂ. ತಾ.ಪಂ)	
ಬಿಜೆಪಿ	1323
ಕಾಂಗ್ರೆಸ್	2288
ಸಿಪಿಎಂ	1092
ಮುನ್ನೂರು (ಮಂ. ತಾ.ಪಂ)	
ಬಿಜೆಪಿ	1111
ಕಾಂಗ್ರೆಸ್	1299
ಸಿಪಿಎಂ	1016
ಕೋಟೆಕಾರ್ (ಮಂ. ತಾ.ಪಂ)	
ಬಿಜೆಪಿ	2174
ಕಾಂಗ್ರೆಸ್	1676
ಸಿಪಿಎಂ	224
ಸೋಮೇಶ್ವರ-1 (ಮಂ. ತಾ.ಪಂ)	
ಬಿಜೆಪಿ	2894
ಕಾಂಗ್ರೆಸ್	1841
ಸಿಪಿಎಂ	712
ಸೋಮೇಶ್ವರ-2 (ಮಂ. ತಾ.ಪಂ)	
ಬಿಜೆಪಿ	2109
ಕಾಂಗ್ರೆಸ್	1409
ಸಿಪಿಎಂ	136
ಪಕ್ಷೇತರ	327
ಅಳದಂಗಡಿ (ಬೆಳ್ತಂಗಡಿ ತಾ.ಪಂ)	
ಬಿಜೆಪಿ	1578
ಕಾಂಗ್ರೆಸ್	1539
ಸಿಪಿಎಂ	265
ಪಕ್ಷೇತರ	258
ಲಾಯಿಲ (ಬೆಳ್ತಂಗಡಿ ತಾ.ಪಂ)	
ಬಿಜೆಪಿ	1346
ಕಾಂಗ್ರೆಸ್	1319
ಸಿಪಿಎಂ	154
ಜೆಡಿಎಸ್	431
ಧರ್ಮಸ್ಥಳ (ಬೆಳ್ತಂಗಡಿ ತಾ.ಪಂ)	
ಬಿಜೆಪಿ	2668
ಕಾಂಗ್ರೆಸ್	2554
ಸಿಪಿಎಂ	176
ಪಕ್ಷೇತರ	122
ಕೊಕ್ಕಡ (ಬೆಳ್ತಂಗಡಿ ತಾ.ಪಂ)	
ಬಿಜೆಪಿ	2508
ಕಾಂಗ್ರೆಸ್	1723
ಸಿಪಿಎಂ	748
ಕಳಂಜ (ಬೆಳ್ತಂಗಡಿ ತಾ.ಪಂ)	
ಬಿಜೆಪಿ	1415
ಕಾಂಗ್ರೆಸ್	978
ಸಿಪಿಎಂ	505
ಜೆಡಿಎಸ್	768

ಪಿಡಿ ಸಂಪಾದಕೀಯ

ಆರಂಭದಲ್ಲಿ ಸಕ್ಕರೆಗೇನಾಯಿತೋ, ಅದೀಗ 2011ರ ಆರಂಭದಲ್ಲಿ ಈರುಳ್ಳಿಗಾಗುತ್ತಿದೆ. ರಫ್ತು ಉತ್ತೇಜಕಗಳ ಪ್ರಯೋಜನ ಪಡೆದ ವ್ಯಾಪಾರಸ್ಥರೇ ಈ ಬಾರಿ ಕೂಡ ಸುಂಕ-ಮುಕ್ತ ಆಮದುಗಳ ಪ್ರಯೋಜನ ಪಡೆಯುತ್ತಿದ್ದಾರೆ. ಬೆಲೆಗಳು ಮಾತ್ರ ಇಳಿದಿಲ್ಲ. ಅವು ನಾಗಾಲೋಟ ಹೂಡುವಂತೆ ಮಾಡಿರುವ ಕಾರಣಗಳ ವೈಜ್ಞಾನಿಕ ವಿಶ್ಲೇಷಣೆಯ ಆಧಾರದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಸಾಮೂಹಿಕ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಕೇಂದ್ರ ಸಂಪುಟ ಶೋಚನೀಯವಾಗಿ ವಿಫಲಗೊಂಡಿದ್ದಷ್ಟೇ ಅಲ್ಲ, ಅದಕ್ಕೆ ಕಾರಣಗಳನ್ನು ಗ್ರಹಿಸಲಾರದೆ ಸಂಪೂರ್ಣ ಕಕ್ಕಾಬಿಕ್ಕಿಯಾಗಿ ನಿಂತಿದೆ.

ಬೆಲೆ ನಿಯಂತ್ರಣ : ಯುಪಿಎ ಪೂರ್ಣ ವಿಫಲ

ಈ ಯುಪಿಎ-2 ಸರಕಾರದ್ದು ವಿಲಕ್ಷಣ ಆಡಳಿತ ಪರಿ. ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲಿ ನಿರಂತರ ಹೆಚ್ಚಳದ ಆತಂಕಕಾರಿ ಸನ್ನಿವೇಶದಲ್ಲಿ ಸಭೆ ಸೇರಿದ್ದ ಕೇಂದ್ರ ಸಂಪುಟದಿಂದ ಬಹಳಷ್ಟು ನಿರೀಕ್ಷೆಯಿತ್ತು. ಮೇಲೇರಿ ಬರುತ್ತಿರುವ ಈ ದಾಳಿಗೆ ತುತ್ತಾಗಿ ಗೋಳಿಡುತ್ತಿರುವ ಜನಗಳಿಗೆ ಪರಿಹಾರ ಒದಗಿಸುವ ಕೆಲವು ನಿರ್ದಿಷ್ಟ ಕ್ರಮಗಳನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆಯಿತ್ತು. ಅಂತದ್ದೇನೂ ಆಗಿಲ್ಲ. ಬದಲಿಗೆ ಬೇರೆಯವರತ್ತ ಬೆರಳು ತೋರಿಸಿ ನುಣುಚಿಕೊಳ್ಳುವ ಕಸರತ್ತು ನಡೆಯಿತು ಎಂಬಂತಹ ಸೂಚನೆ ಮಾಧ್ಯಮಗಳಲ್ಲಿ ದೊರೆತಿದೆ. ಬಹಳ ಪ್ರಚಾರದಲ್ಲಿರುವ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಈ ಬೆಲೆಯೇರಿಕೆ ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಲ್ಲಿ ಒಂದು ಸಮಿಶ್ರ ಸರಕಾರದ 'ನಿರ್ಬಂಧ'ಗಳು ಅಡ್ಡಿಯಾಗಿವೆ ಎಂದು ಸೂಚಿಸಿದ್ದಾರೆ. ಎನ್.ಸಿ.ಪಿ. ವಕ್ತಾರ ಇಟಲಿಯಲ್ಲಿ ಯಶಸ್ವಿ ಸಮಿಶ್ರ ಸರಕಾರ ನಡೆಯುತ್ತಿದೆ ಎಂದು ತಕ್ಷಣವೇ ಮರುಸವಾಲು ಹಾಕಿದ್ದಾರೆ! ಅವರ ಮುಖ್ಯಸ್ಥರೇ ಕೃಷಿ ಮಂತ್ರಿಗಳು ತಾನೇ!

ನಿಜಕ್ಕೂ, ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಲಭ್ಯತೆಯ ಮೇಲೆ ಪ್ರಭಾವ ಬೀರುವ ನಿರ್ಣಯಗಳ ಹೊಣೆ ಕೃಷಿ ಇಲಾಖೆಯದ್ದು. ಆದರೆ ಹಣಕಾಸು, ವಾಣಿಜ್ಯ ಮುಂತಾದ ಇತರ ಇಲಾಖೆಗಳ ನಿರ್ಣಯಗಳೂ ಬೆಲೆಗಳ ಮೇಲೆ ಪ್ರಭಾವ ಬೀರುತ್ತವೆ. ಹಣಕಾಸು ಇಲಾಖೆ, ರಿಜರ್ವ್ ಬ್ಯಾಂಕ್ ಜತೆಗೂಡಿ ಹಣಕಾಸು ಕ್ರಮಗಳ ಮೂಲಕ ಎಷ್ಟು ಹಣ ಸದ್ಯಕ್ಕೆ ಚಲಾವಣೆಯಲ್ಲಿ ಇರಬೇಕು ಎಂದು ನಿರ್ಧರಿಸುತ್ತದೆ. ವಾಣಿಜ್ಯ ಇಲಾಖೆಯ ಆಮದು-ರಫ್ತು ಧೋರಣೆ ಆಂತರಿಕ ಮಾರುಕಟ್ಟೆಯಲ್ಲಿ ಸರಕುಗಳ ಲಭ್ಯತೆಯ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಬೆಲೆಗಳು ನಾಗಾಲೋಟ ಹೂಡುವಂತೆ ಮಾಡಿರುವ ಕಾರಣಗಳ ವೈಜ್ಞಾನಿಕ ವಿಶ್ಲೇಷಣೆಯ ಆಧಾರದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಕೇಂದ್ರ ಸಂಪುಟದ ಸಾಮೂಹಿಕ ಜವಾಬ್ದಾರಿ. ಈ ಸಾಮೂಹಿಕ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಕೇಂದ್ರ ಸಂಪುಟ ಶೋಚನೀಯವಾಗಿ ವಿಫಲಗೊಂಡಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ, ಅದು ಕಾರಣಗಳನ್ನು ಗ್ರಹಿಸಲಾರದೆ ಸಂಪೂರ್ಣ ಕಕ್ಕಾಬಿಕ್ಕಿಯಾಗಿ ನಿಂತಿದೆ.

ಇನ್ನೊಂದು ಹಗರಣ.......?

ಪೂರೈಕೆ ಮತ್ತು ಬೇಡಿಕೆಯಲ್ಲಿ ತಾಳ-ಮೇಳ ಇಲ್ಲದಿರುವುದು ಈಗಿನ ಬೆಲೆಯೇರಿಕೆಗೆ ಕಾರಣ ಎಂದು ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ. ದಿಲ್ಲಿಯ ಈರುಳ್ಳಿ ಬೆಲೆಗಳನ್ನೇ ನೋಡಿ. ಅದರ ಬೆಲೆ ದುಪ್ಪಟ್ಟು ಆಗಿರುವುದರಿಂದ ಆತಂಕಗೊಂಡು ಆಜಾದ್‌ಪುರ ಮಂಡಿಯಲ್ಲಿ ಡಿಸೆಂಬರ್ 20, 2010ರಂದು 730 ಟನ್ ಇದ್ದ ಈರುಳ್ಳಿ ಪೂರೈಕೆಯನ್ನು ಮರುದಿನ, ಡಿಸೆಂಬರ್ 21ರಂದು 1144 ಟನ್‌ಗೇರಿಸಲಾಯಿತು. ಇದರಿಂದ ಸಗಟು ಬೆಲೆ 55ರೂ.ನಿಂದ 50ರೂ.ಗೆ ಇಳಿಯಿತು. ಆದರೆ ಚಿಲ್ಲರೆ ಬೆಲೆ 75ರೂ.ನಿಂದ 80ರೂ.ಗೆ ಏರಿತು. ಅಂದರೆ ಇಲ್ಲಿ ಪೂರೈಕೆ-ಬೇಡಿಕೆ ವಿಷಮತೆಗಿಂತಲೂ ಬೇರೆಯೇನೋ ಇದೆ ಎಂಬುದು ಸ್ಪಷ್ಟ.

2010ರ ಕೊನೆಯ ಒಂಭತ್ತು ತಿಂಗಳಲ್ಲಿ ತರಕಾರಿಗಳ ಸಗಟು ಬೆಲೆ ಸೂಚ್ಯಂಕದಲ್ಲಿ ಶೇ. 67 ಹೆಚ್ಚಳವಾಗಿದೆ. ಚಿಲ್ಲರೆ ಬೆಲೆಗಳು ಇನ್ನಷ್ಟು ಎತ್ತರಕ್ಕೆ ಏರಿದವು, ಎಷ್ಟೆಂದರೆ ಈರುಳ್ಳಿಗಿಂತ ಕೋಳಿ ಮಾಂಸ ಅಗ್ಗವಾಗಿ ಕಂಡು ಬಂತು! ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ, ಜನ ಬ್ರೆಡ್ ಇಲ್ಲದಿದ್ದರೆ ಕೇಕ್ ತಿನ್ನಬಾರದೇಕೆ ಎಂದು ಕೂಗಾಡಿದ ಮೇರಿ ಅಂತೊಯ್ನೆತ್, ಈಗ ಭಾರತದಲ್ಲಿದ್ದರೆ ಸಂತೋಷ ಪಡುತ್ತಿದ್ದಳು!

2010ರ ಆರಂಭದಲ್ಲಿ ಸಕ್ಕರೆಗೇನಾಯಿತೋ, ಅದೀಗ 2011ರ ಆರಂಭದಲ್ಲಿ ಈರುಳ್ಳಿಗಾಗುತ್ತಿದೆ. ಈ ಸರಕುಗಳ ಪೂರೈಕೆಯಲ್ಲಿ ಕೊರತೆ ಉಂಟಾಗಬಹುದು ಎಂಬ ಎಚ್ಚರಿಕೆಯ ಮಾತುಗಳು ಕೇಳಬಂದಿದ್ದರೂ, ರಫ್ತುಗಳಿಗೆ ಉತ್ತೇಜಕಗಳನ್ನು ಕೊಟ್ಟು ಪ್ರೋತ್ಸಾಹಿಸಲಾಯಿತು. ಬೆಲೆಗಳು ಏರಲಾರಂಭಿಸಿದಾಗ, ರಫ್ತುಗಳನ್ನು ನಿಷೇಧಿಸಿ, ಆಮದುಗಳ ಮೇಲಿನ ಎಲ್ಲಾ ಸುಂಕಗಳನ್ನು ತೆಗೆದು ಅವಕ್ಕೆ ಪ್ರೋತ್ಸಾಹ ಕೊಡಲಾಗಿದೆ. ಆದರೂ ಏರಿದ ಬೆಲೆಗಳು ಇಳಿಯಲೇ ಇಲ್ಲ. ರಫ್ತು ಉತ್ತೇಜಕಗಳ ಪ್ರಯೋಜನ ಪಡೆದ ವ್ಯಾಪಾರಸ್ಥರೇ ಈಗ ಸುಂಕ-ಮುಕ್ತ ಆಮದುಗಳ ಪ್ರಯೋಜನ ಪಡೆಯಲಾರಂಭಿಸಿದರು. ಇವೆಲ್ಲ ಈ ಸರಕಾರದ ವಿಲಕ್ಷಣ ಪರಿಗಳೋ ಅಥವಾ ಇನ್ನೊಂದು ಹಗರಣ ಅನಾವರಣಗೊಳ್ಳುತ್ತಿದೆಯೇ?

2010ರ ಈ ಕಳೆದ 9 ತಿಂಗಳಲ್ಲೇ ದೇಶದಲ್ಲಿ ಸರಕು ವಿನಿಮಯಗಳಲ್ಲಿ ವ್ಯಾಪಾರದ ಒಟ್ಟು ಮೌಲ್ಯದಲ್ಲಿ ಶೇ. 51.37 ಏರಿಕೆಯಾಗಿ ಅದು 78ಲಕ್ಷ ಕೋಟಿ ರೂ.ಗಳನ್ನೂ ದಾಟಿದೆ. ಮುಂಗಡ/ವಾಯಿದಾ ಮಾರುಕಟ್ಟೆಗಳಲ್ಲಿ ವ್ಯಾಪಾರದ ಮೌಲ್ಯ ಹೆಚ್ಚಿದೆಯೆಂದರೆ ಅದು ಹೆಚ್ಚು ಲಾಭದಾಯಕವಾಗುತ್ತಿದೆ ಎಂದೇ ಆಗುತ್ತದೆ. ಇಂತಹ ಜೂಜುಕೋರ ವ್ಯಾಪಾರವೇ ಎಲ್ಲಾ ಜೀವನಾವಶ್ಯಕ ಸರಕುಗಳ, ಅದರಲ್ಲೂ ಆಹಾರ ಸರಕುಗಳ ಬೆಲೆಗಳನ್ನು ನಿರಂತರವಾಗಿ ಮೇಲೊತ್ತುತ್ತಿವೆ ಎಂಬುದನ್ನೀಗ ಅಂತರ್‍ರಾಷ್ಟ್ರೀಯವಾಗಿಯೂ ಮಾನ್ಯ ಮಾಡಲಾಗುತ್ತಿದೆ. ಎಡಪಕ್ಷಗಳು ಸತತವಾಗಿ, ಈ ಜೂಜುಕೋರ ವ್ಯಾಪಾರವನ್ನು ನಿಷೇಧಿಸಿ ಎಂದು ಆಗ್ರಹಿಸುತ್ತಿದ್ದರೂ ಈ ಯುಪಿಎ-2 ಸರಕಾರ ಹಾಗೆ ಮಾಡಲು ನಿರಾಕರಿಸುತ್ತಿದೆ.



ಬಿಪಿಎಲ್‌ಗೆ ಇನ್ನೆಷ್ಟು ಕೋಟಿ ಸೇರ್ಪಡೆ !

ಇಂತಹ ಜೂಜುಕೋರ ವ್ಯಾಪಾರವನ್ನು ನಿಷೇಧಿಸದಿದ್ದರೆ, ಕೇಂದ್ರ ಸರಕಾರದ ಗೋದಾಮುಗಳಲ್ಲಿ ಕೊಳೆಯುತ್ತಿರುವ ಆಹಾರಧಾನ್ಯಗಳ ಹೆಚ್ಚುವರಿ ದಾಸ್ತಾನನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಮಾರಾಟಕ್ಕೆ ರಾಜ್ಯಗಳಿಗೆ ಬಿಡುಗಡೆ ಮಾಡದಿದ್ದರೆ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಬಜೆಟುಗಳ ಮೂಲಕ ಏರಿಸಿರುವುದನ್ನು ಹಿಂತೆಗೆದುಕೊಳ್ಳದಿದ್ದರೆ 'ಆಮ್ ಆದ್ಮಿ'ಗೆ ಯಾವುದೇ ಪರಿಹಾರ ಸಿಗಲಾರದು.

ಬೇರೆ ಸಂಗತಿಗಳಲ್ಲೂ ಈ ಸರಕಾರದ ವಿಲಕ್ಷಣ ವಿಧಾನಗಳನ್ನು ಕಾಣಬಹುದು. ತನ್ನ ಹಿಂದಿನ ಖಾತೆಯೊಡನೇ ದೂರಸಂಪರ್ಕ ಇಲಾಖೆಯನ್ನೂ ನೋಡಿಕೊಳ್ಳುತ್ತಿರುವ ಹೊಸ ದೂರಸಂಪರ್ಕ ಮಂತ್ರಿಗಳು 2ಜಿ ತರಂಗಾಂತರ ಮಾರಾಟದಲ್ಲಿ ಬೊಕ್ಕಸಕ್ಕೆ 1.76 ಲಕ್ಷ ಕೋಟಿ ರೂ.ಗಳಷ್ಟು ನಷ್ಟ ಸಂಭವಿಸಿದೆ ಎಂಬ ಸಿಎಜಿ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಸಿಎಜಿ ವರದಿ ಆಧಾರಹೀನವಾಗಿದ್ದರೆ ಎ.ರಾಜ ಕೇಂದ್ರ ಸಂಪುಟದಿಂದ ರಾಜೀನಾಮೆ ಕೊಟ್ಟದ್ದಾದರೂ ಏಕೆ? ಇಲ್ಲಿರುವ ಪ್ರಶ್ನೆ ಲೆಕ್ಕಾಚಾರದಲ್ಲಿ ಏನು ತಪ್ಪಾಗಿದೆಂದು ಹುಡುಕುವುದಲ್ಲ. 2ಜಿ ಲೈಸೆನ್ಸ್ ಪಡೆದ ಕನಿಷ್ಠ ಎರಡು ಕಂಪನಿಗಳು ತಮ್ಮ ಶೇರುಗಳ ಒಂದು ಭಾಗವನ್ನು ಅಂತರ್‍ರಾಷ್ಟ್ರೀಯ ಟೆಲಿಕಾಂ ಕಂಪನಿಗಳಿಗೆ 10 ರಿಂದ 12 ಪಟ್ಟು ಹೆಚ್ಚು ಬೆಲೆಗಳಿಗೆ ಮಾರಿದ್ದಾರೆ ಎಂಬ ಸಂಗತಿಯೇ ಇಲ್ಲಿ ಒಂದು ಬೃಹತ್ ಸ್ವರೂಪದ ಹಗರಣ ಇದೆ ಎಂಬುದಕ್ಕೆ ಪುರಾವೆ ಒದಗಿಸಿದೆ. ಹಗರಣ ಇರುವುದು ಲೈಸೆನ್ಸ್‌ಗಳನ್ನು 30 ಕೋಟಿ ಮೊಬೈಲ್ ಸಂಪರ್ಕಗಳಿದ್ದ 2008ರಲ್ಲಿ ಕೇವಲ 40ಲಕ್ಷ ಮೊಬೈಲ್ ಸಂಪರ್ಕ ಇದ್ದ 2001ರ ಬೆಲೆಗಳಲ್ಲಿ ಮಾರಲಾಗಿದೆ ಎಂಬ ಸಂಗತಿಯಲ್ಲಿಯೇ.

ಯುಪಿಎ-2 ಸರಕಾರದ ಮೇಲೆ, ಇನ್ನೂ ಹಲವು ಕೋಟಿ ಜನಗಳನ್ನು ಬಡತನದ ರೇಖೆಯ ಕೆಳಗಿನ ಬದುಕಿಗೆ ನೂಕುತ್ತಿರುವ ಬೆಲೆಗಳ ಅವಿರತ ಏರಿಕೆಯನ್ನು ತಡೆಯಲು ಮೇಲೆ ಹೇಳಿದ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಯಾವ ರೀತಿಗಳಲ್ಲಿ ದೇಶದ ಸಂಪನ್ಮೂಲಗಳ ಅಗಾಧ ಲೂಟಿ ನಡೆಯುತ್ತಿದೆ ಎಂಬುದನ್ನು ತ್ವರಿತವಾಗಿ ಅನಾವರಣಗೊಳಿಸುವಂತೆ ಬಲವಂತವನ್ನು ತರಬೇಕಾಗಿದೆ. ಅಲ್ಲದೆ ಸರಕಾರ ಈ ನಷ್ಟವನ್ನು ಭರ್ತಿ ಮಾಡಿಸಿಕೊಂಡು ಆ ಅಪಾರ ಮೊತ್ತವನ್ನು ನಮ್ಮ ಜನತೆಗೆ ಬಹಳ ಅಗತ್ಯವಾಗಿರುವ ಆಹಾರ ಭದ್ರತೆಯನ್ನು, ಶಿಕ್ಷಣ ಮತ್ತು ಆರೋಗ್ಯವನ್ನು ಕೊಡಲು ಬಳಸುವಂತೆ ಒತ್ತಡ ತರಬೇಕಾಗಿದೆ.

ಜನರ ಬೆನ್ನು ಮೂಳೆ ಮುರಿಯುವಂತಹ ಭಾರಿ ಬೆಲೆ ಏರಿಕೆಗೆ ಕಾರಣವಾಗಿರುವ ತನ್ನ ನೀತಿಗಳನ್ನು ಬದಲಿಸಿಕೊಳ್ಳಲು ಕೇಂದ್ರ ಯುಪಿಎ ಸರ್ಕಾರ ಸಿದ್ಧವಿಲ್ಲ. ರಾಜ್ಯ ಬಿಜೆಪಿ ಸರ್ಕಾರದ ನೀತಿ ಇದಕ್ಕಿಂತ ಭಿನ್ನವಲ್ಲ.



ಬೆಲೆಯೇರಿಕೆಯ ಹೆಮ್ಮಾರಿ

ಭ್ರಷ್ಟ ಕಾಂಗ್ರೆಸ್-ದ್ರೋಹಿ ಬಿಜೆಪಿ ಜನತೆಯ ಮೇಲೆ ಸವಾರಿ

ಜಯ

ಬೆಲೆಯೇರಿಕೆ ಎಂಬ ಮಾರಿ ಜನತೆಯನ್ನು ಹೇಗೆ ಬಲಿತೆಗೆದುಕೊಳ್ಳುತ್ತಿದೆ ಎನ್ನುವುದಕ್ಕೆ ಪುರಾವೆಯಾಗಿ ವಿಶ್ವದಲ್ಲಿ ಈ ವರ್ಷ ಬೆಲೆಯೇರಿಕೆಯಿಂದಾಗಿ ಹಸಿವಿನಿಂದ ನರಳುತ್ತಿರುವವರ ಸಂಖ್ಯೆ 100 ಕೋಟಿ ಮೀರಿದೆ ಎಂದು ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ ವರದಿ ಮಾಡಿದೆ. ಇನ್ನು ನಮ್ಮ ದೇಶದಲ್ಲಿ ತರಕಾರಿ, ಹಣ್ಣು, ಮಾಂಸ ಮತ್ತು ಮೊಟ್ಟೆಗಳ ಮುಂಚೂಣಿಯಲ್ಲಿ ಏರುತ್ತಿರುವ ಬೆಲೆಯಿಂದಾಗಿ ಆಹಾರದ ಹಣದುಬ್ಬರ ಶೇ. 18.35 ರಷ್ಟು ಏರಿಕೆ ಕಂಡಿದೆ. ಏರುತ್ತಿರುವ ಆಹಾರ ಧಾನ್ಯಗಳು ಮತ್ತು ಇತರೆ ಅತ್ಯವಶ್ಯ ವಸ್ತುಗಳ ಬೆಲೆಗೆ ನೇರ ಹೊಣೆಯೆಂದರೆ ಕೇಂದ್ರದಲ್ಲಿ ಖಾಸಗಿ ಕಂಪನಿಗಳ ಪರ ನೀತಿ ಅನುಸರಿಸುತ್ತಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮತ್ತು ರಾಜ್ಯದ ಭ್ರಷ್ಟಾತಿಭ್ರಷ್ಟ ಬಿಜೆಪಿ ಸರ್ಕಾರಗಳ ಪರಮ ನೀಚ ನೀತಿಗಳು.



ಪೆಟ್ರೋಲಿಯಂನ್ನು ಬೆಲೆ ನಿಯಂತ್ರಣದಿಂದ ತೆಗೆದು ಹಾಕಿದ ಮೇಲೆ ಕಳೆದ ಎಂಟು ತಿಂಗಳಿನಿಂದೀಚೆಗೆ ಅದರ ಬೆಲೆಯನ್ನು ಸತತವಾಗಿ 6 ಸಲ ಏರಿಸಲಾಗಿದೆ. ರೈಲ್ವೆ ಇಲಾಖೆಯು ಉಪ್ಪು, ಪೊಟಾಷ್, ಕಬ್ಬಿಣದ ಅದಿರು, ಕಲ್ಲಿದ್ದಲು, ಸಕ್ಕರೆ ಮತ್ತು ಇತರೆ ಸರಕುಗಳ ಮೇಲಿನ ಸರಕು ಸಾಗಾಣೆ ವೆಚ್ಚವನ್ನು ಶೇ. 4 ರಷ್ಟು ಹೆಚ್ಚಿಸಿದೆ. ಈ ಸಾಗಾಣೆ ವೆಚ್ಚ ಸಹಜವಾಗಿ ವಿದ್ಯುಚ್ಛಕ್ತಿ, ಕಟ್ಟಡ ವಸ್ತುಗಳು ಮತ್ತು ಇತರೆ ವಸ್ತುಗಳ ಬೆಲೆಯೇರಿಕೆಗೆ ಕಾರಣವಾಗುತ್ತದೆ. ಇದರ ಜೊತೆಗೆ ಭಾರತೀಯ ಉಕ್ಕು ಪ್ರಾಧಿಕಾರವು ಕಬ್ಬಿಣದ ಬೆಲೆಯನ್ನು ಪ್ರತಿ ಟನ್‌ಗೆ ರೂ. 1200/- ನ್ನು ಹೆಚ್ಚಳ ಮಾಡಿದೆ. ಬೆಲೆಯೇರಿಕೆ ಆಹಾರ ಧಾನ್ಯಗಳ ವ್ಯಾಪ್ತಿಯಿಂದ ಆಚೆಗೆ ಹರಡುತ್ತಿದ್ದು ಉತ್ಪಾದನಾ ಕ್ಷೇತ್ರಕ್ಕೂ ವ್ಯಾಪಿಸುತ್ತಿದೆ ಎಂದು ರಿಸರ್ವ್ ಬ್ಯಾಂಕ್ ಆತಂಕ ವ್ಯಕ್ತಪಡಿಸಿದೆ.

ಕೃಷಿ ರಸಗೊಬ್ಬರಗಳ ಬೆಲೆಯೇರಿಕೆ:

ಪೌಷ್ಟಿಕಾಂಶಗಳನ್ನು ಹೊಂದಿರುವ ರಸಗೊಬ್ಬರಗಳನ್ನು ರೈತರು ಸಮತೋಲನದಿಂದ ಬಳಸುವ ಹಾಗೆ ಮಾಡಲು ತಾನು ಪೌಷ್ಟಿಕಾಂಶ ಆಧಾರಿತ ಸಬ್ಸಿಡಿಯನ್ನು ರಸಗೊಬ್ಬರಗಳಿಗೆ ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಆದರೆ, ಈಗಾಗಲೇ ಪೆಟ್ರೋಲ್ ಬೆಲೆಯೇರಿಕೆಯಿಂದ ರಸಗೊಬ್ಬರಗಳ ಬೆಲೆಯೇರಿಕೆಯ ಹೊಡೆತ ತಿಂದಿರುವ ರೈತರಿಗೆ ಮತ್ತೊಂದು ಹಂತದ ಬೆಲೆ ಏರಿಕೆ ನಡೆಸುವ ಹುನ್ನಾರ ಇದಾಗಿದೆ. ಸರ್ಕಾರದ ರಸಗೊಬ್ಬರ ಉತ್ಪಾದನಾ ಕಾರ್ಖಾನೆಗಳನ್ನು ಮುಚ್ಚಲಾಗುತ್ತಿದ್ದು, ಖಾಸಗಿಯವರಿಗೆ ಉತ್ಪಾದನ ಹೊಣೆಗಾರಿಕೆಯನ್ನು ವರ್ಗಾಯಿಸಲಾಗುತ್ತಿದೆ. ಒಂದು ಕೆಜಿ ಭತ್ತಕ್ಕೆ ರೈತರಿಗೆ ಸಿಗುವುದು ರೂ. 10/-, ಆದರೆ ಅಂಗಡಿಯಲ್ಲಿ ಗ್ರಾಹಕರಿಗೆ ಮಾರಾಟವಾಗುವ ಕೆಜಿ ಅಕ್ಕಿಯ ಬೆಲೆ ರೂ. 40/-. ಹಾಗೆಯೇ ಒಂದು ಕೆಜಿ ಕಬ್ಬಿಗೆ ರೈತನಿಗೆ ರೂ. 2/- ಕೂಡ ಸಿಗುವುದು ಕಷ್ಟ, ಆದರೆ ಸಕ್ಕರೆ ಬೆಲೆ ಕೆಜಿ ಗೆ ರೂ. 40/- ಮೀರಿದೆ.

ಯುಪಿಎ ಸರ್ಕಾರಕ್ಕೆ ಬೆಲೆಯೇರಿಕೆ ಆದ್ಯತೆಯೇ ಅಲ್ಲ:

ಬೆಲೆಯೇರಿಕೆಯನ್ನು ತಡೆಗಟ್ಟಲು ಯಾವುದೇ ಕಠಿಣ ಕ್ರಮಕೈಗೊಳ್ಳದೆ ನಾಟಕವಾಡುತ್ತಿರುವ ಯುಪಿಎ ಸರ್ಕಾರದ ನಾಯಕರು, ಮೊನ್ನೆ ಕೂಡ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಈ ಸಭೆಯಲ್ಲಿ ಕೇಂದ್ರದ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವ ಶರದ್ ಪವಾರ್ ಸಕ್ಕರೆ ರಫ್ತನ್ನು ಆರಂಭಿಸೋಣವೆಂದು ತಿಳಿಸಿದ್ದಾರೆ. ಗೃಹ ಮಂತ್ರಿ ಚಿದಂಬರಂ ಅವರು ಇದಕ್ಕೆ ಸಕ್ಕರೆ ಬೆಲೆ ಇನ್ನೂ ದೇಶದಲ್ಲಿ ಕೆಳಗಿಳಿದಿಲ್ಲ, ಈಗಲೇ ರಫ್ತು ಆರಂಭಿಸಿದರೆ ಬೆಲೆಯೇರಿಕೆ ಇನ್ನಷ್ಟು ಎತ್ತರಕ್ಕೆ ಏರುತ್ತದೆಂದು ಹೇಳಿದ್ದಕ್ಕೆ ಶರದ್ ಪವಾರ್ 5 ಲಕ್ಷ ಟನ್‌ನಷ್ಟು ಸಕ್ಕರೆಯನ್ನು ರಫ್ತು ಮಾಡಬಹುದೆಂದು ಒತ್ತಾಯಿಸಿದ್ದಾರೆ. ಈ ಈ ಕುರಿತು ಸಲಹೆ ಪಡೆಯಲು ಮತ್ತೊಂದು ಸಮಿತಿಗೆ ಇದನ್ನು ವಹಿಸಿ ಯುಪಿಎ ನಾಯಕರು ಕೈತೊಳೆದುಕೊಂಡಿದ್ದಾರೆ. ಯುಪಿಎ ಸರ್ಕಾರಕ್ಕೆ ಬೆಲೆಯೇರಿಕೆ ನಿಯಂತ್ರಣವು ಆದ್ಯತೆಯ ವಿಷಯವೇ ಅಲ್ಲ ಎಂಬುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೆ.

ಬೂಟಾಟಿಕೆಯನ್ನು ಪ್ರದರ್ಶಿಸುತ್ತಿರುವ ಕಾಂಗ್ರೆಸ್ಸಿನ ಯುವನಾಯಕ ರಾಹುಲ್ ಗಾಂಧಿ ಬೆಲೆಯೇರಿಕೆ ತಡೆಗಟ್ಟಲು ಪ್ರಮುಖ ಅಡಚಣೆಯಾಗಿರುವುದು ಮೈತ್ರಿ ಸರ್ಕಾರದ ಅನಿವಾರ್ಯತೆ ಎಂದು ಬೊಗಳಿದ್ದಾರೆ. ವಾಸ್ತವವಾಗಿ ಕಾಂಗ್ರೆಸ್ ಪಕ್ಷ ಭ್ರಷ್ಟ ಬಂಡವಾಳಶಾಹಿಯ ಭಾಗವಾಗಿ ಕೆಲಸ ಮಾಡುತ್ತಿರುವುದರ ಪರಿಣಾಮವಾಗಿ ಬೆಲೆಯೇರಿಕೆಯುಂಟಾಗುತ್ತಿದೆ ಎಂಬ ವಾಸ್ತವವನ್ನು ಅವನು ಮರೆಮಾಚುವ ಯತ್ನವಿದಾಗಿದೆ.

ಸರ್ಕಾರ ತೋರುತ್ತಿರುವ ಬೂಟಾಟಿಕೆಗೆ ಮತ್ತೊಂದು ಉದಾಹರಣೆಯೆಂದರೆ, ಬೆಲೆಯೇರಿಕೆ ತಡೆಗಟ್ಟಲು ತರಕಾರಿ ಮಾರುಕಟ್ಟೆಗಳಲ್ಲಿ ದಳ್ಳಾಳಿಗಳು ಸಂಗ್ರಹಿಸಿಟ್ಟಿರುವ ಸಂಗ್ರಹಣಾಗಾರಗಳ ಮೇಲೆ ಧಾಳಿ ನಡೆಸುತ್ತಿದೆ. ಕೆಲವೇ ದಿನಗಳ ಹಿಂದೆ ಈರುಳ್ಳಿ ಮಾರಾಟಗಾರರ ಮೇಲೆ ಆದಾಯ ತೆರಿಗೆ ಇಲಾಖೆಯ ಧಾಳಿ ನಡೆದು ಅಲ್ಲೇನೂ ಸಿಗದೆ ಆದಾಯ ತೆರಿಗೆ ಅಧಿಕಾರಿಗಳು ಬರಿಗೈಲಿ ಬಂದಿದ್ದರು. ಹೀಗೆ ಬೇಲೆಯೇರಿಕೆಗೆ ಕಾರಣವಾಗಿರುವ ಮೂಲಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರ ಹಿಂಜರಿಯುತ್ತಾ ಜನತೆಯ ಕಣ್ಣಿಗೆ ಮಣ್ಣೆರಚುತ್ತಿದೆ.

ಸರ್ಕಾರದ ಬಂಡವಾಳಶಾಹಿ ಪರವಾದ ಜೂಜುಕೋರ ನೀತಿಗಳು:

ಇಂದು ಸರ್ಕಾರವನ್ನು ನಡೆಸುತ್ತಿರುವುದು ಮಾರುಕಟ್ಟೆ ದಳ್ಳಾಳಿಗಳು, ರಾತ್ರೋರಾತ್ರಿ ನಾಪತ್ತೆಯಾಗುವ ಆಪರೇಟರ್‌ಗಳು, ದೊಡ್ಡ ಬಂಡವಾಳಶಾಹಿ ಜೂಜುಕೋರರು. ಅತ್ಯವಶ್ಯ ವಸ್ತುಗಳ ಬೆಲೆ ಮುಗಿಲೆತ್ತರಕ್ಕೆ ಏರುತ್ತಿರುವುದಕ್ಕೆ ಪ್ರಮುಖ ಕಾರಣವೆಂದರೆ ಇಂಥಹ ಜೂಜುಕೋರರದೆ ವಾಯಿದಾ/ ಮುಂಗಡ ಮಾರುಕಟ್ಟೆ ಎಂಬ ಸರಕು ವಿನಿಮಯ ಮಾರುಕಟ್ಟೆಯಲ್ಲಿ ನಡೆಸುತ್ತಿರುವ ಅತ್ಯವಶ್ಯ ವಸ್ತುಗಳ ಮೇಲಿನ ಜೂಜಾಟ. ಷೇರು ಮಾರುಕಟ್ಟೆ ರೀತಿಯಲ್ಲಿ ದೇಶದಾದ್ಯಂತ 15 ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಇಂಥಹ ಸರಕು ಷೇರು ಮಾರುಕಟ್ಟೆ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಿದೆ. ಇದರಲ್ಲಿ 2009 ರ ಏಪ್ರಿಲ್‌ನಿಂದ ಜನವರಿ 2010 ರವರೆಗಿನ ವಹಿವಾಟು ಶೇ. 102.59 ರ ದರದಲ್ಲಿ ಬೆಳೆದಿದ್ದು, ಇದರ ಒಟ್ಟು ಮೌಲ್ಯ ರೂ. 10,13,000/- ಕೋಟಿಗಳು. ಹೀಗೆ ದೊಡ್ಡ ಕಂಪನಿಗಳು ಮತ್ತು ಜೂಜುಕೋರರು ಇಷ್ಟು ಅಗಾಧ ಪ್ರಮಾಣದಲ್ಲಿ ಲಾಭ ಹೊಡೆಯುತ್ತಿವೆ.

ಹೀಗೆ ಕಂಪನಿಗಳು ಮತ್ತು ದಳ್ಳಾಳಿಗಳು ಸರ್ಕಾರದಲ್ಲಿ ಲಾಬಿ ನಡೆಸಿ, ಬ್ಲಾಕ್‌ಮೇಲ್ ತಂತ್ರಗಳು ಮತ್ತು ಭ್ರಷ್ಟತನದ ಮೂಲಕ ವ್ಯವಸ್ಥಿತವಾಗಿ ಒತ್ತಡ ತಂದು ಸರ್ಕಾರದ ಉಗ್ರಾಣಗಳಲ್ಲಿ ಸಂಗ್ರಹಿಸಿಟ್ಟಿರುವ ಬೃಹತ್ ಪ್ರಮಾಣದ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಮಾರಿಸುತ್ತಾರೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ನಾಶಪಡಿಸುತ್ತಿದ್ದಾರೆ. ಈ ಆಹಾರ ಧಾನ್ಯಗಳನ್ನು ಖಾಸಗಿ ಕಂಪನಿಗಳು ಖರೀದಿಸಿ ಸಂಗ್ರಹಿಸಿಟ್ಟುಕೊಳ್ಳುತ್ತವೆ. ಮಾರುಕಟ್ಟೆಯಲ್ಲಿ ಕೃತಕ ಅಭಾವ ಮೂಡಿಸಿ, ಬೆಲೆಯೇರಿಕೆ ಮಾಡಿ ಲಾಭ ಪಡೆದುಕೊಳ್ಳುತ್ತಾರೆ. ಇಂದಿಗೂ ಕೂಡ ಗೋಧಿ, ಆಲೂಗೆಡ್ಡೆ, ಸಕ್ಕರೆ, ಇತ್ಯಾದಿಯಂಥಹ ಆಹಾರ ವಸ್ತುಗಳ ಮೇಲಿನ ವಾಯಿದಾ ವ್ಯಾಪಾರವನ್ನು ಸರ್ಕಾರ ನಿಷೇಧಿಸಿಲ್ಲ.

ರಫ್ತು ಮತ್ತು ಆಮದು ಹಗರಣ:

ಟೆಲಿಕಾಂ ಹಗರಣ, ಅಕ್ರಮ ಗಣಿಗಾರಿಕೆ, ಐಪಿಎಲ್ ಹಗರಣ, ಕಾಮನ್‌ವೆಲ್ತ್ ಗೇಮ್ಸ್ ಹಗರಣ - ಹೀಗೆ ಬೆಳೆಯುತ್ತಿರುವ ಹಗರಣಗಳ



ಜನಶಕ್ತಿ
ಕನ್ನಡ ವಾರಪತ್ರಿಕೆ



ಪಟ್ಟಿಗೆ ಮತ್ತೊಂದು ಹಗರಣದ ಸೇರ್ಪಡೆಯೆಂದರೆ ಆಹಾರ ಧಾನ್ಯಗಳ ಆಮದು-ರಫ್ತು ಹಗರಣ. ಸಕ್ಕರೆ ಪ್ರಮಾಣದ ದೇಶದಲ್ಲಿ ಕೊರತೆಯಿದ್ದರೂ ಸಕ್ಕರೆ ರಫ್ತು ಮಾಡುವ ಕಂಪನಿಗಳಿಗೆ ಸರ್ಕಾರ ಸಬ್ಸಿಡಿ ನೀಡುತ್ತಿತ್ತು. ಸಕ್ಕರೆ ಬೆಲೆ ಯಾವಾಗ ಮುಗಿಲೆತ್ತರ ಏರಿ ಜನ ಛೀಮಾರಿ ಹಾಕತೊಡಗಿದರೂ ಆಗ, ಖಾಸಗಿ ಕಂಪನಿಗಳು ಸಕ್ಕರೆಯನ್ನು ಆಮದು ಮಾಡಿಕೊಳ್ಳಲು ಸರ್ಕಾರ ಸಬ್ಸಿಡಿ ನೀಡಲಾರಂಭಿಸಿತು. ಹಾಗೆಯೇ, ದೇಶದಲ್ಲಿ ಈರುಳ್ಳಿ ಅಭಾವವಿದ್ದರೂ ಈರುಳ್ಳಿ ರಫ್ತು ಮಾಡುವ ಕಂಪನಿಗಳಿಗೆ ಸಬ್ಸಿಡಿ ನೀಡುತ್ತಿತ್ತು. ನಂತರ ಈರುಳ್ಳಿ ಆಮದು ಮಾಡಿಕೊಳ್ಳುವ ಕಂಪನಿಗಳಿಗೆ ಸಬ್ಸಿಡಿ ನೀಡುತ್ತಿದೆ. ಹೀಗೆ ಅಂತಿಮ ಲಾಭ ಯಾವುದಾದರೂ ಕ್ರಮದಿಂದ ಜನತೆಯ ಆದಾಯವೆಲ್ಲ ಖಾಸಗಿ ಕಂಪನಿಗಳಿಗೆ ಹರಿದುಹೋಗುವಂತೆ ಮಾಡುವುದು ಸರ್ಕಾರದ ದೃಢ ಧೋರಣೆಯೆನಿಸಿದೆ.

ಜಾಗತಿಕ ಮಟ್ಟದಲ್ಲಿ ಆಹಾರ ಜೂಜುಕೋರ ಕಂಪನಿಗಳು:

ಬೆಲೆಯೇರಿಕೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ಏರಿಕೆಯಾಗಲು ಅಂತರಾಷ್ಟ್ರೀಯ ಆಹಾರ ಧಾನ್ಯಗಳ ಜೂಜುಕೋರ ಕಂಪನಿಗಳು ಕಾರಣವಾಗಿವೆ. ಕಳೆದ ಮೂರು ತಿಂಗಳಲ್ಲಿ, ಜೋಳದ ವಾಯಿದಾ ಮುಂಗಡ ವಹಿವಾಟು ಚಿಕಾಗೋ ವ್ಯಾಪಾರ ಮಂಡಳಿಯಲ್ಲಿ ಶೇ. 70 ರಷ್ಟು ಹೆಚ್ಚಿದೆ. ಬೃಹತ್ ಬಂಡವಾಳ ಹೂಡುವ ಆರ್ಮೇಜರ್ ಎಂಬ ಬಹುರಾಷ್ಟ್ರೀಯ ಕಂಪನಿಯು ದೊಡ್ಡ ಪ್ರಮಾಣದಲ್ಲಿ ಬೀನ್ಸ್‌ನ್ನು ಒಂದೇ ಬಾರಿಗೆ ಖರೀದಿಸಿದ್ದು, ಇದು ವಿಶ್ವದ ಶೇ. 7 ರಷ್ಟು ಪ್ರಮಾಣದ್ದು ಎನ್ನಲಾಗಿದೆ. ಇದರಿಂದಾಗಿ ಬೀನ್ಸ್‌ನ ಬೆಲೆ ಕಳೆದ 30 ವರ್ಷಗಳಲ್ಲೇ ಕಂಡರಿಯದಷ್ಟು ಮಟ್ಟಕ್ಕೆ ಏರಿತು. ಬ್ರೆಡ್ಡಿನ ಬೆಲೆಯೇರಿಕೆ ವಿರುದ್ಧ ಮುಷ್ಕರ ಹೂಡಿದ್ದವರಲ್ಲಿ 13 ಮಂದಿಯನ್ನು ಮೊಜಾಂಬಿಕ್ ಸರ್ಕಾರ ಗುಂಡಿಕ್ಕಿ ಕೊಂದಿದೆ. ಕಾರ್ಗಿಲ್ ಎಂಬ ಆಹಾರ ಧಾನ್ಯ ವಹಿವಾಟು ಮಾಡುವ ಬಹುರಾಷ್ಟ್ರೀಯ ಕಂಪನಿಯ ವಹಿವಾಟು ಕಳೆದ 3 ತಿಂಗಳಲ್ಲಿ ಶೇ. 68 ರಷ್ಟು ಹೆಚ್ಚಳಗೊಂಡಿದೆ. ಆಹಾರ ಜೂಜುಕೋರ ಮಾರುಕಟ್ಟೆಗೆ ಹರಿದುಬರುತ್ತಿದ್ದ ಬಂಡವಾಳದ ಪ್ರಮಾಣ ತೀವ್ರ ಹೆಚ್ಚಳಗೊಂಡಿದೆ.

ಆಹಾರದ ಹಕ್ಕಿನ ಕುರಿತಾದ ವಿಶ್ವ ಸಂಸ್ಥೆಯ ವಿಶೇಷ ಅಧಿಕಾರಿಯಾದ ಆಲಿವರ್ ಡೆ ಶುಟ್ಟರ್ ಹೇಳಿರುವಂತೆ ?2007 ಮತ್ತು 2008ರ ಆಹಾರ ಬೆಲೆ ಬಿಕ್ಕಟ್ಟಿಗೂ ಆಹಾರ ಧಾನ್ಯಗಳ ಮೇಲೆ ನಡೆಯುತ್ತಿರುವ ಜೂಜುಕೋರತನದ ವಹಿವಾಟಿಗೂ ನೇರ ಸಂಬಂಧವಿದೆ. ಬೃಹತ್ ಪ್ರಮಾಣದ ಬಂಡವಾಳ ಹಿಡಿದ ಬಹುರಾಷ್ಟ್ರೀಯ ಕಂಪನಿಗಳು, ಪಿಂಚಣಿ ನಿಧಿ ಮತ್ತು ಬಂಡವಾಳ ಹೂಡಿಕಾ ಬ್ಯಾಂಕುಗಳನ್ನು ಬಳಸಿಕೊಂಡು ಆಹಾರ ಧಾನ್ಯಗಳ ಬೆಲೆಗಳನ್ನು ಹತ್ತಾರು ತಿಂಗಳು ಮುಂಗಡವಾಗಿ ನಿಗಧಿಪಡಿಸುತ್ತವೆ. ಹೀಗೆ ನಿಗಧಿಪಡಿಸದ ದರವನ್ನು ಕಾಯ್ದುಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಶೇಖರಿಸಿಡುತ್ತವೆ. ಇದರಿಂದ ಕೃತಕವಾಗಿ ಆಹಾರ ಧಾನ್ಯಗಳ ಬೆಲೆಗಳನ್ನು ಹೆಚ್ಚಿಸುತ್ತವೆ. ಆಮೂಲಕ ಒಂದೆಡೆ, ದೊಡ್ಡ ಪ್ರಮಾಣದ ಲಾಭ ಕಂಪನಿಗಳಿಗೆ ದೊರಕಿದರೆ, ಅದಕ್ಕಿಂತಲೂ ಹೆಚ್ಚು ಪ್ರಮಾಣದ ಹಸಿವು ನರಳಾಟಗಳು ಬಡವರಲ್ಲಿ ಉಂಟಾಗುತ್ತವೆ?

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ರಾಜ್ಯ ಸರ್ಕಾರ ವಿಧಿಸುತ್ತಿರುವ ಮಾರಾಟ ತೆರಿಗೆ

ಡೀಸೆಲ್	18%
ಪೆಟ್ರೋಲ್	25%
ತೈಲ	1%
ಸೀಮೆಎಣ್ಣೆ	4%
ಎಲ್‌ಪಿಜಿ ಅನಿಲ	1%

ಇದರ ಜೊತೆಗೆ ಸಾಗಣೆ ವೆಚ್ಚ, ಸ್ಥಳೀಯ ತೆರಿಗೆ, ಲೈಸೆನ್ಸ್ ಶುಲ್ಕಗಳನ್ನು ಡೀಲರುಗಳ ಮೇಲೆ ವಿಧಿಸಲಾಗುತ್ತಿದ್ದು, ಇದೂ ಕೂಡ ಗ್ರಾಹಕರಿಗೆ ನೇರವಾಗಿ ವರ್ಗಾವಣೆಯಾಗುತ್ತಿವೆ.

ಬೆಲೆಯೇರಿಕೆಯ ಬೆಂಕಿಗೆ ತುಪ್ಪ ಸುರಿಯುತ್ತಿರುವ ಭ್ರಷ್ಟ ಬಿಜೆಪಿ ಸರ್ಕಾರ

ಬೆಲೆಯೇರಿಕೆಯ ಬಿಸಿಗೆ ಸಿಲುಕಿ ಹಾಹಾಕಾರ ಅನುಭವಿಸುತ್ತಿರುವ ರಾಜ್ಯದ ಜನತೆಯ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ಯಡಿಯೂರಪ್ಪ ನಾಯಕತ್ವದ ರಾಜ್ಯ ಬಿಜೆಪಿ ಸರ್ಕಾರ ತನ್ನ ಭ್ರಷ್ಟ ಲೋಲುಪತೆಗಳಲ್ಲೇ ಮುಳುಗಿ ಹೋಗಿದೆ. ಬಿಜೆಪಿ ಭರವಸೆ ನೀಡಿದ್ದ ಕೆಜಿಗೆ ರೂ.2/- ರಂತೆ ಅಕ್ಕಿ ಕೊಡುವುದು ಆಗಿರಲಿ, ಎಲ್ಲ ಆಹಾರ ಧಾನ್ಯಗಳು ಮತ್ತು ಅಗತ್ಯ ಸೇವೆಗಳ ಬೆಲೆಗಳನ್ನು ಏರಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಂಡೇ ತೀರುವಂತೆ ಬಿಜೆಪಿ ವರ್ತಿಸುತ್ತಿದೆ. ಏಕೆಂದರೆ ಈ ಸರ್ಕಾರದ ಮೇಲಿನ ಅಂಕುಶವಿರುವುದು ದಲ್ಲಾಳಿಗಳು ಮತ್ತು ಖಾಸಗಿ ಕಂಪನಿಗಳ ಕೈಯಲ್ಲಿ.

ರಾಜ್ಯ ಸರ್ಕಾರ ಪೆಟ್ರೋಲಿಯಮ್ ಉತ್ಪನ್ನಗಳ ಮೇಲೆ ವಿಧಿಸುತ್ತಿರುವ ತೆರಿಗೆ ಇಡೀ ದೇಶದಲ್ಲಿಯೇ ಅತಿ ಹೆಚ್ಚಿನದು. ಈ ತೆರಿಗೆಯನ್ನು ಇಳಿಸುವ ಮೂಲಕ,ಬೆಲೆಯನ್ನು ಸ್ವಲ್ಪ ಮಟ್ಟಿಗಾದರೂ ಇಳಿಸಿ ಜನರಿಗೆ ಶಮನ ನೀಡಬಹುದಾದರೂ, ಬಿಜೆಪಿಗೆ ಅದು ಸ್ವಲ್ಪವೂ ಇಷ್ಟವಿಲ್ಲ. ಪೆಟ್ರೋಲಿಯಮ್ ಉತ್ಪನ್ನಗಳ ಮೇಲೆ ವಿಧಿಸುತ್ತಿರುವ ಪ್ರವೇಶ ತೆರಿಗೆ ಶೇ. 5. ಅಲ್ಲದೆ ಮಾರಾಟ ತೆರಿಗೆಯನ್ನು ವಿಧಿಸುತ್ತಿದೆ.



ಯಡಿಯೂರಪ್ಪ ಸರ್ಕಾರ ಪ್ರತಿ ಲೀಟರ್ ಪೆಟ್ರೋಲ್‌ನಿಂದ ಗ್ರಾಹಕನಿಂದ ರೂ. 18/-ಕ್ಕಿಂತಲೂ ಹೆಚ್ಚು ಹಣವನ್ನು ಪಡೆಯುತ್ತಿದೆ. ಜೊತೆಗೆ ಪ್ರತಿ ಬಾರಿ ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆಯೇರಿಕೆ ಮಾಡಿದಾಕ್ಷಣ ರಾಜ್ಯದಲ್ಲಿ ಬಸ್ ದರ, ನೀರಿನ ದರ, ವಿದ್ಯುತ್ ದರ, ಇತ್ಯಾದಿಗಳನ್ನು ಏರಿಕೆ ಮಾಡುತ್ತಾ ಬಡಜನತೆಯ ಜೀವನದ ಮೇಲೆ ಆರ್ ಎಸ್ ಎಸ್ ಮಾರ್ಗದರ್ಶನದಲ್ಲಿ ಬಿಜೆಪಿ ಸರ್ಕಾರ ರುದ್ರನರ್ತನ ನಡೆಸುತ್ತಿದೆ.

ಪಡಿತರ ಚೀಟಿಗಳನ್ನು ವಿತರಿಸಿ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಹೆಚ್ಚಿನ ಧಾನ್ಯಗಳನ್ನು ವಿತರಿಸಿ ಜನತೆಯ ಹಸಿವು ಇಂಗಿಸದೆ ತಮಗೂ ಬೆಲೆಯೇರಿಕೆಗೂ ಯಾವುದೇ ಸಂಬಂಧವಿಲ್ಲವೆಂಬಂತೆ, ಪರಸ್ಪರ ದೂಷಣೆಯಲ್ಲಿ ಕಾಂಗ್ರೆಸ್ಸಿನ ಯುಪಿಎ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ನಿರತವಾಗಿವೆ.

ರಾಜ್ಯಮಟ್ಟದ ಉದ್ಯೋಗ ಖಾತ್ರಿ ಮತ್ತು ದಲಿತ ಹಕ್ಕು ಕಾರ್ಯಾಗಾರಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕುರಿತು ಎ.ಕೆ.ಗೋಪಾಲನ್ ಸ್ಮಾರಕ ದತ್ತಿ ಹಾಗೂ ರೇಗಾ ಜಾರಿ ಸಮಿತಿಗಳ ಜಂಟಿ ಆಶ್ರಯದಲ್ಲಿ ಎರಡು ದಿನಗಳ ಕಾಲ ರಾಜ್ಯಮಟ್ಟದ ಕಾರ್ಯಾಗಾರವು ಬೆಂಗಳೂರಿನಲ್ಲಿ ಇ.ಎಂ.ಎಸ್. ಭವನದಲ್ಲಿ ಜನವರಿ 9,10-2011 ರಂದು ನಡೆಯಿತು.

ದಲಿತ ಹಕ್ಕುಗಳ ಸಮಿತಿ ಮತ್ತು ಎ.ಕೆ.ಗೋಪಾಲನ್ ಸ್ಮಾರಕ ದತ್ತಿಯ ಜಂಟಿ ಆಶ್ರಯದಲ್ಲಿ ಇದೇ ಇ.ಎಂ.ಎಸ್. ಭವನದಲ್ಲಿ ಜನವರಿ 10 ರ ಮದ್ಯಾಹ್ನದಿಂದ 11, 2011 ರವರೆಗೆ ಎರಡು ದಿನಗಳ ಕಾಲ ದಲಿತ ಹಕ್ಕುಗಳ ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಯಶಸ್ವಿಯಾಗಿ ನಡೆಯಿತು.





ನಿವೃತ್ತಿವೇತನ ಅಂಗನವಾಡಿ ನೌಕರರ ಬಹುಕಾಲದ ಬೇಡಿಕೆ. ಸತತ ಹೋರಾಟಗಳ ಪರಿಣಾಮ ಈ ಬೇಡಿಕೆಯನ್ನು ರಾಜ್ಯಸರ್ಕಾರ ಒಪ್ಪಬೇಕಾಗಿ ಬಂದಿದೆ. ಆದರೆ ಅದು ಹೇಳುತ್ತಿರುವ ಪಿಂಚಣಿ ಯೋಜನೆಯಲ್ಲಿ ನೌಕರರ ಹಣವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸಲಾಗುತ್ತದೆ. ಈ ಹಣಕ್ಕೆ ಬಡ್ಡಿಯ ಖಾತ್ರಿಯಾಗಲಿ ಅಥವಾ ಅಸಲಿಗೇ ಖಾತ್ರಿಯಾಗಲಿ ಇಲ್ಲ. ಮಾರುಕಟ್ಟೆ ಬಿರುಗಾಳಿಗೆ ಸಿಲುಕಿ ಏನಾಗಬೇಕಾದರೂ ಆಗಬಹುದು. ಇಂಥ ನಿವೃತ್ತಿ ಯೋಜನೆಯನ್ನು ನೌಕರರು ಒಪ್ಪುವುದಿಲ್ಲ...ಒಪ್ಪುವುದಿಲ್ಲ.

ವಚನ ತಪ್ಪಿದ ಸರ್ಕಾರ

ಅಂಗನವಾಡಿ ನೌಕರರಿಗೆ ಪೆನ್ಷನ್ ಎಂದರೂ ಪೆನ್ಷನ್ ಇಲ್ಲ !

■ ಎಸ್. ವರಲಕ್ಷ್ಮಿ

ಅಂಗನವಾಡಿ ನೌಕರರಿಗೆ ಸ್ವಾವಲಂಬನಾ ಪೆನ್ಷನ್ ಯೋಜನೆ ಬೇಡ ಎಂದೇ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ ನವೆಂಬರ್ 15ರಿಂದ ರಾಜ್ಯದಾದ್ಯಂತ ಅಂಗನವಾಡಿಗಳನ್ನು ಬಂದ್ ಮಾಡಿ 4 ದಿನಗಳ ಕಾಲ ಬೆಂಗಳೂರಿನಲ್ಲಿ ರಾತ್ರಿ-ಹಗಲು ಹೋರಾಟ ನಡೆಸಿದ್ದು, ಈ ಹೋರಾಟದ ಫಲವಾಗಿ ಡಿಸೆಂಬರ್ 2ರಂದು ಮಾನ್ಯ ಮುಖ್ಯಮಂತ್ರಿಗಳ ಜೊತೆ ಜಂಟಿ ಸಭೆ ನಡೆಯಿತು.

ಆ ಸಭೆಯಲ್ಲಿ ಸ್ಪಷ್ಟವಾಗಿ ಮುಖ್ಯಮಂತ್ರಿಯವರು ಆದೇಶಿಸಿದ್ದು ಡೆವಲಪ್‌ಮೆಂಟ್ ಆಫೀಸರ್ ಬಳಿ ಅಂತಿಮಗೊಳಿಸಿ ಎಂದು. ಆದರೆ ಆ ರೀತಿ ಮಾಡಿಲ್ಲ. ಆದರೆ ತಮ್ಮ ನಿರ್ದೇಶನಾಲಯದಿಂದ ಎಲ್ಲಾ ನೌಕರರಿಗೂ ಸ್ವಾವಲಂಬನಾ ನ್ಯಾಷನ್ ಪೆನ್ಷನ್ ಸಿಸ್ಟಮ್ ಎನ್ನುವ ಫಾರಂನ್ನು ಕೊಟ್ಟು ಬಲವಂತದಿಂದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಹಿಯನ್ನು ಪಡೆಯಲಾಗುತ್ತಿದೆ. ಸಂಘಟನೆಗಳ ಬಳಿ ಚರ್ಚೆ ಮಾಡದೆ ಸಹಿ ಪಡೆಯುವ ವಿಧಾನವನ್ನು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ತೀವ್ರವಾಗಿ ವಿರೋಧಿಸುತ್ತಿದೆ.

ಸ್ವಾವಲಂಬನಾ ನ್ಯಾಷನಲ್ ಪೆನ್ಷನ್ ಸಿಸ್ಟಮ್ಸ್‌ನ ಲೆಕ್ಕಚಾರದ ಪ್ರತಿ ಪ್ರಕಾರ ಕೆಳಕಂಡ ಅಪಾಯಗಳು ಇದರಲ್ಲಿದೆ.

ಹೊಸ ಪಿಂಚಣಿಯಲ್ಲಿರುವ ಅಪಾಯಗಳು

- ನಿಧಿಯು ಯೂನಿಟ್ ಕೊಂಡಿಯ ಆಧಾರದಲ್ಲಿರುತ್ತದೆ. (ಅಂದರೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ) ಆದ್ದರಿಂದ ಹೂಡಿಕೆಯ ಮೇಲೆ ಆದಾಯದ ಬಗ್ಗೆ ಯಾವ ಭರವಸೆಯನ್ನು ಇದರಲ್ಲಿ ನೀಡುತ್ತಿಲ್ಲ. ಆದಾಯ ಮಾರ್ಕೆಟ್ ಪರಿಸ್ಥಿತಿಯ ಮೇಲೆ ಹೊಂದಿ ಕೊಂಡಿರುತ್ತದೆ. ಆದಾಯ ಹೆಚ್ಚು ಕಡಿಮೆ ಇರಬಹುದು. ಅಸಲು ಬಗ್ಗೆ ಆಗಲಿ ಬಡ್ಡಿಯ ಬಗ್ಗೆ ಆಗಲಿ ಯಾವ ಭರವಸೆಯೂ ಇಲ್ಲ.
- ಎನ್.ಪಿ.ಎಸ್‌ನಲ್ಲಿ 10 ಶೇ. ಬಡ್ಡಿ ಕೊಡುವ ಬಗ್ಗೆ ಪಟ್ಟಿಯಲ್ಲಿ ತೋರಿಸಲಾಗಿದೆ. ಠೇವಣಿ ಮಾಡುವ ಹಣಕ್ಕೆ ಈಗ ಚಾಲ್ತಿಯಲ್ಲಿರುವ ವಾರ್ಷಿಕ ಆದಾಯದ ದರ 7 ರಿಂದ 7.5 ಮಾತ್ರ ಇದೆ. ಹೀಗಿರುವಾಗ ಪಿಂಚಣಿದಾರಳು ಮರಣ ಹೊಂದಿದ ಸಂದರ್ಭದಲ್ಲಿ ಮೂಲ ಶೇಖರಣೆಯ ಹಣ ಸಂಪೂರ್ಣ ಹಿಂತಿರುಗಿಸುವಿಕೆ ಹಾಗೂ ಅದಕ್ಕೆ 10ಶೇ. ಬಡ್ಡಿ ದರ ನೀಡಲು ಸಾಧ್ಯವೇ?
- 1975ರಲ್ಲಿ ಐಸಿಡಿಎಸ್‌ಗೆ ಅಡಿಪಾಯ ಹಾಕಿದ 13,000 ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ನಿವೃತ್ತಿ ವೇತನ ಕೊಡದೆ 30, 50 ಸಾವಿರ ಪರಿಹಾರ ಕೊಟ್ಟು ಮನೆಗೆ ಕಳುಹಿಸುವುದು. ಏಕೆಂದರೆ ಈ ಯೋಜನೆಯಲ್ಲಿ 55 ವರ್ಷ ಮೇಲ್ಪಟ್ಟವರು ಸೇರ್ಪಡೆ ಮಾಡುವುದಿಲ್ಲ. ಇದು 18ರಿಂದ 54 ವರ್ಷದ ವಯಸ್ಸಿನವರಿಗೆ ಮಾತ್ರ ಅನ್ವಯವಾಗುತ್ತದೆ. ನಿವೃತ್ತಿ ವೇತನ ಕೊಟ್ಟು ಕೆಲವರಿಗೆ ನಿವೃತ್ತಿ ವೇತನ ಕೊಡದಿರುವುದು ಸಾಮಾಜಿಕ ನ್ಯಾಯವೇ? ಇದು ತಾರತಮ್ಯವಲ್ಲವೇ?
- ಸಂಘಟನೆಗಳು ಸೂಚಿಸಿರುವ ಯೋಜನೆಗೆ ಬೇಕಿರುವುದು ಕೇವಲ 34 ಕೋಟಿ. ಆದರೆ ಈ ಯೋಜನೆಯಲ್ಲಿ 47-55 ವರ್ಷದೊಳಗಿನವರಿಗೆ ಸರ್ಕಾರ 41 ಕೋಟಿ ರೂ.ಗಳನ್ನು ಒಂದೇ ಕಂತಿನಲ್ಲಿ ಪಾವತಿಸಬೇಕು. ಆಗ ಸರ್ಕಾರಕ್ಕೆ ಹಣಕಾಸಿನ ಹೊರೆಯಾಗುವುದಿಲ್ಲವೇ?
- ಪಟ್ಟಿ ಎ ಮತ್ತು ಪಟ್ಟಿ ಬಿ ಲೆಕ್ಕಾಚಾರದ ವಿವರಣೆ 18 ರಿಂದ 60 ವರ್ಷದವರೆಗಿದೆ. ಅದರಲ್ಲಿ 45 ವರ್ಷ ವಯಸ್ಸಿನವರಿಗೆ ಕನಿಷ್ಟ ಪಿಂಚಣಿ ರೂ.300 ಮತ್ತು ರೂ.500 ಕ್ಕಿಂತ ಕಡಿಮೆ ಇದೆ. ಸರ್ಕಾರ ಕನಿಷ್ಟ ಪಿಂಚಣಿ ನೀಡುವುದೇ ಅಥವಾ ವಿವರಣೆ ಯಲ್ಲಿರುವಂತೆ ರೂ.22 ರಿಂದ ರೂ.364 ಮಾಹೆಯಾನ ನೀಡುವುದೇ?
- ವಿವರಣೆ ಪಟ್ಟಿಯಲ್ಲಿ ಎಲ್ಲಿಯೂ ಆಡಳಿತ ಖರ್ಚಿನ ಬಗ್ಗೆ ಏನು ತಿಳಿಸಿರುವುದಿಲ್ಲ. ರೂ.75 ರಿಂದ ರೂ.150 ವಂತಿಗೆಯನ್ನು ಮೊತ್ತಕ್ಕೆ ಸೇರಿಸಿದೆ. ಆಡಳಿತ ಖರ್ಚು ಏನು ಇಲ್ಲವೇ? ಇದನ್ನು ನಂಬಲು ಸಾಧ್ಯವೇ?
- ಇಂತಹ ಪಿಂಚಣಿ ನೀತಿ ಅಮೆರಿಕಾ, ಬ್ರಿಟನ್, ಆಸ್ಟ್ರೇಲಿಯಾ, ಸ್ವಿಜರ್ ಲ್ಯಾಂಡ್, ಅರ್ಜೆಂಟೈನಾ,



ಮೆಕ್ಸಿಕೋ, ಚಿಲಿ, ಖಜಕಿಸ್ಥಾನ್, ಫ್ರಾನ್ಸ್ ದೇಶಗಳಲ್ಲಿ ಜಾರಿ ಮಾಡಿ ಪ್ರಯತ್ನ ವಿಫಲವಾಗಿದೆ. ಶ್ರೀ ಡೀನ್ ಬೇಕರ್, ಕೋ ಆರ್ಡಿನೇಟರ್ ಆರ್ಥಿಕ ಮತ್ತು ಸಂಶೋಧನಾ ಕೇಂದ್ರ, ವಾಷಿಂಗ್‌ಟನ್ ಡಿ.ಸಿ. ಅವರು "ನಿಮ್ಮ ವೈಯುಕ್ತಿಕ ಖಾತೆಯಿಂದ ನಿಮಗೆ ಏನು ಆಗುತ್ತದೆಂಬ ದಿಶೆಯಲ್ಲಿ ಪಿಂಚಣಿ ಇರುತ್ತದೆ. ನಿಮಗೆ ಈಗಿರುವಂತೆ ಗ್ಯಾರಂಟಿಯಾದ ನಿಗದಿ ಪಿಂಚಣಿ ಮೊತ್ತ ಇರುವುದಿಲ್ಲ. ನಿಮ್ಮ ಪಿಂಚಣಿ ಮೊತ್ತವು ನಿಮ್ಮ ಹಣ ಎಷ್ಟು ಲಾಭ ತರುವುದೋ ನಿಮ್ಮ ಹಣ ಎಂತಹ ಕಡೆ ಹೂಡಲಾಗಿದೆಯೋ ಮತ್ತು ನೀವು ನಿವೃತ್ತರಾದಾಗ ಆರ್ಥಿಕ ಪರಿಸ್ಥಿತಿ, ಮಾರುಕಟ್ಟೆ ಪರಿಸ್ಥಿತಿ ಹೇಗಿರುವುದೋ ಅದನ್ನು ಹೊಂದಿಕೊಂಡು ತೀರ್ಮಾನವಾಗುತ್ತದೆ. ಒಟ್ಟಾರೆ ಅನುಭವ ಏನೆಂದರೆ ಕೆಟ್ಟ ಸ್ಥಿತಿಯಿಂದ ದುಸ್ಥಿತಿಗೆ ಹೋದಂತೆಯೇ ಸರಿ.

ಜಗತ್ತಿನಲ್ಲಿ 'ಪಿಂಚಣಿ' ನಿರ್ವಹಣೆಯ ಪರಿಸ್ಥಿತಿಯ ಕುರಿತು ಅಮೆರಿಕಾ ವ್ಯಾಟ್ಸನ ವ್ಯಾಟ್; ಎಂಬ ಪ್ರತಿಷ್ಠಿತ ಸಂಸ್ಥೆಯ ಸಂಶೋಧನೆಯಲ್ಲಿ ಜಗತ್ತಿನಲ್ಲಿ 29ಶೇ. ರಷ್ಟು ಪಿಂಚಣಿ ನಿಧಿ ನಷ್ಟವಾಗಿದೆ. ಅದರಲ್ಲಿ ಷೇರು ಮಾರುಕಟ್ಟೆ ಮೂಲಕ 'ಪಿಂಚಣಿ ನಿಧಿ' ಗಳ ವ್ಯವಹಾರ ನಡೆಸಿರುವ ಅಮೆರಿಕಾ ಮತ್ತು ಐರ್ಲೆಂಡ್‌ಗಳ 26 ಲಕ್ಷ ಕೋಟಿ ನಷ್ಟವಾಗಿ 12,33,000 ಪಿಂಚಣಿದಾರರು ಬೀದಿಗೆ ಬಂದಿದ್ದಾರೆ.

ಇಂತಹ ಪಿಂಚಣಿಯನ್ನು ರಾಜ್ಯ ಬಿಜೆಪಿ ಸರ್ಕಾರ ಅಂಗನವಾಡಿ ನೌಕರಂಗೆ ಕೊಡಲು ಮುಂದಾಗಿದೆ.

ಪರಿಹಾರ ಮತ್ತು ತಿಂಗಳ ನಿವೃತ್ತಿ ವೇತನ ಬೇಕೆಂಬುದು ಸಂಘಟನೆಯ ಬೇಡಿಕೆ. ಕೇವಲ ಪರಿಹಾರವಲ್ಲ. ಆದ್ದರಿಂದ ಎಲ್‌ಐಸಿಯಾಧಾರಿತವಾದ ಸೂಚನೆ ಯನ್ನು ಒಪ್ಪಬೇಕೆಂದೂ ಸಂಘಟನೆಯು ಒತ್ತಾಯಿಸುತ್ತದೆ.

ಇಲ್ಲದಿದ್ದಲ್ಲಿ ಅನಿವಾರ್ಯವಾಗಿ ಹೋರಾಟಕ್ಕೆ ಹೋಗಬೇಕಾಗುತ್ತದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರ ಸೇವಾ ನಿಯಮಗಳಲ್ಲಿ ಸುಧಾರಣೆ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಂದಿರುವುದೇ pension fund regulation - development authority" ಮಸೂದೆ. ಈ ಮಸೂದೆಯನ್ನು ತಕ್ಷಣ ಜಾರಿಗೊಳಿಸಲು ಸಾಧ್ಯವಾಗುವಂತೆ ಭಾರತ ಸರ್ಕಾರ ದಿನಾಂಕ 23 ಆಗಸ್ಟ್ 2003 ರಂದು ಪಿಎಫ್‌ಆರ್‌ಡಿಎ (ಪಿಂಚಣಿ ನಿಧಿ ನಿಯಂತ್ರಣ ಹಾಗೂ ಅಭಿವೃದ್ಧಿ ಒದಗಿಸುವ ಸಲುವಾಗಿ ಸುಗ್ರೀವಾಜ್ಞೆ ಯನ್ನು ದಿನಾಂಕ 29 ಡಿಸೆಂಬರ್ 2004 ರಂದು ಹೊರಡಿಸಲಾಗಿತ್ತು. 2004 ಜನವರಿಯಿಂದ ಕೇಂದ್ರ ಸರ್ಕಾರಿ ಹುದ್ದೆಗಳಿಗೆ ಸೇರಿದ ಎಲ್ಲಾ ಸರ್ಕಾರಿ ನೌಕರರಿಗೆ "ಹೊಸ ನಿವೃತ್ತಿ ಯೋಜನೆ" ಜಾರಿ ಮಾಡಲಾಗಿದೆ. ಈ ಪಿಂಚಣಿಯನ್ನು ಖಾಸಗೀಕರಣ ಮಾಡಿದ 'ಕೊಡುಗೆ' ಎನ್.ಡಿ.ಎ. ನ ವಾಜಪೇಯಿ ಸರ್ಕಾರದ್ದು.

ನಂತರ ಬಂದ ಯುಪಿಎ ಸರ್ಕಾರವು ಇದನ್ನು ಮುಂದುವರಿಸಿತ್ತು. ಈಗ 22 ರಾಜ್ಯಗಳಲ್ಲಿ ಇದನ್ನು ಜಾರಿ ಮಾಡಲಾಗಿದೆ. ಕರ್ನಾಟಕದಲ್ಲಿಯೂ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಇದನ್ನು 2006 ರಿಂದ ಜಾರಿಯಾಗುವಂತೆ 2009 ರಲ್ಲಿ ಜಾರಿ ಮಾಡಿತು.

ಪಿಂಚಣಿ ಹಿನ್ನೆಲೆ

ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ)ಯ ವ್ಯಾಖ್ಯಾನದಂತೆ "ರೋಗಬಾಧೆ, ಹೆರಿಗೆ, ಉದ್ಯೋಗದಿಂದಾಗುವ ವಿಕಲತೆ/ ಗಾಯ, ನಿರುದ್ಯೋಗ, ಅತಂತ್ರ ವಾಗುವುದು, ವೃದ್ಧಾಪ್ಯ ಮತ್ತು ಸಾವು" ಇವುಗಳ ಕಾರಣದಿಂದ ದುಡಿಮೆಯಲ್ಲಿ ಗಮನಾರ್ಹವಾದ ಕಡಿತ ವುಂಟಾಗುವುದರಿಂದ ಕಾರಣವಾಗುವ ಆರ್ಥಿಕ ಮತ್ತು ಸಾಮಾಜಿಕ ದು:ಖಗಳಿಂದ ಸಾರ್ವಜನಿಕ ಕ್ರಮಗಳ ಮೂಲಕ ಸಮಾಜವು ತನ್ನ ಸದಸ್ಯರಿಗೆ ರಕ್ಷಣೆ ಮತ್ತು ಕುಟುಂಬ ಹಾಗೂ ಮಕ್ಕಳಿಗೆ ಸಹಾಯಧನ ಒದಗಿಸುವುದು, ಈ ಧೋರಣೆಯ ಪ್ರಕಾರ ಸಾರ್ವತ್ರಿಕವಾಗಿ ಎಲ್ಲಾ ಬಗೆಯ ಸಾಮಾಜಿಕ ಅಪಾಯಗಳನ್ನು ಒಳಗೊಳ್ಳುವ ಮತ್ತು ಅವರವರ ಅಗತ್ಯಾನುಸಾರ ಇಡೀ ಸಮುದಾಯವನ್ನು ಒಳಗೊಳ್ಳಬೇಕು.

ಸಮಗ್ರವಾಗಿ ಎಲ್ಲಾ ರಾಷ್ಟ್ರೀಯ ಯೋಜನೆ ಮತ್ತು ಕಾರ್ಯಕ್ರಮಗಳ ಜೊತೆಯಲ್ಲಿ ಸಹ ಯೋಜನೆಯಿಂದ ಮತ್ತು ಅವುಗಳೊಡನೆ ಕ್ರೋಢೀಕರಣ ಹೊಂದತಕ್ಕದ್ದು.

ಸಂಪೂರ್ಣ ಒಪ್ಪಬಹುದಾದ ಜೀವನದ ಗುಣಮಟ್ಟವನ್ನು ನಿಭಾಯಿಸಲು ಅನುವು ಮಾಡಿಕೊಡುವ ಮತ್ತು ಬಡತನ ಹಾಗೂ ಸಾಮಾಜಿಕ ಬಹಿಷ್ಕರಣೆಯನ್ನು ತಡೆಗಟ್ಟಬೇಕು.

ಕಲ್ಯಾಣ ರಾಜ್ಯದ ಸಾಮಾಜಿಕ ಭದ್ರತಾ ಧೋರಣೆಯುಳ್ಳ ಕಾರ್ಯಕ್ರಮಗಳನ್ನು ಜಾರಿ ಮಾಡಲು ಪ್ರಮುಖ ಶಾಸನಾತ್ಮಕ ಮತ್ತು ಸಾಂಸ್ಥಿಕ ಬದಲಾವಣೆಗಳನ್ನು ಜಾರಿ ಮಾಡುವುದು ಅಗತ್ಯ. ಈ ಧೋರಣೆಯನ್ನು ಅಳವಡಿಸಿಕೊಂಡ ದೇಶಗಳು ಸಾರ್ವತ್ರಿಕತೆಯು ಸಮಗ್ರತೆಯು ಮತ್ತು ಸಂಪೂರ್ಣತೆಯ ತತ್ವಗಳನ್ನು ವಿವಿಧ ಮಟ್ಟಗಳಲ್ಲಿ ಅಳವಡಿಸಿಕೊಂಡವು.

ಸಾಮಾಜಿಕ ಭದ್ರತೆ ಬಂದದ್ದು ಹೇಗೆ?

ಸಾಮುದಾಯಿಕ ಕ್ರಿಯಾಶೀಲತೆಯ ಅಗತ್ಯತೆಯ ಬಗ್ಗೆ ಬಹು ಹಿಂದೆ ಯಾವುದೇ ಜಾಗೃತಿಯಿರಲಿಲ್ಲ ಮತ್ತು ಬಡತನದ ಪರಿಹಾರವು ಕೇವಲ ಖಾಸಗಿ ಭದ್ಧತೆಯಾಗಿತ್ತು. ಧಾರ್ಮಿಕ ಸಂಸ್ಥೆಗಳು ಇರಲು ಸೂರು, ತಿನ್ನಲು ಕೂಳು ಒದಗಿಸುತ್ತಿದ್ದವು. ಮಧ್ಯಯುಗದ ಕಾಲದಿಂದಲೂ ಯುರೋಪಿನ ವ್ಯಾಪಾರಿ ಸಮುದಾಯಗಳು ತಮ್ಮ ಸದಸ್ಯರ ಹಾಗೂ ಅವರ ಕುಟುಂಬಗಳಿಗೆ ಕಷ್ಟದ ಕಾಲದಲ್ಲಿ ಸಹಾಯ ಮಾಡುತ್ತಿದ್ದರು. ಹೀಗೆ ಆರಂಭಗೊಂಡದ್ದು, ಕೆಲವು ದೇಶಗಳಲ್ಲಿ, ಬಡವರಿಗೆ ಮತ್ತು ನಿರ್ಗತಿಕರಿಗೆ ಸಹಾಯಹಸ್ತ ನೀಡುವ ಶಾಸನಗಳನ್ನು ಸಾರ್ವಜನಿಕ ಜವಾಬ್ದಾರಿಯನ್ನು ಗುರುತಿಸುವ ಕಾನೂನುಗಳನ್ನು ರೂಪಿಸಿದ್ದಲ್ಲದೆ, ಸಾರ್ವಜನಿಕರ ಹಣವನ್ನು ಬಡತನದ ಪರಿಹಾರಕ್ಕೆ ಬಳಕೆ ಮಾಡುವ ತತ್ವವನ್ನು ಸ್ಥಾಪಿಸಲಾಯಿತು. ಈ ಕಾನೂನಿನಡಿಯಲ್ಲಿ ನಿರ್ಗತಿಕ

ಪುಟ 15 ಕ್ಕೆ

ಇತ್ತೀಚೆಗೆ ಕೇರಳದ ತ್ರಿಶೂರ್‌ನಲ್ಲಿ ನಡೆದ ಜನವಿಜ್ಞಾನ ಕಾಂಗ್ರೆಸ್ ಜನರ ಬದುಕಿನ ಪರಿಣಾಮ ಬೀರುವ ವಿಜ್ಞಾನ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಹತ್ತಾರು ಪ್ರಶ್ನೆಗಳ ಕುರಿತು ಚರ್ಚಿಸಿದ್ದು ವಿಜ್ಞಾನವನ್ನು ಜನಮುಖಿ ಜನಪರವನ್ನಾಗಿಸುವ ನಿಟ್ಟಿನ ಜನ ವಿಜ್ಞಾನ ಚಳುವಳಿಗೆ ಹೊಸ ಉತ್ಸಾಹ ತುಂಬಿದೆ.

ತ್ರಿಶೂರಿನಲ್ಲಿ 13ನೇ ಜನ ವಿಜ್ಞಾನ ಕಾಂಗ್ರೆಸ್


ವಿಚಾರಮಂಥನ - ಸಾಂಸ್ಕೃತಿಕ ಸಂಭ್ರಮ

■ ವಸಂತರಾಜ ಎನ್.ಕೆ.

ಪರಮಾಣು ಶಕ್ತಿ ಸ್ಥಾವರಗಳ ಆಮದು 2ಜಿ ಮೊಬೈಲ್ ಟೆಲಿಕಾಂ ಹಗರಣಕ್ಕಿಂತ ದೊಡ್ಡ ಹಗರಣವಾದೀತು. ಹವಾಮಾನ ಬದಲಾವಣೆ ಮನುಕುಲದ ಅಳಿವು-ಉಳಿವಿನ ಪ್ರಶ್ನೆ - ಎಂಬ ಎಚ್ಚರಿಕೆ ಒಂದುಕಡೆ. ಕೇರಳದ ಪ್ರಜಾಸ್ತಾತ್ಮಕ ವಿಕೇಂದ್ರೀಕರಣದ ಸಾಧನೆಗಳ ಚೇತೋಹಾರಿ ಗಾಥೆ ಮತ್ತು ಖಗೋಳಶಾಸ್ತ್ರದ ವಿಸ್ಮಯಗಳ ಬೆರಗಿನ ಜಗತ್ತು ಇನ್ನೊಂದು ಕಡೆ. ಹವಾಮಾನ ಬದಲಾವಣೆ, ಆಹಾರ ಭದ್ರತೆ, ಶಿಕ್ಷಣದ ಹಕ್ಕು, ಮಹಿಳಾ ಸಾಕ್ಷರತೆ, ಐಟಿ-ಬಿಟಿ, ರೇಗಾ, ಔಷಧಿ-ವ್ಯಾಕ್ಸೀನುಗಳ ಕೊರತೆ, ಸಾಮಾಜಿಕ ಒಳಗೊಳ್ಳುವಿಕೆ, ಮುಕ್ತ ಸಾಫ್ಟ್ ವೇರ್, ಗ್ರಾಮೀಣ ಆರೋಗ್ಯ ಮಿಶನಿನ ಅವಸ್ಥೆ, ಕಿರುಸಾಲ, ವಿಜ್ಞಾನ ಜನಪ್ರಿಯಗೊಳಿಸುವುದು -ಇವೆಲ್ಲಾ ಒಂದೇ ಸೂರಿನಡಿಯಲ್ಲಿ ಚರ್ಚೆ ನಡೆಯುವುದು ಸಾಧ್ಯವಿದೆಯೆ?

ಹೌದು. ಇತ್ತೀಚೆಗೆ (ಡಿಸೆಂಬರ್ 27-31, 2010) ತ್ರಿಶೂರಿನಲ್ಲಿ ನಡೆದ 13 ನೇ ಜನ ವಿಜ್ಞಾನ ಕಾಂಗ್ರೆಸಿನಲ್ಲಿ ನಡೆದದ್ದೇ ಇದು. ಐದು ದಿನಗಳ ಕಾಲ ಮೂರು ಮುಖ್ಯ ಅಧಿವೇಶನ, ಎಂಟು ಉಪ-ಅಧಿವೇಶನಗಳಲ್ಲಿ, 32 ಕಾರ್ಯಾಗಾರಗಳಲ್ಲಿ - 200 ಕ್ಕೂ ಹೆಚ್ಚು ವಿಷಯ ಪರಿಣತರು, ವಿಜ್ಞಾನಿ-ತಂತ್ರಜ್ಞಾನಿಗಳು, 600 ಕ್ಕೂ ಹೆಚ್ಚು ಪ್ರತಿನಿಧಿಗಳು (22 ರಾಜ್ಯಗಳ ಜನ ವಿಜ್ಞಾನ ಚಳುವಳಿಯ ಕಾರ್ಯಕರ್ತರು) ಈ ಚರ್ಚೆ ನಡೆಸಿದರು. ದೂರದ ಆಸ್ಸಾಮಿನಿಂದ ಬಂದ ಸ್ಕೂಲ್ ಟೀಚರ್, ಕನ್ಯಾಕುಮಾರಿಯ ಸ್ವಸಹಾಯ ಗುಂಪು ಚಳುವಳಿಯ ಕಾರ್ಯಕರ್ತೆ, ಬಿಹಾರಿನ ಸಮತಾ ಕಾರ್ಯಕರ್ತೆ, ಚಾಮರಾಜನಗರದ ವಿದ್ಯಾಂಕುರ ಪ್ರಾಜೆಕ್ಟಿನ ಕಾರ್ಯಕರ್ತ, ಮುಂಬಯಿಯ ಹವಾಮಾನ ಬದಲಾವಣೆ ತಜ್ಞ, ಬೆಂಗಳೂರಿನ ವಿಜ್ಞಾನಿ, ಕೇರಳದ ಗ್ರಾಮೀಣ ತಂತ್ರಜ್ಞಾನ ಸಂಸ್ಥೆಯ ವಿಜ್ಞಾನಿ, ಹಿಮಾಚಲದ ಪಂಚಾಯತ್ ಸದಸ್ಯ, ಕೇರಳದ ಹಣಕಾಸು ಮಂತ್ರಿ - ಇವರೆಲ್ಲಾ ತ್ರಿಶೂರಿನಲ್ಲಿ ಮಿನಿ ಭಾರತ ನಿರ್ಮಿಸಿ ಈ ಚರ್ಚೆಯಲ್ಲಿ ತೊಡಗಿದ್ದರು.

1980 ರ ದಶಕದ ಕೊನೆ ವರ್ಷಗಳಲ್ಲಿ ದೇಶದಾದ್ಯಂತ ನಡೆದ ಸಾಕ್ಷರತಾ ಚಳುವಳಿಯ ಭಾಗವಾಗಿ ಹುಟ್ಟಿದ, 22 ರಾಜ್ಯ ಮಟ್ಟದ ಜನ ವಿಜ್ಞಾನ ಸಂಘಟನೆಗಳ ಅಖಿಲ ಭಾರತ ಜನ ವಿಜ್ಞಾನ ಜಾಲಕ್ಕೆ (ಎಐಪಿಎಸ್ಎನ್ - ಆಲ್ ಇಂಡಿಯಾ ಪೀಪಲ್ಸ್ ಸಾಯನ್ಸ್ ನೆಟ್ ವರ್ಕ) 22 ವರ್ಷ ತುಂಬಿದೆ. 1988 ರಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆದ



ಮೊದಲ ಜನ ವಿಜ್ಞಾನ ಕಾಂಗ್ರೆಸಿನಲ್ಲಿ ಹುಟ್ಟಿದ ಎಐಪಿಎಸ್ಎನ್ ದೇಶವೆಲ್ಲಾ ಸುತ್ತಾಡಿ 13 ನೇ ಕಾಂಗ್ರೆಸ್ ನಡೆಸುವ ಹೊತ್ತಿಗೆ ಕೇರಳದ ತ್ರಿಶೂರಿಗೆ ವಾಪಸು ಬಂದಿದ್ದು, ಈ ಚರ್ಚೆಗಳಲ್ಲಿ ತೊಡಗಿತ್ತು.

* * *

ತ್ರಿಶೂರಿನಲ್ಲಿ ಏನು ನಡೆಯಿತು ?

13 ನೇ ಕಾಂಗ್ರೆಸ್ ಜನ ವಿಜ್ಞಾನ ಚಳುವಳಿಯ ಪ್ರಸ್ತುತ ಚಟುವಟಿಕೆಗಳು ಮತ್ತು ಮುಂಬರುವ ಯೋಜನೆಗಳನ್ನು ಮೂರು ಸಾಮಾನ್ಯ ಅಧಿವೇಶನ ಮತ್ತು ಎಂಟು ಸಮಾನಾಂತರ ಉಪ-ಅಧಿವೇಶನಗಳಲ್ಲಿ ಚರ್ಚಿಸಿತು

- ಉದ್ಘಾಟನೆ
- ಚಳುವಳಿಯ ಪುನರ್ವಿಮರ್ಶೆ ಮತ್ತು ಮುನ್ನೋಟ
- ಪ್ರಜಾಪ್ರಭುತ್ವೀಕರಣ ಮತ್ತು ವಿಕೇಂದ್ರೀಕರಣ
- ಕೃಷಿ ಮತ್ತು ಆಹಾರ ಭದ್ರತೆ
- ಸ್ವಾವಲಂಬನೆ
- ಪರಿಸರ ಮತ್ತು ಬೆಳವಣಿಗೆ, ಹವಾಮಾನ ಬದಲಾವಣೆ
- ಶಿಕ್ಷಣ
- ಆರೋಗ್ಯ
- ಸಾಮಾಜಿಕ ಒಳಗೊಳ್ಳುವಿಕೆ
- ವಿಜ್ಞಾನ ಜನಪ್ರಿಯಗೊಳ್ಳಿಸುವಿಕೆ
- ಸಮಾರೋಪ

ಮೊದಲ ದಿನ ಉದ್ಘಾಟನಾ ಸಮಾರಂಭ, ಮೆರವಣಿಗೆ, ಬಹಿರಂಗ ಸಭೆ ಇದ್ದರೆ ಎರಡನೇ ದಿನ ಚಳುವಳಿಯ ಪುನರ್ವಿಮರ್ಶೆ ಮತ್ತು ಮುನ್ನೋಟದ ದಸ್ತಾವೇಜುಗಳ ಹಾಗೂ ಸಂಘಟನಾ ಚರ್ಚೆಗೆ ಮೀಸಲಾಗಿತ್ತು. ಮೂರನೇ ಮತ್ತು ನಾಲ್ಕನೇ ದಿನ ಸಮಾನಾಂತರವಾಗಿ ಎರಡರಂತೆ ಪ್ರತಿ ದಿನ ನಾಲ್ಕರಂತೆ ಒಟ್ಟು ಎಂಟು ಉಪ-ಅಧಿವೇಶನಗಳು ನಡೆದವು. ಐದನೇ ದಿನ ಸಮಾರೋಪದಲ್ಲಿ ನಿರ್ಣಯಗಳ ಮಂಡನೆ, ಹೊಸ ಕಾರ್ಯಕಾರಿ ಸಮಿತಿಯ ಆಯ್ಕೆ, ನೂತನ ಅಧ್ಯಕ್ಷ-ಕಾರ್ಯದರ್ಶಿಗಳ ಭಾಷಣ ಇದ್ದವು.

ಪ್ರತಿಯೊಂದು ಸಮಾನಾಂತರ ಉಪ-ಅಧಿವೇಶನದಲ್ಲಿ ಆಯಾ ವಿಷಯಗಳ ಮೇಲೆ 3-4 ಪರಿಣತರು ಆ ಕ್ಷೇತ್ರದಲ್ಲಿ ಸಾಧನೆಗಳು, ಸವಾಲುಗಳು ಮತ್ತು ಮುಂದಿನ ಹಾದಿ ಬಗ್ಗೆ ವಿವರ ಮಂಡಿಸಿದರು. ಆ ನಂತರ ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲಾಯಿತು. ಪರಿಸರ ಸ್ನೇಹಿ ಕೃಷಿ ಪದ್ಧತಿಗಳು, ಜಾಗತೀಕರಣದ ಸಂದರ್ಭದಲ್ಲಿ ಸ್ವಾವಲಂಬನೆಯ ಸವಾಲುಗಳು, ವರ್ಧಮಾನ ತಂತ್ರಜ್ಞಾನಗಳ ಸಾಧ್ಯತೆ-ಸಮಸ್ಯೆಗಳು, ಹವಾಮಾನ ಬದಲಾವಣೆ ಮತ್ತು ಇತರ ಪರಿಸರ ಸಮಸ್ಯೆಗಳು, ಶಿಕ್ಷಣ ಹಕ್ಕು ಮಸೂದೆ, [illegible] ಶಿಕ್ಷಣ [illegible] ಆರೋಗ್ಯ ಸೇವೆಗಳ ಮೇಲೆ ಜಾಗತೀಕರಣದ ಪರಿಣಾಮಗಳು, ಗ್ರಾಮೀಣ ಆರೋಗ್ಯ ಮಿಶನ ನಿಜಸ್ಥಿತಿ, ಕಿರುಸಾಲದಲ್ಲಿ ಶೋಷಣೆ, ಸಾಮಾಜಿಕವಾಗಿ ಹೊರಗಿಡಲ್ಪಟ್ಟ ಜನವಿಭಾಗಗಳಲ್ಲಿ ಜನ ವಿಜ್ಞಾನ ಚಳುವಳಿ ಕೊಂಡುಹೋಗುವುದು, ವಿಜ್ಞಾನ ಜನಪ್ರಿಯಗೊಳಿಸುವಿಕೆಯ ಹೊಸ ಪರಿಕಲ್ಪನೆಗಳು - ಇವೇ ಮುಂತಾದವು ಈ ಉಪ-ಅಧಿವೇಶನಗಳಲ್ಲಿ ಚರ್ಚಿತವಾದ ವಿಷಯಗಳು.

ಪ್ರತೀ ಉಪ-ಅಧಿವೇಶನದ ಪ್ರಧಾನ ವಿಷಯದ 3-4 ಪ್ರಮುಖ ಅಂಶಗಳ ಬಗ್ಗೆ ಸಮಾನಾಂತರ ಕಾರ್ಯಾಗಾರಗಳು ನಡೆದವು. ಯಾವುದೇ ಒಂದು ಸಮಯದಲ್ಲಿ 7-8 ಸಮಾನಾಂತರ ಕಾರ್ಯಾಗಾರಗಳು ನಡೆಯುತ್ತಿದ್ದವು. ವಿಕೇಂದ್ರೀಕರಣ ಮತ್ತು ಸಹಕಾರಿ ಚಳುವಳಿ, ಗ್ರಾಮೀಣ ತಂತ್ರಜ್ಞಾನ ಮಧ್ಯಪ್ರವೇಶದ ಅನುಭವಗಳು, ಕೃಷಿಯಲ್ಲಿ ಮೌಲ್ಯ ವರ್ಧಿತ ಉತ್ಪನ್ನಗಳ ಸಾಧ್ಯತೆ, ಕೃಷಿ ಮತ್ತು ಜೀವ ತಂತ್ರಜ್ಞಾನ, ಜೈವಿಕ ಬದಲಾವಣೆಯ ಆಹಾರ ವಸ್ತುಗಳ ವಿವಾದ, ಶಿಕ್ಷಣ ಹಕ್ಕು ಮಸೂದೆ ಜಾರಿಯ ಉಸ್ತುವಾರಿ ಹೇಗೆ ?, ಶಿಕ್ಷಣ ಉತ್ತಮಪಡಿಸುವಿಕೆ ಮಧ್ಯ ಪ್ರವೇಶದ ಅನುಭವಗಳು, ಆರೋಗ್ಯ ಹಕ್ಕು ಮಸೂದೆ - ಇವು ಕಾರ್ಯಾಗಾರದ ಕೆಲವು ಉದಾಹರಣೆಗಳು.

* * *

ಕರ್ನಾಟಕದ ಹೆಚ್ಚಿದ ಪಾಲ್ಗೊಳ್ಳುವಿಕೆ

ಹಿಂದೆ ಯಾವುದೇ ಜನ ವಿಜ್ಞಾನ ಕಾಂಗ್ರೆಸಿಗೆ ಹೋಲಿಸಿದರೆ ಕರ್ನಾಟಕದ ತಂಡದ ಪಾಲ್ಗೊಳ್ಳುವಿಕೆ ತ್ರಿಶೂರ್ ಕಾಂಗ್ರೆಸಿನಲ್ಲಿ ಅತಿ ಹೆಚ್ಚು ಎನ್ನಬಹುದು. 40ಕ್ಕೂ ಹೆಚ್ಚು ಸದಸ್ಯರ ಅತಿ ದೊಡ್ಡ ತಂಡ ಭಾಗವಹಿಸಿತ್ತು. ನಾಲ್ಕು ಕಾರ್ಯಾಗಾರಗಳಲ್ಲಿ ಬಿಜಿವಿಎಸ್ ಕರ್ನಾಟಕದ ಸದಸ್ಯರು ವೇದಿಕೆಯ ಮೇಲೆ ವಿಷಯ ಮಂಡನೆ ಮಾಡಿ ಚರ್ಚೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಚಾಮರಾಜನಗರದ ವಿದ್ಯಾಂಕುರ ಶಿಕ್ಷಣ ಯೋಜನೆಯ ಜಾರಿ, ಆರೋಗ್ಯ ಸೇವೆಗಳ ಸಮುದಾಯ ಮೇಲ್ವಿಚಾರಣೆಯ ಅನುಭವಗಳು, ಭ್ರೂಣ ಹತ್ಯೆ, ಶಿಕ್ಷಣದಲ್ಲಿ ಲಿಂಗ ಅಸಮಾನತೆ - ಈ ವಿಷಯಗಳ ಮೇಲೆ ಮಂಡನೆ ಮಾಡಲಾಯಿತು. ಇದಲ್ಲದೆ ಬೆಂಗಳೂರಿನ ಡಾ. ಪ್ರಜ್ವಲ ಶಾಸ್ತ್ರಿ ಖಗೋಳಶಾಸ್ತ್ರದ ಬಗ್ಗೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ್ದಲ್ಲದೆ ನವಸಾಕ್ಷರರಲ್ಲಿ ವಿಜ್ಞಾನ ಜನಪ್ರಿಯಗೊಳಿಸುವ ಸಂಪನ್ಮೂಲ ತಯಾರಿಕೆಯ ಕಾರ್ಯಾಗಾರದಲ್ಲೂ ವಿಷಯ ಮಂಡನೆ ಮಾಡಿದರು. ಹಿಂದಿನ ಮತ್ತು ಹೊಸ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಪದಾಧಿಕಾರಿಗಳು (ಉಪಾಧ್ಯಕ್ಷರು) ಆಗಿರುವ ಕರ್ನಾಟಕ ಬಿಜಿವಿಎಸ್ ನ ಡಾ. ಸಬ್ಯಸಾಚಿ ಚಟರ್ಜಿ, ಹಲವು ಅಧಿವೇಶನಗಳ ಸಂಯೋಜನೆಯಲ್ಲಿ ಭಾಗಿಯಾಗಿದ್ದರು.

* * *

ಅಮೆರಿಕನ್-ಫ್ರೆಂಚ್ ಕಂಪನಿಗಳ ಒತ್ತಡದಿಂದ ನಡೆಯುತ್ತಿರುವ ಪರಮಾಣು ಶಕ್ತಿ ಸ್ಥಾವರಗಳ ಆಮದಿನ ಶರತ್ತುಗಳನ್ನು ವಿಶ್ಲೇಷಿಸಿದರೆ, ಇವು ದೇಶೀಯ ಸ್ಥಾವರಗಳಿಗಿಂತ ಎರಡು ಮರೆ-ಮೂರು ಲಕ್ಷ ಕೋಟಿ ರೂ. ಹೆಚ್ಚು ದುಬಾರಿಯಾಗಿರುತ್ತವೆ. 2ಜಿ ಸಾರ್ವಜನಿಕರಿಗೆ ಅಪಾಯಕಾರಿಯಾಗಿರುತ್ತವೆ.

ಪುಟ 15 ಕ್ಕೆ

ಹಾಡು-ಕುಣಿತಗಳ ಸಂಭ್ರಮದ ಹಬ್ಬ

ಅತ್ಯಂತ ಸಂಕೀರ್ಣ ವಿಚಾರಗಳ ಚರ್ಚೆ, ಮಂಥನದಲ್ಲಿ ತೊಡಗಿರುವಾಗಲೇ ಈ ಐದು ದಿನದ ಕಾಂಗ್ರೆಸ್ ಹಾಡು-ಕುಣಿತಗಳ ಸಂಭ್ರಮದ ಹಬ್ಬ ಸಹ ಆಗಿತ್ತು. ಉದ್ಘಾಟನೆ ಸಮಾರಂಭದಲ್ಲಿ ಕೆ ಎಸ್ ಎಸ್ ಪಿ ಯ ಹಾಡು-ನಾಟಕ, ಮೆರವಣಿಗೆಯಲ್ಲಿ ಹಾಡು-ಕುಣಿತಗಳು, ಬಹಿರಂಗ ಸಭೆಯಲ್ಲಿ ಹಲವು ರಾಜ್ಯಗಳ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಧಿವೇಶನದ ನಡುವಿನ ಬಿಡುವುಗಳಲ್ಲಿ ಹಾಡುಗಳ ಭರಾಟೆ, ಪ್ರತಿ ದಿನ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಬ್ಬದ ವಾತಾವರಣ ಉಂಟು ಮಾಡಿದ್ದವು. ಉದ್ಘಾಟನಾ ಮೆರವಣಿಗೆಯಲ್ಲಿ ಶೇ.100 ಅಸ್ಸಾಮಿ ಉಡುಗೆಯಲ್ಲಿ ಬಂದಿದ್ದ ತಂಡದ ಹಾಡು-ಕುಣಿತ, ಬಹಿರಂಗ ಸಭೆಯಲ್ಲಿ ಬಿಹೂ ನೃತ್ಯ, ಸಂಜೆಯ ಗೀತನಾಟಕ - ಎಲ್ಲಾ ಕಾರ್ಯಕ್ರಮಗಳಲ್ಲೂ ಆಸ್ಸಾಮಿ ಗುಂಪು ಎಲ್ಲರ ಮನಸೆಳೆಯಿತು. ಏಕಲವ್ಯನ ಬೆರಳು, ಗೆಲಿಲಿಯೋ ನಾಟಕ ಪ್ರದರ್ಶನ, ಕಥಕ್ಕಳಿ ಪ್ರಸಂಗಗಳಿಂದ ಆತಿಥೇಯ ಕೇರಳದ ತಂಡ ಸಹ ಹಿಂದೆ ಬೀಳಲಿಲ್ಲ. ಹರ್ಯಾಣಾದಲ್ಲಿ ನೂರಕ್ಕೂ ಹೆಚ್ಚು ಪ್ರದರ್ಶನ ಕಂಡಿರುವ "ಮರ್ಯಾದಾ ಹತ್ಯೆ" ಮೇಲಿನ ಪರಿಣಾಮಕಾರಿ ನಾಟಕ, ರಾಜಸ್ತಾನಿ ಮತ್ತು ಮರಾಠಿ ಹಾಡುಗಳು - ಇತರ ಗಮನ ಸೆಳೆದ ಕಾರ್ಯಕ್ರಮಗಳು. ಇವೆಲ್ಲವೂ ಎಷ್ಟು ಪರಿಣಾಮಕಾರಿಯಾಗಿದ್ದವು ಎಂದರೆ ಕಾಂಗ್ರೆಸಿನಲ್ಲಿ ಭಾಗವಹಿಸಿದ ಕರ್ನಾಟಕದ ತಂಡ ರಾಜ್ಯದಲ್ಲಿ ಒಂದು ಪರಿಣಾಮಕಾರಿ ಸಾಂಸ್ಕೃತಿಕ ತಂಡ ಕಟ್ಟಬೇಕೆಂದು ಅಲ್ಲೇ ನಿರ್ಧರಿಸಿತು. ○




ಬಿಜೆಪಿ ದರ್ಬಾರ್

■ ಆರ್.ಕೆ

ರೆಡ್ಡಿ ಸಹೋದರರ ಕೋಟಿ ಕೋಟಿ ತೆರಿಗೆ ವಂಚನೆ

ನಮ್ಮ ರೆಡ್ಡಿ ಸಹೋದರರ ಓಬಳಾಪುರಂ ಮೈನಿಂಗ್ ಕಂಪನಿ(ಓಎಂಸಿ) ಎಂಬ ಗಣಿ ತೋಡುವ ಸಂಸ್ಥೆ ಯಾವ ರೀತಿಯಲ್ಲಿ ಕರ್ನಾಟಕ ರಾಜ್ಯದ ಕಬ್ಬಿಣದ ಅದಿರು ಸಂಪನ್ಮೂಲವನ್ನು ಕೊಳ್ಳೆ ಹೊಡೆದಿದೆ ಮತ್ತು ಹೊಡೆಯುತ್ತಿದೆ ಎಂಬುದು 'ಲೋಕ ವಿಖ್ಯಾತ'ವಾದ ವಿಚಾರ.

ಈ ಅಕ್ರಮ ಸೇರಿದಂತೆ ಮುಖ್ಯಮಂತ್ರಿಗಳ ಮೇಲಿನ ಅಕ್ರಮ ನಿವೇಶನ ಮಂಜೂರು, ಸ್ವಜನ ಪಕ್ಷಪಾತ ಮುಂತಾದ ಆರೋಪಗಳ ಬಗೆಗೆ ಪ್ರತಿಪಕ್ಷಗಳು ದೂರು ನೀಡಿರುವ ಹಿನ್ನೆಲೆಯಲ್ಲಿ ಈ ಸಂಬಂಧವಾಗಿ ಮಾಹಿತಿ ನೀಡಿ ಎಂದು ರಾಜ್ಯದ ರಾಜ್ಯಪಾಲರು ಮಾಹಿತಿ ಕೇಳಿದರೆ ನಮ್ಮ ರಾಜ್ಯದ ಘನ ಮುಖ್ಯಮಂತ್ರಿಗಳು ಏನೆಂದು ಉತ್ತರಿಸಿದ್ದಾರೆ ಎಂಬುದು ನಮಗೆಲ್ಲಾ ಗೊತ್ತಿದೆ.



ಅಂತಹ ಯಾವುದೇ ಹಗರಣ, ಪ್ರಕರಣಗಳು ನಡೆದೇ ಇಲ್ಲ ಎಂಬ 'ಚುಟುಕು' ಉತ್ತರವನ್ನು ನಮ್ಮ ಮು.ಮ. ಅವರು ನೀಡಿದ್ದಾರೆ. ಅವರ ಧೈರ್ಯ, ಭಂಡತನಗಳನ್ನು ಮೆಚ್ಚಬೇಕಾದದ್ದೇ. ಸಾಕ್ಷಿ, ಆಧಾರಗಳ ರಾಶಿಗಳ ನಡುವೆಯೇ ಕುಳಿತುಕೊಂಡು ಇಂತಹ ಮಾತನಾಡುವವರನ್ನು ಮೆಚ್ಚದೇ ಇರಲು ಹೇಗೆ ತಾನೆ ಸಾಧ್ಯ ?

ಇಗೋ ಇಲ್ಲೊಂದು ಸಾಕ್ಷಿ ಏನು ಹೇಳುತ್ತಿದೆ ನೋಡಿ. ಆದಾಯ ತೆರಿಗೆ ಇಲಾಖೆಯ ಆಂತರಿಕ ವರದಿಯಲ್ಲಿ ಈ ಅಂಶ ಬಹಿರಂಗವಾಗಿದೆ. 2007-08ರ ಸಾಲಿನಲ್ಲಿ ರೆಡ್ಡಿ ಸಹೋದರರ ಮಾಲಿಕತ್ವದ ಓಎಂಸಿ 86,42,88,802 ರೂಪಾಯಿಗಳಷ್ಟು ಆದಾಯ ತೆರಿಗೆ ವಂಚನೆ ಮಾಡಿದೆಯಂತೆ. ಅಂದರೆ 86.42 ಕೋಟಿ ರೂಪಾಯಿಗಳ ಆದಾಯ ತೆರಿಗೆ ವಂಚನೆ. ಇದು ಸಿಕ್ಕಿ ಹಾಕಿಕೊಂಡಿರುವ ಒಂದು ಬಗೆಯ ವಂಚನೆಯ ಒಂದು ಪ್ರಕರಣ ಅಷ್ಟೆ. ಇಂತಹ ನೂರಾರು ವಿದ್ಯೆಯನ್ನು ಓಬಳಾಪುರಂ ಮೈನಿಂಗ್ ಕಂಪನಿ ಕರಗತ ಮಾಡಿಕೊಂಡಿದೆ ಎಂಬುದನ್ನು ಗಮನಿಸಬೇಕು.

ಇಲ್ಲಿ ಏನು ನಡೆದಿದೆ. ತಾನು ವಿದೇಶದ ಬೇರೆ ಬೇರೆ ಕಂಪನಿ, ಅಥವಾ ದೇಶಗಳಿಗೆ ನೇರವಾಗಿ ಅದಿರು ಮಾರಿರುವುದು ದಾಖಲಾದರೆ ವ್ಯಾಪಾರ ಮಾಡಲಾದ ಮೊತ್ತಕ್ಕೆ ಆದಾಯ ತೆರಿಗೆ ಕಟ್ಟಬೇಕಾಗುತ್ತದೆ. ಹೀಗಾಗಿ 2007 ನವೆಂಬರ್ 30 ರಂದು ಜಿ.ಎಲ್.ಎ. ಎಂಬ ಒಂದು ಕಂಪನಿಯನ್ನು ಹುಟ್ಟು ಹಾಕಲಾಗಿದೆ. ಓಎಂಸಿಯು ಈ ಕಂಪನಿಗೆ ಅದಿರು ಮಾರುವುದು... ಅದು ಬೇರೆ ಬೇರೆ ಕಂಪನಿಗಳು ಅದಿರು ಮಾರಿರುವುದಾಗಿ ದಾಖಲು ಮಾಡಿರುವ ಬೆಲೆಯ ಸುಮಾರು ಅರ್ಧ ಬೆಲೆಗೆ ಅದಿರು ಮಾರಿರುವಂತೆ ದಾಖಲೆ ತೋರಿಸುವುದು.

ಬೇರೆ ಕಂಪನಿಗಳು ಪ್ರತಿ ಟನ್ ಅದಿರಿಗೆ 144 ರಿಂದ 165 ಡಾಲರ್‌ಗೆ ಮಾರಿರುವ ಅದೇ ದರ್ಜೆಯ ಅದಿರನ್ನು ಓಎಂಸಿಯು 76.14 ಡಾಲರ್ ಮತ್ತು 98.24 ಡಾಲರ್‌ಗೆ ಜಿ.ಎಲ್.ಎ.ಗೆ ಮಾರಾಟ ಮಾಡಿದೆ. ಅಷ್ಟಷ್ಟರ ಮಟ್ಟಿಗೆ ಸರ್ಕಾರಕ್ಕೆ ತೆರಿಗೆಯಲ್ಲಿ ಪಂಗನಾಮ.

ಯಾವ ಕಾರಣಕ್ಕಾಗಿ ಈ ರೀತಿಯಲ್ಲಿ ಕಡಿಮೆ ಬೆಲೆಗೆ ಅದಿರು ಮಾರಾಟ ಮಾಡಿದ್ದೀರಿ ಎಂದರೆ ವಿವಿಧ ದೇಶಗಳ ಜೊತೆ ವ್ಯಾಪಾರ ವೃದ್ಧಿಸಿಕೊಳ್ಳಲು ಮತ್ತು ಬೆಲೆಗಳ ಏರು ಪೇರು ತಡೆಯಲು ಈ ರೀತಿ ಮಾಡಲಾಗಿದೆಯೆಂಬುದು ಓಎಂಸಿಯ ಅಂಬೋಣ. ಆಹಾ ! ಏನು ಅಂತರ ರಾಷ್ಟ್ರೀಯ ಭ್ರಾತೃತ್ವ, ಏನು ವಿಶ್ವ ಪ್ರೇಮ, ವ್ಯಾಪಾರ ಪ್ರೇಮ. ಸರಿ ಸಾಟಿಯೇ ಇಲ್ಲ ಇದಕ್ಕೆ. ಜೈ ಓಬಳಾಪುರಂ ಮೈನಿಂಗ್ ಕಂಪನಿ, ಜೈ ಜನಾರ್ಧನ ರೆಡ್ಡಿಗಾರು, ಜೈ ಕರುಣಾಕರ ರೆಡ್ಡಿಗಾರು, ಜೈ ಯಡಿಯೂರಪ್ಪ, ಜೈ ಸುಷ್ಮಾಸ್ವರಾಜ್. ಜೈ.... ಸಾಕಲ್ಲವೇ ಸದ್ಯಕ್ಕೆ ?

ಮರೆತೇ ಹೋಗಿರುವ ಯಡಿಯೂರಪ್ಪನವರ ರಕ್ತ ಪ್ರತಿಜ್ಞೆ !

ಚುನಾವಣೆಯ ಕಾಲಕ್ಕೆ ಏನಾದರೂ ಬಾರಿ ಬಾರಿ ಭರವಸೆಗಳನ್ನು ಕೊಟ್ಟು ಜನರಿಂದ ಓಟು ಹಾಕಿಸಿಕೊಂಡು ಆಮೇಲೆ ಜನರ ಮನವಿ ಪತ್ರದ ಮೇಲೇ ಕುಳಿತುಬಿಡುವ ಅಥವಾ ಮಲಗು ಗೊರಕೆ ಹೊಡೆಯುವ ಪ್ರವೃತ್ತಿಗಳು ಆಳುವ ವರ್ಗದ ರಾಜಕಾರಣಿಗಳಲ್ಲಿ ಕಾಣಬರುವ ಒಂದು ಮಾಮೂಲಿ ಕಾಯಿಲೆ. ಅದಕ್ಕೆ ಬಿಜೆಪಿ ಪಕ್ಷದ ಮುಖಂಡರೇನು ಅಪವಾದವಲ್ಲ. ಆದರೆ ಈ ವಿಚಾರದಲ್ಲಿ ಈಗ ರಾಜ್ಯದ ಮುಖ್ಯಮಂತ್ರಿಗಳಾಗಿರುವ ಯಡಿಯೂರಪ್ಪ ನರದ್ದು ವಿಶೇಷ ಪರಿಣಿತಿ. ಇಲ್ಲೊಂದು ಪ್ರಕರಣವಿದೆ, ಸ್ವತಃ ಮುಖ್ಯಮಂತ್ರಿಗಳ ಜಿಲ್ಲೆಯ ಈ ಪ್ರಕರಣದ ಅರ್ಥವೇನು ನೀವೇ ತೀರ್ಮಾನಿಸಿ.

ಅದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸಿಗಂದೂರು ಎಂಬ ನಡುಗಡ್ಡೆ. ನಡುಗಡ್ಡೆ ಎಂದರೆ ಅದು ಪ್ರಕೃತಿಯ ನೈಸರ್ಗಿಕ ನಡುಗಡ್ಡೆಯಲ್ಲ. 1940 ರ ದಶಕದಲ್ಲಿ ಮಡೆನೂರು ಮತ್ತು 1960 ದಶಕದಲ್ಲಿ ಲಿಂಗನಮಕ್ಕಿ ಜಲಾಶಯಗಳನ್ನು ನಿರ್ಮಾಣ ಮಾಡಿದ ಕಾರಣಕ್ಕಾಗಿ ಎರಡು ಹೋಬಳಿಗಳ ವ್ಯಾಪ್ತಿಯಲ್ಲಿ ಹಲವಾರು ಗ್ರಾಮಗಳನ್ನು- ಒಟ್ಟಾರೆ ಸುಮಾರು 18 ಸಾವಿರ ಜನಸಂಖ್ಯೆಯನ್ನೂ ಹೊಂದಿರುವ ಈ ಭಾಗ ಒಂದು ನಡುಗಡ್ಡೆಯಾಗಿ ಪರಿವರ್ತನೆಯಾಗಿ ಹೋಯ್ತು. ಹಿಂದೆ ಇದ್ದಂತೆ ಈಗ ಈ ಊರುಗಳಿಂದ ಸಾಗರಕ್ಕೆ ಅಥವಾ ಯಾವುದೇ ಹೊರ ಊರಿಗೆ ಬಸ್ ಸೌಕರ್ಯ ಇಲ್ಲ. ಏನೇ ತುರ್ತು ಅಗತ್ಯಗಳಿದ್ದರೂ ಜನರು ಲಾಂಚ್ ಎನ್ನುವ ದೊಡ್ಡ ದೋಣಿಗಾಗಿ ಕಾಯಬೇಕು. ಇರುವುದು ಎರಡೇ ಲಾಂಚ್. ಈ ಲಾಂಚ್‌ಗಳ ಓಡಾಟ ಸಂಜೆ 5 ಕ್ಕೆ ಮುಗಿದು ಹೋದರೆ ಮತ್ತೆ ಮರುದಿನವೇ ಅದರ ಓಡಾಟ. ಇದೇ ಅವಸ್ಥೆಯಲ್ಲಿ ದಶಕಗಳು ಉರುಳಿದವು. ಹೊರ ಜಗತ್ತಿಗೆ ಯಾವುದೇ ಸಮಯದಲಾದರೂ ಹೋಗಿಬರಲು ಸಾಧ್ಯವಾಗುವಂತಹ ಒಂದು ಸೇತುವೆ ನಿರ್ಮಾಣಕ್ಕಾಗಿ ಜನರು ಅಧಿಕಾರಸ್ಥರಿಗೆ ಮನವಿ ಮಾಡಿ ಮಾಡಿ ಸುಸ್ತಾದರು. ಪ್ರಯೋಜನವಾಗದೇ ನಿರಾಶರಾದರು.

ಇಂತಹ ಹೊತ್ತಿನಲ್ಲಿ ಆಗ ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಈ ದ್ವೀಪಕ್ಕೆ ಹಾರಿ ಬಂದು "ನಿಮಗೆ ಸೇತುವೆ ಮಾಡಿಕೊಡುತ್ತೇನೆ. ರಕ್ತದಲ್ಲಿ ಬರೆದುಕೊಡುತ್ತೇನೆ" ಎಂದೆಲ್ಲಾ ಪ್ರತಿಜ್ಞೆ ಮಾಡಿ ಹಾರಾಡಿ, ಅರ್ಭಟಿಸಿ ಹೋದರಂತೆ. ಪಾಪ ಯಡಿಯೂರಪ್ಪನವರ ಚಾಳಿ, ಪ್ರತಿಜ್ಞಾ ಶೂರತನದ ಪೂರ್ಣ ಪರಿಚಯವಿಲ್ಲದ ಜನ ಏನೋ ಆಸೆ ಇಟ್ಟುಕೊಂಡು ಬಿಜೆಪಿಗೆ ಬೆಂಬಲ ವನ್ನು ನೀಡಿದರು. ನಮ್ಮದೇ ಜಿಲ್ಲೆಯವರಲ್ಲವೇ ಏನಾದರೂ ಮಾಡಿಯಾರು ಅಂತ ಒಂಥರಾ ಆಸೆಯೂ ಚಿಗುರಿತ್ತಂದು ಕಾಣುತ್ತದೆ. ಆಗ ಯಡಿಯೂರಪ್ಪ ಹಣಕಾಸು ಮಂತ್ರಿ ಬೇರೆ ಆಗಿದ್ದರು.

ಉಹುಂ. ಏನೂ ಆಗಲಿಲ್ಲ. ಯಡಿಯೂರಪ್ಪ ಮುಖ್ಯಮಂತ್ರಿಯೂ ಆದರು. ಮೂರು ಬಜೆಟ್ಟು ಮಂಡಿಸಿದರು. ಊಹುಂ. ಆದರೂ ಏನೂ ಆಗಲಿಲ್ಲ.

ಸೇತುವೆ ಬದಲಿಗೆ ಇನ್ನೆರಡು ಲಾಂಚ್‌ಗಳನ್ನೆ ಕೊಡೋಣ ಎನ್ನುತ್ತಾರಂತೆ ನಮ್ಮ ಮು.ಮ.ಗಳು. ಅದರಿಂದ ಸಮಸ್ಯೆ ಬಗೆ ಹರಿಯುವುದೇ ? ಹೊತ್ತಲ್ಲದ ಹೊತ್ತಲ್ಲಿ ತುರ್ತು ಅಗತ್ಯಗಳಿಗೆ ಹೊರಗೆ ಹೋಗಬೇಕಾದಾಗ ಕತೆ ಏನು (ಇಷ್ಟು ದೊಡ್ಡ ಊರಿನಲ್ಲಿ ರುವ ಸರ್ಕಾರಿ ಆಸ್ಪತ್ರೆಗೆ ವೈದ್ಯರೇ ಇಲ್ಲ ಎಂಬ ಸಂಕಟವನ್ನು ಜನ ಯಾರ ಬಳಿ ಹೇಳಿಕೊಳ್ಳುವುದು.

ಪಾಪ ನಡುಗಡ್ಡೆಯ ಜನ ರಕ್ತ ಪ್ರತಿಜ್ಞೆ ಕೇಳಿದೊಡನೆ ತಮ್ಮ ಸಮಸ್ಯೆ ಬಗೆಹರಿದೇ ಹೋಯಿತು ಎಂದು ಕೊಂಡಿದ್ದಿರಬಹುದು. ಅವರಿಗೆ ಆಗ ಗೊತ್ತಿರಲಿಲ್ಲ...... ಈ ಯಡಿಯೂರಪ್ಪ ಎಂಬ ಕಿಲಾಡಿ ರಾಜಕಾರಣಿ ವಿರೋಧ ಪಕ್ಷದ ನಾಯಕರಾಗಿ ಮತ್ತು ಸಮ್ಮಿಶ್ರ ಸರ್ಕಾರದ ಉಪ ಮುಖ್ಯಮಂತ್ರಿಯಾಗಿ ನಮ್ಮ ನಾಡಿನ ಉದ್ದಗಲಕ್ಕೆ ಇಂತಹ ಎಷ್ಟೋ ರಕ್ತ ಪ್ರತಿಜ್ಞೆಗಳನ್ನು ಮಾಡಿ ಬರುತ್ತಿದ್ದಾರೆ, ಅವುಗಳ ಲೆಕ್ಕವನ್ನೂ ಅವರು ಬರೆದಿಟ್ಟು ಕೊಳ್ಳುತ್ತಿಲ್ಲ ಎಂದು. ಈಗ ಈ ಯಡಿಯೂರಪ್ಪ ಎಂಬ ಮಹತ್ವಾಕಾಂಕ್ಷಿ ರಾಜಕಾರಣಿ ಕೊಟ್ಟ ಭರವಸೆ, ಮಾಡಿದ ಪ್ರತಿಜ್ಞೆಗಳನ್ನೆಲ್ಲ ಮರೆತು ತಣ್ಣಗೆ ಮಠ ಮಾನ್ಯಗಳಿಗೆ, ನಾಡಿನ ಮತ್ತು ಹೊರನಾಡಿನ ದೇವಾಲಯಗಳಿಗೆ ಉದಾರ ಉಂಬಳಿಗಳನ್ನು ನೀಡುತ್ತಾ, ತೀರ್ಥಕ್ಷೇತ್ರಗಳ ಯಾತ್ರೆಗಳನ್ನು ಕೈಗೊಳ್ಳುತ್ತಾ ಹೋಮ ಹವನಾದಿಗಳನ್ನು ಕೈಗೊಳ್ಳುತ್ತಾ ರಾಷ್ಟ್ರ ರಾಜಕಾರಣದ ಕನಸಿಗೆ ಏಣಿಯನ್ನು ಜೋಡಿಸುತ್ತಾ ಹಾಯಾಗಿದ್ದಾರೆ.

ಕೊಟ್ಟ ಮಾತು, ಉದುರಿಸಿದ ಆಣಿಮುತ್ತುಗಳ ಲೆಕ್ಕವನ್ನು ಯಡಿಯೂರಪ್ಪ ಅಥವಾ ಅವರ ಪಿ.ಎ. ಇಟ್ಟಿಲ್ಲದಿರಬಹುದು ಆದರೆ ಜನ ಆ ಲೆಕ್ಕ ಇಟ್ಟಿರುತ್ತಾರೆ ಎಂದು ಈ 'ಯಡ್ಡಿ'ರಿಗೆ ಯಾರು ಹೇಳುವುದು.

ಚುನಾವಣೆ ಎಂಬ ಹೊಳೆ ದಾಟಿದ ಮೇಲೆ... ವಿದ್ಯುತ್ ಶಾಕ್

ಚುನಾವಣೆಗಳ ಹೊಳೆಯನ್ನು ರಾಜ್ಯದ ಬಿಜೆಪಿ ಸರ್ಕಾರ ದಾಟಿದ್ದಾಯಿತಲ್ಲ. ಇನ್ನು ಹೊಳೆ ದಾಟಿಸಿದ ಅಂಬಿಗನ ಹಂಗೇನು ಅಲ್ಲವೇ ? ಅಂಬಿಗ, ದೋಣಿ, ಹರಿಗೋಲು ಅಂತಾ ಅವುಗಳ ಬಗೆಗೆ ಕನವರಿಸುತ್ತಾ ಕೂತರೆ ಸರ್ಕಾರ ನಡೆಸುವುದು ಸಾಧ್ಯವೇ ? ಈಗ ಮತ್ತೆ ಹತ್ತಿರದಲ್ಲಿ ಯಾವ ಚುನಾವಣೆಗಳು ಇಲ್ಲದೇ ಇರುವುದರಿಂದ ಸರ್ಕಾರ ನಿಜವಾದ ಮಾತು ಹೇಳಲೇ ಬೇಕು ಮತ್ತು ಅದು ಜಾರಿಗೆ ಬರಲೇ ಬೇಕು.

ವಿಷಯ ಏನಪ್ಪ ಅಂದರೆ ರಾಜ್ಯದ ಬಿಜೆಪಿ ಸರ್ಕಾರವು ಪಂಚಾಯತ್ ಚುನಾವಣೆಗೆ ಮುಂಚೆಯೇ ವಿದ್ಯುತ್ ಬೆಲೆಯನ್ನು ಪ್ರತಿ ಯೂನಿಟ್ಟಿಗೆ 30 ಪೈಸೆಯಷ್ಟು ಏರಿಸಿ ತೀರ್ಮಾನ ಮಾಡಿಕೊಂಡಿತು. ಪಂಚಾಯ್ತಿ ಚುನಾವಣೆಗಳು ಹತ್ತಿರದಲ್ಲಿರುವಾಗ ಜನರಿಗೆ ವಿದ್ಯುತ್ ದರ ಏರಿಕೆಯ ಶಾಕ್ ನೀಡಿದರೆ ಅವರು ಸಮ್ಮನಿರುತ್ತಾರೆಯೆ? ತಿರುಗಿಸಿ ಆಡಳಿತ ಪಕ್ಷಕ್ಕೆ ಶಾಕ್ ನೀಡುತ್ತಾರೆ. ಅದಕ್ಕೇ ಏನು ಮಾಡಬೇಕು. ಚುನಾವಣೆಯಲ್ಲಿ ಬೆಲೆ ಏರಿಕೆ ತೀರ್ಮಾನದ ಬಿಸಿ ತಟ್ಟದಂತೆ ಒಂದು ಮಹಾ ನಾಟಕವೇ ನಡೆಯಬೇಕು. ಇಂತಹ ನಾಟಕ ಮಾಡುವುದನ್ನು ಬಿಜೆಪಿಗರಿಗೆ ಯಾರಾದರೂ ಹೇಳಿಕೊಡಬೇಕೆ ?!

ಮೊದಲಿಗೆ ವಿದ್ಯುತ್ ದರ ಏರಿಕೆ ತೀರ್ಮಾನದ ಜಾರಿಯನ್ನು ಮುಂದೂಡಲಾಯಿತು. ಸರ್ಕಾರಕ್ಕೆ ಈ ದರ ಏರಿಕೆ ಇಷ್ಟವಿಲ್ಲ, ಆದರೆ ಕೆಇಆರ್‌ಸಿ ದರ ಏರಿಕೆಯ ಬಗೆಗೆ ತೀರ್ಮಾನಿಸಿ ಬಿಟ್ಟಿದೆ ಎಂಬ ಅರ್ಥದಲ್ಲಿ ಮಾತನಾಡಲಾಯಿತು. ಇಂಧನ ಸಚಿವೆ ಶೋಭಾ ಕರಂದ್ಲಾಜೆಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ವಿದ್ಯುತ್ ದರ ಏರಿಕೆ ಪ್ರಸ್ತಾಪವನ್ನು ಕೆಇಆರ್‌ಸಿ ಮರು ಪರಿಶೀಲಿಸುವಂತೆ ಸರ್ಕಾರ ಮೇಲ್ಮನವಿ ಸಲ್ಲಿಸಲಿದೆ ಎಂದೂ ಹೇಳಿಕೆ ಕೊಟ್ಟುಬಿಟ್ಟರು. ಚುನಾವಣೆಗಳು ಮುಗಿದ ಮೇಲೆ ಈಗ ದರ ಏರಿಕೆ ತೀರ್ಮಾನ ಜಾರಿಯಾಗುತ್ತಿದೆ. ದರ ಏರಿಕೆ ಮರು ಪರಿಶೀಲನೆ ಬಗೆಗೆ ಯಾರದೂ ಸದ್ದೇ ಇಲ್ಲ.

ಇದರಲ್ಲಿ ಜನ ಅರ್ಥ ಮಾಡಿಕೊಳ್ಳಬೇಕಾದ ವಿಷಯ ಏನೆಂದರೆ ಸರ್ಕಾರಕ್ಕೆ ಕೆಇಆರ್‌ಸಿಗೆ ದರ ಏರಿಕೆ ಕೈ ಬಿಡುವಂತೆ ಸೂಚಿಸುವ ಯಾವುದೇ ಆಲೋಚನೆ ಇರಲಿಲ್ಲ ಎಂಬುದು. ಅದಕ್ಕಿಂತ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ


2ಜಿ ಹಗರಣಕ್ಕೆ ವಿಕಟ ಸಮರ್ಥನೆ: ಅಳಿದುಳಿದ ಯುಪಿಎ ವಿಶ್ವಾಸಾರ್ಹತೆಗೂ ಹೊಡೆತ


2ಜಿ ಕುರಿತಂತೆ ಸಿಎಜಿ ವರದಿಯ ಲೆಕ್ಕಾಚಾರವೆಲ್ಲ ತಪ್ಪು, ಈ ತರಂಗಾಂತರ ಹಂಚಿಕೆಯಲ್ಲಿ ಸರಕಾರದ ಬೊಕ್ಕಸಕ್ಕೆ ಏನೂ ನಷ್ಟವಾಗಿಲ್ಲ, ಸಣ್ಣ-ಪುಟ್ಟ ಅಕ್ರಮಗಳಾಗಿರಬಹುದಷ್ಟೇ ಎಂಬ ಹೊಸ ಸಂಪರ್ಕ ಮಂತ್ರಿ ಕಪಿಲ ಸಿಬಾಲ್ ರವರ ಹೇಳಿಕೆಗೆ ಭಾರೀ ವಿರೋಧ ವ್ಯಕ್ತಗೊಂಡಿದೆ. ಇದರಲ್ಲಿ ಅವರ ಬೆಂಬಲಕ್ಕೆ ಯಾರೂ ಬರಲಿಲ್ಲ. ಸ್ವತಃ ಕಾಂಗ್ರೆಸ್ ವಕ್ತಾರರು ಕೂಡ ಆರಂಭದಲ್ಲಿ ಜಾರಿಕೊಳ್ಳಲು ಪ್ರಯತ್ನಿಸಿದರು. ನಂತರ ಅವರು ಸಂಪರ್ಕ ಮಂತ್ರಿಗಳ ಬೆಂಬಲಕ್ಕೆ ಬಂದಿದ್ದಾರೆ. ಸಿಎಜಿ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವ ಮೊದಲೇ ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವದರ ಬಗ್ಗೆ ಈಗ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ ಸಿಎಜಿ ಲೆಕ್ಕಾಚಾರ ಹೇಗೆ ತಪ್ಪು ಎಂದೇನೂ ವಿವರಿಸಲು ಹೋಗಿಲ್ಲ. 2010ರಲ್ಲಿ ಆದ 3ಜಿ ತರಂಗಾಂತರ ಹಂಚಿಕೆಯ ಆಧಾರದಲ್ಲಿ 2008 ರ 2ಜಿ ಹಂಚಿಕೆಯಲ್ಲಿ ನಷ್ಟವಾಗಿದೆ ಎಂಬ ತರ್ಕ ಸರಿಯಲ್ಲ ಎಂದಿರುವ ಹೊಸ ಸಂಪರ್ಕ ಮಂತ್ರಿಗಳು ಕೂಡ 2008ರಲ್ಲಿ 2001ರ ಬೆಲೆಗಳಲ್ಲಿ ಹಂಚಿಕೆ ಮಾಡುವುದು ಯಾವ ಸೀಮೆಯ ತರ್ಕ ಎಂದೇನೂ ವಿವರಿಸಿಲ್ಲ.

ಯುಪಿಎ ಸಂಪರ್ಕ ಮಂತ್ರಿಗಳ ಈ ವಿಕಟ ಸಮರ್ಥನೆಗೆ ಕಾಂಗ್ರೆಸ್‌ನ ಹಿರಿಯ ಮುಖಂಡತ್ವದ ಬೆಂಬಲವೂ ಇದೆ ಎನ್ನಲಾಗುತ್ತಿದೆ. ವಾಸ್ತವವಾಗಿ, ಈ ಹಗರಣದಿಂದ ಭಾರೀ ಬಕ್ಷೀಸು ಪಡೆದ ಕಾರ್ಪೊರೇಟುಗಳ ಪ್ರಯೋಜನಗಳನ್ನು ರಕ್ಷಿಸಲಿಕ್ಕಾಗಿಯೇ ಯುಪಿಎ ಸರಕಾರದ ಒಬ್ಬ ಪ್ರತಿನಿಧಿಯೇ ಸಿಎಜಿ ವರದಿಯನ್ನು ಟೀಕಿಸಲು ಮುಂದಾಗಿದ್ದಾರೆ. ಆದರೆ ಸಿಎಜಿ ಸರಕಾರೀ ಬೊಕ್ಕಸಕ್ಕೆ ಆದ ನಷ್ಟದ ಕುರಿತ ತನ್ನ ಲೆಕ್ಕಾಚಾರವನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿದೆ.

ಯುಪಿಎ ಸರಕಾರದ ಇಂತಹ ಸಮರ್ಥನೆಯನ್ನು ನೋಡಿದರೆ ಇದು ಕೇವಲ ಒಬ್ಬ 'ರಾಜ'ನ ಕೃತ್ಯವಲ್ಲ, ಯುಪಿಎ ಇದರಲ್ಲಿ ಬಹಳ ಆಳವಾಗಿ ಸಿಲುಕಿಕೊಂಡಿದೆ, ಅದರಿಂದ ಈ ಬಗ್ಗೆ ನಿಷ್ಪಕ್ಷಪಾತ ತನಿಖೆಯನ್ನು ನಿರೀಕ್ಷಿಸುವಂತಿಲ್ಲ, ಅಂತಹ ವಿಶ್ವಾಸಾರ್ಹತೆಯನ್ನು ಅದು ಕಳಕೊಂಡಿದೆ ಎಂದು ಹೇಳಿರುವ ಸಿಪಿಐ(ಎಂ) ಈ ಹಿನ್ನೆಲೆಯಲ್ಲಿ ಟೆಲಿಕಾಂ ಹಗರಣದ ಎಲ್ಲಾ ಆಯಾಮಗಳನ್ನು ಪರಿಶೀಲಿಸುವ ಒಂದು ಜೆಪಿಸಿ ತನಿಖೆ ನಡೆಸುವುದು ಬಹಳ ಮಹತ್ವದ್ದಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದೆ.

ಈ ನಡುವೆ ಕಾಂಗ್ರೆಸ್ ಪಕ್ಷಸಾರ್ವಜನಿಕ ಬೆಂಬಲವನ್ನು ಕಳೆದುಕೊಳ್ಳುತ್ತಿದೆ, ನಾಳೆನೇ ಚುನಾವಣೆಯೇನಾದರೂ ನಡೆದರೆ ಅದು ಕನಿಷ್ಠ 40 ಸ್ಥಾನಗಳನ್ನು ಕಳಕೊಳ್ಳಬಹುದು ಎಂದು ಒಂದು ಸಾರ್ವಜನಿಕಾಭಿಪ್ರಾಯದ ಸರ್ವೆ ಹೇಳಿದೆಯಂತೆ. ಮನಮೋಹನ್ ಸಿಂಗ್ ರವರ 'ಶುದ್ಧ' ಇಮೇಜು ಈ ಹಗರಣಗಳಿಂದಾಗಿ ಮಂಕಾಗಿದೆ ಎಂದು ಶೇ. 44 ಮಂದಿ ಹೇಳಿದ್ದಾರಂತೆ. ಶೇ.43 ಮಂದಿ ಸೋನಿಯಾ ಗಾಂಧಿ ಪ್ರತಿಷ್ಠೆ ಯನ್ನು ಕೂಡ ಇವು ತಟ್ಟಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರಂತೆ.





★

ಕಾಮನ್ವೆಲ್ತ್ ಕ್ರೀಡಾಕೂಟ ಹಗರಣದ ತನಿಖೆ ಈಗ ಯುಪಿಎ ಸರಕಾರದ ಬಾಗಿಲಲ್ಲಿ

ಜನವರಿ 8ರಂದು ಸಿಬಿಐ ಕೇಂದ್ರ ಕ್ರೀಡಾ ಇಲಾಖೆಯ ಅಂತರ್ರಾಷ್ಟ್ರೀಯ ಕ್ರೀಡಾ ವಿಭಾಗ(ಐಎಸ್‌ಡಿ)ದಲ್ಲಿ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ ಎಂದು ವರದಿಯಾಗಿದೆ. ಇಲ್ಲಿ ದೊರೆತ ದಸ್ತಾವೇಜುಗಳ ಪ್ರಮಾಣ ಕಡಿಮೆಯಾದರೂ ಅವು ಬಹಳಷ್ಟು ಮಾಹಿತಿಗಳನ್ನು ಕೊಡುವಂತವು ಎನ್ನಲಾಗಿದೆ. ಈ ಮೂಲಕ ಇದುವರೆಗೆ ಕ್ರೀಡಾಕೂಟದ ಸಂಘಟನಾ ಸಮಿತಿ ಮತ್ತು ಅದರ ಮುಖ್ಯಸ್ಥ ಸುರೇಶ ಕಲ್ಮಾಡಿ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ಈ ಹಗರಣದ ತನಿಖೆ ಕೇಂದ್ರ ಸರಕಾರದ ಮನೆ ಬಾಗಿಲಿಗೇ ಬಂದಂತಾಗಿದೆ.

ಇಲ್ಲಿ ಈ ಕುರಿತು ವಿಶೇಷವಾಗಿ ರಚಿಸಿದ 'ಮಂತ್ರಿಗಳ ಗುಂಪು'(ಜಿಒಎಂ)ನ ಸಭೆಗಳ, ಕಾರ್ಯದರ್ಶಿಗಳ ಸಮಿತಿಯ ಮತ್ತು ಸರಕಾರ ರಚಿಸಿದ ಮೂಲ ರಚನೆ ಉಸ್ತುವಾರಿ ಸಮಿತಿಯ ಕಲಾಪಗಳುಮತ್ತು ಕೇಂದ್ರ ಸಂಪುಟದ ಟಿಪ್ಪಣಿಗಳ ಸಂಗ್ರಹ ದೊರೆತಿದ್ದು ಇವು ಈ ಹಗರಣದ ಮೇಲೆ ಬಹಳಷ್ಟು ಬೆಳಕು ಚೆಲ್ಲಬಹುದು ಎನ್ನಲಾಗಿದೆ. ಸುರೇಶ ಕಲ್ಮಾಡಿಯವರ 9 ಗಂಟೆಗಳ ವಿಚಾರಣೆಯ ವೇಳೆಯಲ್ಲಿ ತಾನು ಎಲ್ಲ ಬೆಳವಣಿಗೆಗಳ ಬಗ್ಗೆ ಎರಡು ಸರಕಾರೀ ಏಜೆಂಸಿಗಳಿಗೆ- ಜಿಒಎಂ ಮತ್ತು ಕ್ರೀಡಾ ಸಚಿವಾಲಯ- ಮಾಹಿತಿ ಕೊಡುತ್ತಲೇ ಇದ್ದುದಾಗಿ ಮತ್ತೆ- ಮತ್ತೆ ಹೇಳಿದರಂತೆ.

ಈ ನಡುವೆ ಸುರೇಶ ಕಲ್ಮಾಡಿ ನೇತೃತ್ವದ ಸಂಘಟನಾ ಸಮಿತಿಯ ವ್ಯವಹಾರಗಳ ಬಗ್ಗೆ ಮಹಾಲೆಕ್ಕ ಪರಿಶೋಧಕ(ಸಿಎಜಿ)ರು ತಮ್ಮ ವರದಿಯನ್ನು ಅಂತಿಮಗೊಳಿಸಿದ್ದಾರೆ. 16 ವಿವಿಧ ಐಟಂಗಳಿಗೆ ಮಾರುಕಟ್ಟೆ ಬೆಲೆಗಳಿಗಿಂತ ಹೆಚ್ಚಿನ ಬೆಲೆ ತೆತ್ತು ಸರಕಾರಕ್ಕೆ ಈ ಬಾಬ್ತಿನಲ್ಲೆ ಕನಿಷ್ಟ 243 ಕೋಟಿ ರೂ. ನಷ್ಟವಾಗುವಂತೆ ಮಾಡಲಾಗಿದೆ ಎಂದು ಸಿಎಜಿ ಹೇಳಿದೆ. ಈ ಐಟಂಗಳ ಮಾರಾಟಗಾರರು ತಮ್ಮದೇ ಕೂಟಗಳನ್ನು ರಚಿಸಿಕೊಳ್ಳಲು ಅವಕಾಶ ಕೊಟ್ಟು ಇಂತಹ ಲೂಟಿ ನಡೆಸಲಾಗಿದೆಯಂತೆ. ಹಲವು ಅಕ್ರಮಗಳು, ಐಟಂಗಳನ್ನು ಮಾರಿದವರು/ಬಾಡಿಗೆಗೆ ಕೊಟ್ಟವರು ಬೆಲೆಗಳನ್ನು ಉಬ್ಬಿಸಿದ ಪ್ರಮಾಣ ಮತ್ತು ಈ ವ್ಯವಹಾರಗಳನ್ನು ಅಂತಿಮಗೊಳಿಸಿದ ರೀತಿಗಳನ್ನು ನೋಡಿದರೆ ಇವೆಲ್ಲ ಆಕಸ್ಮಾತ್ತಾಗಿ ಅಥವ ಕಣ್ತಪ್ಪಿನಿಂದ ಆದ ಪ್ರಮಾದಗಳೆನಿಸುವುದಿಲ್ಲ, ಇದು ಉದ್ದೇಶಪೂರ್ವಕವಾಗಿಯೇ ನಡೆದಿರುವ ಸರಕಾರೀ ಹಣದ ದುರುಪಯೋಗ ಮತ್ತು ಪ್ರಚಾರಕ್ಕಿಳಿಯುವ ಸಂಘಟನಾ ಸಮಿತಿಯ ನಿರ್ಣಯದ ಅಂತಿಮ ಫಲ ಎಂದು ಸಿಎಜಿ ಟಿಪ್ಪಣಿ ಮಾಡಿದೆ

★

ಆಹಾರ ಹಣದುಬ್ಬರ 18.32ಶೇ.: ಯುಪಿಎ ಸರಕಾರಕ್ಕಿರುವ 'ನಿರ್ಬಂಧ'ವೇ ಕಾರಣ!?

ಕಳೆದ ವಾರ ಈ ಅಂಕಣದಲ್ಲಿ ಗಮನಿಸಿದಂತೆ ಯುಪಿಎ ಪ್ರಧಾನಿಗಳ ಹೊಸ ವರ್ಷದ ಆಶಯ ಎಲ್ಲ ರೀತಿಗಳಲ್ಲೂ ಹುಸಿಗೊಳ್ಳುತ್ತಿರುವಂತೆ ಕಾಣುತ್ತಿದೆ. ಡಿಸೆಂಬರ್ 25ರ ವಾರಾಂತ್ಯದಲ್ಲಿ ಆಹಾರ ಹಣದುಬ್ಬರ ಶೇ.18.32ಕ್ಕೆ ನಾಗಾಲೋಟ ಹೂಡಿದೆ. ಒಂದು ತಿಂಗಳಲ್ಲೇ ಅದು ಎರಡು ಪಟ್ಟಾಗಿದೆ. ಕಳೆದ ವಾರವಷ್ಟೇ ಅದು 14.44ಶೇ. ಇತ್ತು. ಈ ಏರಿಕೆ ನಿಲ್ಲುವ ಸಂಭವವೂ ಕಾಣುತ್ತಿಲ್ಲ, ಯುಪಿಎ ಸರಕಾರಕ್ಕೇ ಇದು ಅನಿರೀಕ್ಷಿತವಾಗಿತ್ತಂತೆ. ಬಹುಶಃ 'ಆಮ್ ಆದ್ಮಿ'ಗೆ ಕೊಡುತ್ತಿದ್ದ ಹುಸಿ ಭರವಸೆಗಳನ್ನು ತಾವೇ ನಂಬಲಾರಂಭಿಸಿರಬೇಕು. ಅದೀಗ ಕೈಚೆಲ್ಲಿ ಕೂತಿರುವಂತೆ ಕಾಣುತ್ತಿದೆ. ಬೆಲೆಗಳು ಪೂರ್ಣವಾಗಿ 'ತನ್ನ ಕೈಯಲ್ಲಿಲ್ಲ' ಎಂದು ಅದು ಹೇಳಲಾರಂಭಿಸಿದೆ. ಇನ್ನು ಯಾರ ಕೈಗೆ ಅದನ್ನು ಒಪ್ಪಿಸಿದೆಯೋ ಗೊತ್ತಿಲ್ಲ.

ಜನವರಿ 11ರಂದು ನಡೆದ ಯುಪಿಎ ಸರಕಾರದ ಉನ್ನತ ಮುಖಂಡರ ಸಭೆ ಸಮಸ್ಯೆಯನ್ನು ಚರ್ಚಿಸಿತಂತೆ. ಆದರೆ ಬೆಲೆಯೇರಿಕೆ ತಡೆಯುವ ಯಾವ ಕ್ರಮಗಳನ್ನೂ ಪ್ರಕಟಿಸಿಲ್ಲ. ಚರ್ಚೆ ಮುಗಿದಿಲ್ಲವಂತೆ. ಎಪಿಎಲ್ ಬೆಲೆಗಳನ್ನು ಶೇ.40 ದಷ್ಟು ಏರಿಸುವ ಹಿಂದಿನ ನಿರ್ಣಯಕ್ಕೆ ತಡೆ ಹಾಕಿದೆಯಷ್ಟೇ. ಇನ್ನೆರಡು ದಿನಗಳಲ್ಲಿ ಬೆಲೆಯೇರಿಕೆ ತಡೆಯುವ ಕ್ರಮಗಳನ್ನು ಪ್ರಕಟಿಸಲಾಗುವುದಂತೆ.

ಯುಪಿಎ-2 ಸರಕಾರವನ್ನು ಬಾಧಿಸುತ್ತಿರುವ ಈ ಬೆಲೆಯೇರಿಕೆ ಮತ್ತು ಭ್ರಷ್ಟಾಚಾರದ ಬಗ್ಗೆ ಕೇಳಿದಾಗ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಇದಕ್ಕೆಲ್ಲ ಸಮ್ಮಿಶ್ರ ಸರಕಾರಗಳ ರಾಜಕೀಯ ಕಾರಣ ಎಂದಿದ್ದಾರೆ. ಸಮ್ಮಿಶ್ರ ಸರಕಾರ ನಡೆಸುವಲ್ಲಿ ಕೆಲವು 'ನಿರ್ಬಂಧ'ಗಳಿರುತ್ತವಂತೆ. ಅದಕ್ಕೆ ಬೆಲೆಗಳು ಏಕೆ ಏರಬೇಕೋ, ಭ್ರಷ್ಟಾಚಾರ ಏಕೆ ಹೆಚ್ಚಬೇಕೋ ಗೊತ್ತಿಲ್ಲ. ಈಗ ಬಯಲಾಗಿರುವ ಹಗರಣಗಳಲ್ಲಿ ಅವರ ಪಕ್ಷದ್ದೇ ಸಿಂಹಪಾಲು, ನಂತರದ ಸ್ಥಾನ ಇನ್ನೊಂದು ಸಮ್ಮಿಶ್ರ ಕೂಟದ ನೇತೃತ್ವದಲ್ಲಿರುವ ಪಕ್ಷದ್ದು. 2ಜಿ ಹಗರಣದಲ್ಲಿ ಮೇಲ್ನೋಟಕ್ಕೆ ಕಾಂಗ್ರೆಸಿನ ಮಿತ್ರಪಕ್ಷದ ಮಂತ್ರಿಯ ಪಾತ್ರವಿದ್ದರೂ, ಮೇಲೆ ಹೇಳಿದಂತೆ ಆತನ ಸ್ಥಾನಕ್ಕೆ ಬಂದಿರುವ ಕಾಂಗ್ರೆಸಿನ ಮಂತ್ರಿ ಸಿಎಜಿ ಲೆಕ್ಕಾಚಾರವೇ ತಪ್ಪು, ಸರಕಾರಕ್ಕೇನೂ ಹಾನಿಯಾಗಿಲ್ಲ ಎಂದಿದ್ದಾರೆ, ಕಾಂಗ್ರೆಸ್ ಪಕ್ಷವೂ ಅದನ್ನು ಅನುಮೋದಿಸಿದೆ. ಅಂದರೆ ಇದರಲ್ಲಿಯೂ ಮುಖ್ಯ ಪಾ(ಲು)ತ್ರ ಯಾರದ್ದು ಎಂಬ ಸಂಕೇತ ಸಿಗುತ್ತದೆ.

ತೆಲಂಗಾಣ: ಕಾಂಗ್ರೆಸ್‌ಗೆ ಸಮಯಸಾಧಕತನದಿಂದಾಗಿ ಮುಕ್ತಿಯಿಲ್ಲ

ಶ್ರೀಕೃಷ್ಣ ಆಯೋಗ ತೆಲಂಗಾಣ ರಾಜ್ಯ ಬೇಡಿಕೆ ಕುರಿತಂತೆ ನೀಡಿರುವ ವರದಿ ಯುಪಿಎ ಸರಕಾರಕ್ಕೆ ತಲೆನೋವನ್ನೇನೂ ಕಡಿಮೆ ಮಾಡಿಲ್ಲ. ಅದು ಆರು 'ದಾರಿ'ಗಳನ್ನು ಸೂಚಿಸಿದೆ. ಅದರ ಪ್ರಕಾರವೇ ಅತ್ಯುತ್ತಮವಾದುದು ಆಂಧ್ರಪ್ರದೇಶದ ಐಕ್ಯತೆಯನ್ನು ಉಳಿಸಿಕೊಂಡು ಕಾನೂನುಬದ್ಧ ಅಧಿಕಾರಗಳಿರುವ ತೆಲಂಗಾಣ ಪ್ರಾದೇಶಿಕ ಮಂಡಳಿಯನ್ನು ರಚಿಸುವುದು.

ಡಿಸೆಂಬರ್ 9, 2009ರಂದು ಕೇಂದ್ರ ಗ್ರಹಮಂತ್ರಿಗಳು ತೆಲಂಗಾಣ ರಾಜ್ಯದ ರಚನೆಯ ಪರವಾಗಿ ಮಾತಾಡಿ ನಂತರ ಸಂಪೂರ್ಣ ವಿರುದ್ಧ ನಿಲುವು ತಳೆದ ಪರಿಣಾಮವಾಗಿ ಉಂಟಾದ ಪರಿಸ್ಥಿತಿಯಿಂದ ಹೊರಬರಲು ಶ್ರೀಕೃಷ್ಣ ಆಯೋಗದ ವರದಿಯ ನೆರವೂ ಈಗ ಸಿಗುತ್ತಿಲ್ಲ. ಆಂಧ್ರ ಒಂದಾಗಿರಬೇಕು ಎನ್ನುವವರು ಮತ್ತು ತೆಲಂಗಾಣ ಪ್ರತ್ಯೇಕವಾಗಲೇಬೇಕು ಎನ್ನುವವರು- ಎರಡೂ ಕಡೆಯಿಂದ ಯುಪಿಎ ನೇತೃತ್ವ ವಹಿಸಿರುವ ಕಾಂಗ್ರೆಸ್ ಟೀಕೆಗಳನ್ನು ಎದುರಿಸಬೇಕಾಗಿ ಬಂದಿದೆ. ಒಂದು ಸ್ಪಷ್ಟ ಸೈದ್ಧಾಂತಿಕ ನಿಲುವಿನ ಅಭಾವಕ್ಕೆ ಕಾಂಗ್ರೆಸ್ ಬೆಲೆ ತೆರಬೇಕಾಗಿ ಬಂದಿದೆ.

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

ಅಲ್ಜೀರ್ಸ್ ಘೋಷಣೆ : ವಸಾಹತುಶಾಹಿ-ವಿರೋಧಿ ನಿರ್ಣಯದ ಸುವರ್ಣ ವಾರ್ಷಿಕ

ಆಫ್ರಿಕಾ ಮತ್ತು ಜಗತ್ತಿನಾದ್ಯಂತ ವಸಾಹತುಶಾಹಿ ಕೊನೆಗೊಳಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿದವರು ಮತ್ತು ಆ ಪ್ರಕ್ರಿಯೆ ಮುಗಿಸುವ ಆಸಕ್ತಿ ಇರುವವರಿಗೆಲ್ಲಾ ಸಂತಸ ತಂದ ಒಂದು ಮಹತ್ವದ ಸಮ್ಮೇಳನ ಇತ್ತೀಚೆಗೆ ಅಲ್ಜೀರಿಯಾದ ರಾಜಧಾನಿ ಅಲ್ಜೀರ್ಸ್ ನಲ್ಲಿ ನಡೆಯಿತು. ಡಿಸೆಂಬರ್ 14, 1960 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರಿಸಿದ ನಿರ್ಣಯ ಸಂಖ್ಯೆ 1514 ರ ಸುವರ್ಣ ವಾರ್ಷಿಕದ ಸಂದರ್ಭದಲ್ಲಿ ಈ ಸಮ್ಮೇಳನದ ಏರ್ಪಾಡು ಆಗಿತ್ತು. ಆ ನಿರ್ಣಯ ಜಗತ್ತಿನಲ್ಲಿ ವಸಾಹತುಶಾಹಿ ಕೊನೆಗೊಳಿಸಲು ಚಾರಿತ್ರಿಕ ಕರೆ ಕೊಟ್ಟಿತ್ತು. ಸಮ್ಮೇಳನದಲ್ಲಿ ಅಲ್ಜೀರಿಯಾದ ವಿಮೋಚನಾ ಚಳುವಳಿಯ ಹೀರೋ ಮತ್ತು ಮೊದಲ ಅಧ್ಯಕ್ಷ 92 ವರ್ಷದ ಅಹ್ಮದ್ ಬೆನ್ ಬೆಲ್ಲಾ, ಆಫ್ರಿಕಾದ ವಸಾಹತುಶಾಹಿ-ವಿರೋಧ ಚಳುವಳಿಯ ಪ್ರಮುಖ ನಾಯಕರಾದ ಪ್ಯಾಟ್ರಿಕ್ ಲುಮುಂಬಾ, ಕ್ವಾಮೆ ಎನ್ಕ್ರೂಮಾ ಮತ್ತಿತರರ ಮಕ್ಕಳು ಉಪಸ್ಥಿತರಿದ್ದರು. ಜಾಂಬಿಯಾ, ದಕ್ಷಿಣ ಆಫ್ರಿಕಾ, ಮತ್ತು ನೈಜೀರಿಯಾಗಳ ಮಾಜಿ ಅಧ್ಯಕ್ಷರುಗಳಾದ (ಅನುಕ್ರಮವಾಗಿ) ಕೆನೆತ್ ಕೊಂಡಾ, ತಾಬೋ ಮೆಬೇಕಿ, ಒಲುಸೆಗನ್ ಒಬಸಾಂಜೋ ಸಹ ಹಾಜರಿದ್ದರು. ಗ್ವಾಟೆಮಾಲಾದ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ರಿಗೊಬೆರ್ತಾ ಮೆಂಚು ಸಹ ಭಾಗವಹಿಸಿದ್ದರು.

"ಕ್ರಾಂತಿಕಾರಿಗಳು ಅಲ್ಜೀರಿಯಾಕ್ಕೆ ಹೋಗ್ತಾರೆ"

ಅಲ್ಜೀರ್ಸ್ ನಲ್ಲಿ ನಡೆದ ಸುವರ್ಣ ವಾರ್ಷಿಕ ಸಮ್ಮೇಳನದಲ್ಲಿ ಒಂದು ಘೋಷಣೆಯನ್ನು ಅಂಗೀಕರಿಸಲಾಯಿತು. ವಸಾಹತುಶಾಹಿ ತೆರವು ಮಾಡುವ ಪ್ರಕ್ರಿಯೆ ಇನ್ನೂ ಪೂರ್ತಿಯಾಗದ ಇಂದಿನ ಸಂದರ್ಭದಲ್ಲಿ ವಿಶ್ವಸಂಸ್ಥೆಯ ನಿರ್ಣಯ ಸಂಖ್ಯೆ 1514 ರ ಔಚಿತ್ಯ ಇನ್ನೂ ಇದೆ. ವಸಾಹತುಶಾಹಿ ಕೊನೆಗೊಳ್ಳದ ಪ್ಯಾಲೆಸ್ಟೈನ್ ಮತ್ತು ಪಶ್ಚಿಮ ಸಹಾರಾ ಮುಂತಾದ ದೇಶಗಳ ಸ್ವಯಂ ನಿರ್ಧಾರದ ಹಕ್ಕು ಸ್ಥಾಪಿಸಲು ಅಂತರ್ರಾಷ್ಟ್ರೀಯ ಸಮುದಾಯದಿಂದ ಇನ್ನೂ ಹೆಚ್ಚಿನ ನಿರ್ಣಾಯಕ ಕಾರ್ಯಾಚರಣೆ ಮತ್ತು ಪ್ರಬಲ ಬೆಂಬಲದ ತುರ್ತು ಅಗತ್ಯ ಇದೆ. ಎಲ್ಲಾ ರೂಪ ಮತ್ತು ಅವತಾರಗಳಲ್ಲಿ ವಸಾಹತುಶಾಹಿ ವಿಶ್ವಸಂಸ್ಥೆಯ ಸನದಿಗೆ ವಿರುದ್ಧವಾದದು. ಅದನ್ನು ಕೊನೆಗೊಳಿಸುವುದು ಅನಿವಾರ್ಯ ಎಂದು "ಅಲ್ಜೀರ್ಸ್ ಘೋಷಣೆ" ಸಾರಿದೆ.

"ಅಲ್ಜೀರ್ಸ್ ಘೋಷಣೆ" ಯೊಂದಿಗೆ ಅಲ್ಜೀರಿಯಾ ಪುನಃ ಅಂತರ್ರಾಷ್ಟ್ರೀಯ ವಿದ್ಯಮಾನ ಗಳಲ್ಲಿ ಪ್ರಮುಖ ಪಾತ್ರ ವಹಿಸಲಾರಂಭಿಸಿದೆ. ಅಲ್ಜೀರ್ಸ್ ವಸಾಹತುಶಾಹಿ- ವಿರೋಧಿ ಚಳುವಳಿಗಳ ರಾಜಧಾನಿಯಾಗಿತ್ತು. 1960-70 ರ ದಶಕದಲ್ಲಿ ಸುಮಾರು 20 ಆಫ್ರಿಕಾದ ವಿಮೋಚನಾ ಹೋರಾಟ ಸಂಘಟನೆಗಳ ಮುಖ್ಯ ಕಚೇರಿ ಅಲ್ಜೀರ್ಸ್ ನಲ್ಲಿ ಇತ್ತು. "ಧಾರ್ಮಿಕ ನಂಬಿಕೆಯವರು ಮೆಕ್ಕಾಗೆ ಹೋಗ್ತಾರೆ, ಕ್ರಾಂತಿಕಾರಿಗಳು ಅಲ್ಜೀರಿಯಾಕ್ಕೆ ಹೋಗ್ತಾರೆ" ಎಂಬ ಮಾತು ಆಗ ಚಾಲ್ತಿಯಲ್ಲಿತ್ತು. ಪೋರ್ಚುಗಲ್‌ನ ಫ್ಯಾಸಿಸ್ಟ್ ಸರ್ವಾಧಿಕಾರಿ ಸಾಲ್ಜಾರ್ ವಿರುದ್ಧ ಗೆರಿಲ್ಲಾ ವಿಮೋಚನಾ ಹೋರಾಟದ ಮುಖ್ಯ ಕಚೇರಿ ಸಹ ಅಲ್ಜೀರ್ಸ್ ನಲ್ಲಿ ಇತ್ತು. 1980 ರ ದಶಕದವರೆಗೂ ಅಲ್ಜೀರಿಯಾದ ಈ ಪಾತ್ರ ಮುಂದುವರೆದಿತ್ತು. ಆದರೆ 1990 ರ ದಶಕದಲ್ಲಿ ಆಂತರಿಕ ರಾಜಕೀಯ ಬೆಳವಣಿಗೆಗಳಿಂದ ಈ ಪ್ರಕ್ರಿಯೆಗೆ ಅಡ್ಡಿ ಉಂಟಾಗಿತ್ತು. ಈಗ ಅಬ್ದೆಲಾಜಿಜ್ ಅಧ್ಯಕ್ಷರಾದ ನಂತರ ಪುನಃ ಆ ಪ್ರಕ್ರಿಯೆ ಮುಂದುವರೆದಿದೆ.



"ಡಿಯಾಗೊ ಗಾರ್ಸಿಯಾದಿಂದ ಜಾಗ ಖಾಲಿ ಮಾಡಿ"

ವಿಶ್ವಸಂಸ್ಥೆ ತೆರವು ಮಾಡಲು ಕರೆ ಕೊಡುವ ನಿರ್ಣಯ ಸಂಖ್ಯೆ 1514 ರ ಆಫ್ರಿಕಾ, ಏಶ್ಯಾಮತ್ತು ಲ್ಯಾಟಿನ್ ಅಮೆರಿಕದ ಸುಮಾರು ನೂರಕ್ಕೂ ಹೆಚ್ಚು ವಸಾಹತುಗಳ ವಿಮೋಚನಾ ಹೋರಾಟದ ಚಾರಿತ್ರಿಕ ವಿಜಯಗಳಲ್ಲಿ ಮಹತ್ವದ ಪಾತ್ರ ವಹಿಸಿತು. ಎನ್ನುವುದಕ್ಕೆ ಈಗ ಯಾವುದೇ ಸಂಶಯ ಇಲ್ಲ. 1954 ರಲ್ಲಿ ಆರಂಭವಾಗಿ 1960 ರ ಹೊತ್ತಿಗೆ ತಾರಕಕ್ಕೆ ಮುಟ್ಟಿದ ಅಲ್ಜೀರಿಯಾದ ವಿಮೋಚನಾ ಹೋರಾಟಕ್ಕೆ ಸಿಕ್ಕ ಅಂತರ್ರಾಷ್ಟ್ರೀಯ ಸ್ಪಂದನ ಮತ್ತು ಲುಮುಂಬಾ ಹತ್ಯೆ ಈ ನಿರ್ಣಯದ ರೂಪಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬರ್ಬರ ಫ್ರೆಂಚ್ ವಸಾಹತುಶಾಹಿ ವಿರುದ್ಧ ಹೋರಾಟ ಎಷ್ಟು ಭೀಕರವಾಗಿತ್ತೆಂದರೆ, ಅಲ್ಜೀರಿಯಾದ 90 ಲಕ್ಷ ಜನರಲ್ಲಿ 10 ಲಕ್ಷ ತಮ್ಮ ಪ್ರಾಣಾರ್ಪಣೆ ಮಾಡಿದರು. ವಸಾಹತುಶಾಹಿಯಿಂದ ವಿಮೋಚನೆಯ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ ಎಂದು ಸಮ್ಮೇಳನದಲ್ಲಿ ಮಾತನಾಡಿದ ಎಲ್ಲರೂ ಒತ್ತಿ ಹೇಳಿದರು.

ಇನ್ನೂ ವಸಾಹತುಶಾಹಿಯನ್ನು ಬೇರೆ ಬೇರೆ ರೂಪದಲ್ಲಿ ಎದುರಿಸುತ್ತಿರುವ ಪ್ಯಾಲೆಸ್ಟೈನ್, ಪಶ್ಚಿಮ ಸಹಾರಾದ ಮತ್ತು ಸುಮಾರು 16 ಇತರ ದೇಶಗಳ ಸ್ವಯಂನಿರ್ಧಾರ ಅಥವಾ ಸ್ವಾತಂತ್ರ್ಯದ ಸಮಸ್ಯೆ ಪ್ರಧಾನವಾಗಿ ಸಮ್ಮೇಳನದಲ್ಲಿ ಪ್ರಸ್ತಾಪವಾಯಿತು. ವಿಶ್ವಸಂಸ್ಥೆ ಈ ನಿಟ್ಟಿನಲ್ಲಿ ಹೆಚ್ಚಿನ ಜವಾಬ್ದಾರಿ ಮುತುವರ್ಜಿ ತೋರಿಸಬೇಕೆಂದು ಹಲವರು ಒತ್ತಾಯಿಸಿದರು. ಮಾರಿಶಸಿಗೆ ಸೇರಿದ ಡಿಯಾಗೊ ಗಾರ್ಸಿಯ ದ್ವೀಪಗಳನ್ನು ಹಿಂದೆ ಬ್ರಿಟನ್ ಅಮೆರಿಕಕ್ಕೆ ಕಾನೂನು ಬಾಹಿರವಾಗಿ ಲೀಸಿಗೆ ಕೊಟ್ಟಿದೆ. ಅದನ್ನು ವಾಪಸು ಪಡೆಯಲು ಒತ್ತಡ ಹೇರಬೇಕು ಎಂದು ಮಾರಿಶಸಿನ ವಿದೇಶ ಮಂತ್ರಿ ಹೇಳಿದರು. ವಸಾಹತುಶಾಹಿ ತೆರವಿಗೆ ಅಂತರ್ರಾಷ್ಟ್ರೀಯ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ಬದಲು, ಅಂತರ್ರಾಷ್ಟ್ರೀಯ ಕೋರ್ಟು ಯುಗೊಸ್ಲಾವಿಯ ದೇಶವನ್ನು ಜನಾಂಗೀಯ-ಧಾರ್ಮಿಕ ಆಧಾರದ ಮೇಲೆ ಒಡೆಯುವ ಮತ್ತು ಅದಕ್ಕೆ ಪ್ರತಿರೋಧ ತೋರಿದ ಮಿಲೊಸೆವಿಕ್ ಅವರ ಅಣಕು ವಿಚಾರಣೆ ನಡೆಸಿ ಶಿಕ್ಷಿಸಿದೆ. ಅವರ ವಿಚಾರಣೆಯಲ್ಲಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಲಾಯಿತು ಎಂಬುದು ಸಹ ಪ್ರಸ್ತಾಪವಾಯಿತು.

.. ಎಷ್ಟೊಂದು ಹತ್ಯಾರಗಳು

ಪುಟ 3 ರಿಂದ

ತಿಳಿಯಬೇಕಿದ್ದರೆ ರಾಜಭವನಕ್ಕೆ ಬನ್ನಿ, ದಾಖಲೆಗಳನ್ನು ನೋಡಿ' ಎಂದು ಬಹಿರಂಗವಾಗಿ ಕಿಡಿಕಾರಿದ್ದ ರಾಜ್ಯಪಾಲರ ಮೇಲೆ ಬಿಜೆಪಿ ಎಲ್ಲರೂ ಮುಗಿಬಿದ್ದಿದ್ದೂ ಆಯ್ತು. ಆದರೆ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆಯವರೇ "ಅಕ್ರಮಗಳ ಬಗ್ಗೆ ಖಚಿತಪಡಿಸಿ, ಸಂದರ್ಭ ಬಂದಾಗ ದಾಖಲೆಸಮೇತ ವಿವರ ಹೊರಗಿಡುವೆ. ಈಗಲೂ ಹೊರರಾಜ್ಯಗಳ ಮೂಲಕ ಸಾಗಿಸಲಾಗುತ್ತಿದೆ" ಎಂದೂ ಹೇಳಿಯಾಯ್ತು. ಅವರ ಮೇಲೂ ಆಡಳಿತ ಪಕ್ಷದವರ ಕೆಸರಾಟ! ಅರಚಾಟ!

ಇದೀಗ ಕರ್ನಾಟಕ, ಆಂಧ್ರದ ಗಡಿಯಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಬಗ್ಗೆ ವಿವರವಾದ ವರದಿ ಸಲ್ಲಿಸುವಂತೆ ಸುಪ್ರಿಂ ಕೋರ್ಟ್ ಕಳುಹಿಸಿದ ಉನ್ನತಾಧಿಕಾರ ಸಮಿತಿ (ಸಿ.ಇ.ಸಿ.)ಯು ಅಲ್ಲಿ ನಡೆದ ಅಕ್ರಮಗಳನ್ನು ದೃಢೀಕರಿಸಿದೆ. ಮಾತ್ರವಲ್ಲ ರೆಡ್ಡಿ ಮಾಲೀಕತ್ವದ ಓಬಳಾಪುರಂ ಕಂಪನಿ ಒಳಗೊಂಡು ಅವರ ಒಟ್ಟು ನಾಲ್ಕು ಕಂಪನಿಗಳು ಅರಣ್ಯ ಪ್ರದೇಶದಲ್ಲಿ ಅಕ್ರಮ ಅದಿರು ವ್ಯವಹಾರ ನಡೆಸಿದ್ದು ಅವುಗಳ ಪರವಾನಗಿ ರದ್ದುಪಡಿಸುವಂತೆ ಶಿಫಾರಸು ಮಾಡಿದೆ. ಪರಿಸರ ಸಂರಕ್ಷಣೆಯ ಎಲ್ಲಾ ನಿಯಮ ಗಾಳಿಗೆ ತೂರಿದೆ ಎಂದೂ ಹೇಳಿದೆ. ಡಿಸೆಂಬರ್ 15 ರಿಂದ 29ರವರೆಗೆ ಎಲ್ಲಾ ಹಂತಗಳಲ್ಲಿ ಪರಿಶೀಲನೆ ನಡೆಸಿ ನೀಡಿದ ವರದಿಯಿದು.

ಇದರಲ್ಲಿ ಇನ್ನೂ ಒಂದು ಮುಖ್ಯ ಅಂಶವೆಂದರೆ ಅಧಿಕಾರಿಗಳು ಗಣಿಗಾರಿಕೆ ಪರವಾನಗಿಯನ್ನು ಅಕ್ರಮವಾಗಿ ವಿಸ್ತರಿಸಿರುವುದು. ಅಂದರೆ ಕರ್ನಾಟಕ ಆಂಧ್ರದ ರಾಜ್ಯ ಸರ್ಕಾರಗಳ ನೇರ ಪಾತ್ರವಿಲ್ಲದೇ ಇದು ಅಸಾಧ್ಯ. ಹೀಗಾಗಿ ಪರವಾನಗಿ ಪಡೆದ ಪ್ರಮಾಣಕ್ಕಿಂತ ಮೂರುಪಟ್ಟು ಗಣಿಗಾರಿಕೆ ರಫ್ತು ಆಗಿದೆ.

ಈ ವರದಿ ಬಂದ ಸಲ್ಲಿಸಿದ ನಂತರ ಇನ್ನಷ್ಟು ವಿವರ ತನಿಖೆ ನಡೆಸಲು ಮಾಹಿತಿ ಪಡೆಯಲು ಸಿ.ಬಿ.ಐ. ತಂಡ ಉಭಯ ರಾಜ್ಯಗಳಿಗೂ ಗಣಿ, ಗಡಿ ಪ್ರದೇಶಗಳಿಗೆ ಭೇಟಿ ನೀಡಿದೆ. ಇದು ಹಿಂದೆ ಆಂಧ್ರ ಸರ್ಕಾರ ಆದೇಶಿಸಿದ ವಿಚಾರಣೆಯ ಮುಂದುವರೆದ ಭಾಗವೂ ಆಗಿದೆ. (ಈ ತನಿಖೆಗೆ ಆದೇಶಿಸಿ ಹತ್ತಾರು ತಿಂಗಳೇ ಆದವು ಎಂಬುದು ಬೇರೆ ಮಾತು)

ತೀರಾ ಇತ್ತೀಚೆಗೆ ಕೇಂದ್ರ ತೆರಿಗೆ ಇಲಾಖೆ ಅಧಿಕಾರಿಗಳು ತನಿಖೆ ನಡೆಸಿ ಜನಾರ್ಧನರೆಡ್ಡಿ ಬ್ರದರ್ಸ್‌ಗಳು ಅದಿರು ವ್ಯವಹಾರದಲ್ಲಿ 86 ಕೋಟಿ ತೆರಿಗೆಯನ್ನು ವಂಚಿಸಿದ್ದಾರೆ ಎಂದು ಪತ್ತೆಹಚ್ಚಿ ಪ್ರಕಟಿಸಿದ್ದರು.

ಪರಿಸ್ಥಿತಿ ಹೀಗಿರುವಾಗ - ಜನಾರ್ಧನರೆಡ್ಡಿ, ಕರುಣಾಕರರೆಡ್ಡಿ, ಶ್ರೀರಾಮುಲುರವರ ಮೇಲೆ ಬಿಜೆಪಿ ಸರ್ಕಾರ ಕಾನೂನಿನಂತೆ ಕ್ರಮ ವಹಿಸುತ್ತಿಲ್ಲ. ಸಚಿವ ಸ್ಥಾನದಿಂದ ತೆಗೆಯುತ್ತಲೂ ಇಲ್ಲ. ಕ್ರಿಮಿನಲ್ ಮೊಕದ್ದಮೆ ಹೂಡುತ್ತಲೂ ಇಲ್ಲ.

ಈಗಲಾದರೂ ಇನ್ನಷ್ಟು ಲೂಟಿ ನಿಲ್ಲಿಸಬೇಕಾದರೆ ಕೂಡಲೇ ಗಣಿಗಳ್ಳರನ್ನು ಸಂಪುಟದಿಂದ ವಜಾಗೊಳಿಸಿ, ಕ್ರಿಮಿನಲ್ ಕೇಸ್ ಹಾಕಿ ಕ್ರಮ ವಹಿಸಬೇಕು. ಆದರೆ ಹಿಡಿದುಕೊಂಡ ಕುರ್ಚಿ ಯಡ್ಡಿ ಏನು ಮಾಡುವರು ಅದಂತೂ ಗೊತ್ತೇ ಇದೆ.

ತ್ರಿಶೂರ್ ಕಾಂಗ್ರೆಸಿನಲ್ಲಿ ಕೇಳಿ ಬಂದ ಕೆಲವು ದನಿಗಳು

ಪುಟ 11 ರಿಂದ

ಮೊಬೈಲ್ ಟೆಲಿಕಾಂ ಹಗರಣಕ್ಕಿಂತ ದೊಡ್ಡ ಹಗರಣ ನಮ್ಮ ಕಣ್ಣ ಮುಂದೆನೇ ಬೆಳೆಯುತ್ತಿದೆ

- ಡಾ. ಗೋಪಾಲಕೃಷ್ಣನ್

ಮಾಜಿ ಪರಮಾಣು ನಿಬಂಧನೆ ಬೋರ್ಡ್ ಅಧ್ಯಕ್ಷ

★

ಇಂದಿನ ಬಂಡವಾಳಶಾಹಿ ಸಂಪನ್ಮೂಲಗಳ ಒಡೆತನ ಮತ್ತು ಬಳಕೆ ಬಗ್ಗೆ ವಿಚಿತ್ರ ಅತಾರ್ಕಿಕ ಉಲ್ಟಾ ಧೋರಣೆ ತೋರುತ್ತಿದೆ. ಮುಗಿಯುತ್ತ ಬಂದಿದ್ದು ಅಪರೂಪ ವಾಗಿರುವ ಪ್ರಾಕೃತಿಕ ಸಂಪನ್ಮೂಲಗಳಾದ ನೀರು, ಗಾಳಿ, ಇಂಧನಗಳ ಬೇಕಾಬಿಟ್ಟಿ ಬಳಕೆ ಮತ್ತು ಕಲುಷಿತಗೊಳಿಸುವುದರಲ್ಲಿ ತೊಡಗಿದೆ. ಅದಕ್ಕೆ ಯಾವುದೇ ಕಡಿವಾಣ ಹಾಕಲು ತಯಾರಿಲ್ಲ. ಆದರೆ ಧಂಡಿಯಾಗಿರುವ ಮತ್ತು ಮುಕ್ತವಾಗಿ ಬಿಟ್ಟರೆ ಇನ್ನೂ ವಿಫುಲವಾಗಿ ಬೆಳೆಯಬಲ್ಲ ಜ್ಞಾನ ಸಂಪನ್ಮೂಲಗಳಿಗೆ ಪೇಟೆಂಟ್, ಕಾಪಿರೈಟುಗಳ ಅಡ್ಡಗೋಡೆಗಳನ್ನು ಬೇಲಿಗಳನ್ನು ಹಾಕಿ ಅದನ್ನು ಹೊಸಕಿ ಹಾಕುವುದರಲ್ಲಿ ತೊಡಗಿದೆ.


- ಡಾ. ರಘುನಂದನ್,

ನೂತನ ಎಐಪಿಎಸ್‌ಎನ್ ಅಧ್ಯಕ್ಷ

★

ವಿಜ್ಞಾನ ಬರಿಯ ವಿಜ್ಞಾನಿಗಳಿಗೆ ಅಥವಾ (ಈಗ) ಕಾರ್ಪೊರೇಶನುಗಳಿಗೆ ಪೂರ್ತಿ ಬಿಡಲು ಆಗದಷ್ಟು ಗಂಭೀರ ವಿಚಾರ. ಅದು ಸಮಾಜದಲ್ಲಿ ಸಮಾನತೆ ಮತ್ತು ಪ್ರಜಾಪ್ರಭುತ್ವದ ಹೋರಾಟದ ಭಾಗವಾಗಬೇಕಾಗಿದೆ. ಹಿಂದೆ ಜ್ಞಾನದ ಉತ್ಪಾದನೆ ಸಾಪೇಕ್ಷವಾಗಿ ಮುಕ್ತ ಸನ್ನಿವೇಶದಲ್ಲಿ ಮತ್ತು ಕಮರ್ಶಿಯಲ್ ಆಸಕ್ತಿಗಳ ಕಪಿಮುಷ್ಟಿಯಿಂದ ಮುಕ್ತವಾಗಿದ್ದು, ಪ್ರಭುತ್ವ (ಅಥವಾ ಸರ್ಕಾರ) ವಿಜ್ಞಾನದ ಉತ್ಪಾದನೆ ಮತ್ತು ಬಳಕೆಯಲ್ಲಿ ತಟಸ್ಥ ಪಾತ್ರ ವಹಿಸಿತ್ತು ಎನ್ನಬಹುದು. ಆದರೆ ಇಂದಿನ ಪ್ರಭುತ್ವ ಆ ತನ್ನ ಪಾತ್ರಕ್ಕೆ ತಿಲಾಂಜಲಿ ಇತ್ತಿದೆ. ಅದು ಜಾಗತಿಕ ಬಂಡವಾಳ ಮತ್ತು ಕಾರ್ಪೊರೇಟ್ ಆಸಕ್ತಿಗಳ ಸಾಧನವಾಗಿ ಬಿಟ್ಟಿದೆ. ಇದು ಈಗ - ಅದರ ಹುಟ್ಟಿನ ಸಮಯಕ್ಕಿಂತಲೂ ಹೆಚ್ಚಾಗಿ - ಜನ ವಿಜ್ಞಾನ ಚಳುವಳಿಯ ಜವಾಬ್ದಾರಿಯಾಗಿದೆ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜಾಗತಿಕ ಬಂಡವಾಳದ ಕಬಂಧ ಬಾಹುಗಳಿಂದ ಬಿಡುಗಡೆ ಮಾಡಿ ಮನುಕುಲದ ಒಳಿತಿಗಾಗಿ ಬಳಸುವುದು ಎಐಪಿಎಸ್‌ಎನ್ ನ ಪ್ರಾಥಮಿಕ ಪಾತ್ರವಾಗಿದೆ

- ಪುನರ್ವಿಮರ್ಶೆ ಮತ್ತು ಮುನ್ನೋಟ



ದಸ್ತಾವೇಜಿನಿಂದ

★

ಹವಾಮಾನ ಬದಲಾವಣೆ ನಮ್ಮ ಚಳುವಳಿಗೆ ಏಕ ಕಾಲದಲ್ಲಿ ದೊಡ್ಡ ಸವಾಲು ಮತ್ತು ಅದ್ಭುತ ಸಾಧ್ಯತೆಗಳನ್ನು ಒಡ್ಡಿದೆ. ನಾವು ಈ ವರೆಗೆ ಕೆಲಸ ಮಾಡುತ್ತಾ ಬಂದಿರುವ ಪ್ರಮುಖ ಕ್ಷೇತ್ರಗಳಾದ - ಜೀವನೋಪಾಯಗಳು ಮತ್ತು ಬೆಳವಣಿಗೆ, ವಿಜ್ಞಾನ-ತಂತ್ರಜ್ಞಾನ ನೀತಿಗಳ ಟೀಕೆ-ವಿಶ್ಲೇಷಣೆ, ವಿಜ್ಞಾನ ಜನಪ್ರಿಯಗೊಳಿಸುವಿಕೆ, ಬದಲಿ ಬೆಳವಣಿಗೆ ಹಾದಿಗೆ ವಿಜ್ಞಾನ-ತಂತ್ರಜ್ಞಾನ - ಇವೆಲ್ಲದರ ಮೇಲೆ ಗಾಢ ಪರಿಣಾಮ ಬೀರುವ ಮತ್ತು ಅವೆಲ್ಲವನ್ನೂ ಸಮಗ್ರವಾಗಿ ಒಳಗೊಳ್ಳುವ ಸಾಮರ್ಥ್ಯ ಅದಕ್ಕಿದೆ. ಆದರೆ ಈ ಸವಾಲು ಎದುರಿಸಲು ಮತ್ತು ಅದರ ಸಾಧ್ಯತೆ ಬಳಸಿಕೊಳ್ಳಲು ನಾವು ನಮ್ಮ ಸಾಮರ್ಥ್ಯಗಳನ್ನು ಗಣನೀಯವಾಗಿ ಹೆಚ್ಚಿಸಬೇಕಾಗಿದೆ.

- ಪ್ರೊ. ಟಿ. ಜಯರಾಮನ್,

ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಶಿಯಲ್ ಸಾಯನ್ಸಸ್

★

ಸಾರಾಂಶದಲ್ಲಿ ಹೇಳಬೇಕಾದರೆ, ಜನ ವಿಜ್ಞಾನ ಚಳುವಳಿಯ ಚಟುವಟಿಕೆಗಳು ಮೂರು ಮಜಲುಗಳಲ್ಲಿ ಇವೆ - 1. ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಂಬಲಾರ್ಥ ವಿಜ್ಞಾನ-ತಂತ್ರಜ್ಞಾನ ವಿಚಾರಗಳಲ್ಲಿ ವಿಶ್ಲೇಷಣೆ ಒದಗಿಸುವುದು, 2. ಜನತೆಗೆ ವಿಜ್ಞಾನ-ತಂತ್ರಜ್ಞಾನದ ಗ್ರಹಿಕೆ ಮತ್ತು ಬಳಕೆಗೆ ಅವಕಾಶವನ್ನು ಸಾಧ್ಯವಾದಷ್ಟು ಹೆಚ್ಚುಮಾಡುವುದು 3. ಬೆಳವಣಿಗೆಯ ಬದಲಿ ವಿಧಾನಗಳ ಸೃಷ್ಟಿಗೆ ಜನತೆಯನ್ನು ಅಣಿ ನೆರೆಸುವುದು ಮತ್ತು ಈ ಬದಲಿ ಜಾರಿಗೆ ಪ್ರಚಾರ-ಪ್ರಕ್ಷೋಭೆ ನಡೆಸುವುದು...ಈ ಮೂರು ಮಜಲುಗಳ ಚಟುವಟಿಕೆಗಳನ್ನೂ ಪರಿಣಾಮಕಾರಿಯಾಗಿ ಸಮರ್ಥವಾಗಿ ನಿರ್ವಹಿಸಲು ಬೇಕಾದ ಅಗತ್ಯ ಸಾಮರ್ಥ್ಯ ಇರುವ ಸಂಘಟನೆ ಕಟ್ಟಬೇಕಾಗಿದೆ.

- ಡಾ. ಅಮಿತ್ ಸೇನ್ ಗುಪ್ತಾ,

ಹಿಂದಿನ ಎಐಪಿಎಸ್‌ಎನ್ ಪ್ರಧಾನ ಕಾರ್ಯದರ್ಶಿ ಪುನರ್ವಿಮರ್ಶೆ ಮತ್ತು ಮುನ್ನೋಟ ದಸ್ತಾವೇಜು ಮಂಡಿಸುತ್ತಾ

ವಚನ ತಪ್ಪಿದ ಸರ್ಕಾರ...

ಪುಟ 10 ರಿಂದ

ವ್ಯಕ್ತಿಗೆ ಸಾಮಾನ್ಯವಾಗಿ ಏನನ್ನೂ ನೀಡುತ್ತಿರಲಿಲ್ಲ, ಆದರೆ, ವ್ಯಕ್ತಿಯ ಎಲ್ಲಾ ಸಂಪನ್ಮೂಲಗಳೂ ಕರಗಿಹೋಗಿ, ನೆಂಟರಿಷ್ಟರಿಂದ ಯಾವುದೇ ಸಹಾಯ ಸಿಗದಿದ್ದಾಗ ಮಾತ್ರವೇ ಅವನಿಗೆ ಕಾನೂನಿನಡಿಯಲ್ಲಿ ಸಹಾಯ ಸಿಗುತ್ತಿತ್ತು. ಇಂತಹ ಬಡತನದ ಕಾನೂನಿನಡಿಯಲ್ಲಿ ಸಹಾಯ ಪಡೆವ ವ್ಯಕ್ತಿಗಳು ಅನೇಕ ಬಾರಿ ನಾಗರಿಕ ಹಕ್ಕುಗಳನ್ನು ಕಳೆದುಕೊಂಡು ಅವಮಾನಕ್ಕೊಳಗಾಗುತ್ತಿದ್ದರು.

ಕೈಗಾರಿಕೀಕರಣದ ಗತಿಯು ವೃದ್ಧಿಸಿದಂತೆ ಹೊಸದಾದ ಒಂದು ಕಾರ್ಮಿಕ ವರ್ಗ ಉದಯಿಸಿತು. ಇವರೇ ನಗರ ಪ್ರದೇಶದ ಕಾರ್ಮಿಕರು. ಇವರು ತಮ್ಮ ಜೀವನೋಪಾಯಕ್ಕೆ ಕಾಲಕಾಲಕ್ಕೆ ಪಾವತಿಸಿದ ವೇತನದ ಮೇಲಷ್ಟೇ ಸಂಪೂರ್ಣವಾಗಿ ಅವಲಂಬಿತರಾಗಿದ್ದರು. ಕೆಲವೊಮ್ಮೆ ಸರ್ಕಾರಗಳು ರೋಗದಿಂದ ಬಳಲುತ್ತಿದ್ದು, ಗಾಯಗೊಂಡ ಕಾರ್ಮಿಕರಿಗೆ ಸಹಾಯ ಮಾಡುವಂತೆ ಮಾಲಿಕರನ್ನು ಬದ್ಧತೆಗೊಳ ಪಡಿಸುತ್ತಿದ್ದರು. ರೋಗ ಬಾಧೆಗೊಳ ಪಡಿಸುತ್ತಿದ್ದರು. ರೋಗ ಬಾಧೆಗೊಳಗಾದ ಮತ್ತು ವೃದ್ಧಾಪ್ಯದಲ್ಲಿ ಗೌರವಯುತ ಹಣಕಾಸಿನ ನೆರವನ್ನು ನೀಡಲು ಪರಸ್ಪರ ಸಹಾಯ ಸಂಘಗಳನ್ನು ಸ್ಥಾಪಿಸ ಲಾಯಿತು. ಕೆಲವು ಸರ್ಕಾರಗಳು ಉಳಿತಾಯ ಬ್ಯಾಂಕ್‌ಗಳನ್ನು ಸ್ಥಾಪಿಸಿದವು ಮತ್ತು ಕಾರ್ಮಿಕರು ಖಾಸಗಿ ವಿಮೆಯನ್ನು ಪಡೆಯಬಹುದಿತ್ತು.

ಆದರೆ, ಕಾರ್ಮಿಕರು ದಿನನಿತ್ಯ ಬದುಕುಳಿಯುವುದಕ್ಕೆ ತಮ್ಮ ಸಂಪೂರ್ಣ ಶ್ರಮ ವಹಿಸುವುದು ದೊಡ್ಡ ಕೆಲಸವಾಗಿತ್ತು. ಕೂಲಿಯ ದರವೇ ಕಡಿಮೆಯಿರುವಾಗ ಇನ್ನು ಉಳಿತಾಯ ವಾದರೂ ಎಲ್ಲಿ? ಹೀಗಾಗಿ ವೃದ್ಧಾಪ್ಯದ ಸಂಭವನೀಯ ಅವಘಡಗಳಿಗೆ ಅವರು ಉಳಿತಾಯ ಮಾಡಲು ಸಾಧ್ಯವಾಗುತ್ತಿರಲಿಲ್ಲ. ವೈಯಕ್ತಿಕ ಉಳಿತಾಯ ಮತ್ತು ಖಾಸಗಿ ವಿಮೆಯು ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಕೊಂಚ ಮಟ್ಟಿಗೆ ಭದ್ರತೆ ಒದಗಿಸುತ್ತಿದ್ದವು. ಕಾರ್ಮಿಕನು ವೇತನರಹಿತನಾದರೆ ಅವನ ಕುಟುಂಬವು ಬೀದಿಪಾಲಾಗುತ್ತಿತ್ತು.

20ನೇ ಶತಮಾನದ ಅನಾವರಣ ಗೊಂಡಂತೆ, ವಿಧಿವತ್ತಾದ (ಅಂದರೆ ಶಾಸನಾತ್ಮಕ) ಸಾಮಾಜಿಕ ರಕ್ಷಣೆಯ ಇತರ ಬಗೆಗಳನ್ನು ಜಾರಿ ಮಾಡ ಲಾಯಿತು.

ಸೋವಿಯತ್ ಒಕ್ಕೂಟ ಮತ್ತು 2ನೇ ಮಹಾ ಯುದ್ಧದ ಬಳಿಕ ಪೂರ್ವ ಐರೋಪ್ಯ ದೇಶಗಳಲ್ಲಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿದ ಬಳಿಕ ಐ.ಎಲ್.ಓ ಠರಾವುಗಳನ್ನು ಅಂಗೀಕರಿಸಿತು.

ಈ ಶ್ರಮಿಕನ ಬದುಕಿನ ಭದ್ರತೆಗಾಗಿ ಮೊದಲ ಬಾರಿಗೆ ಪಿಂಚಣಿ ವ್ಯವಸ್ಥೆಯನ್ನು ಶಾಸನಾತ್ಮಕವಾಗಿ ತಂದದ್ದು, ಸೋವಿಯತ್ ಒಕ್ಕೂಟದ ಸಮಾಜವಾದಿ ಚಳುವಳಿ. ಇಂತಹ ಪಿಂಚಣಿಯ ಇಡಗಂಟನ್ನು ಜಾಗತೀಕರಣದ ಹೆಸರಿನಲ್ಲಿ ಷೇರು ಮಾರುಕಟ್ಟೆಗೆ ಹೂಡುವ, ವಿದೇಶಗಳಲ್ಲಿ ವಿಫಲವಾಗಿರುವ ವಿಧಾನವನ್ನು ಬಡ ಅಂಗನವಾಡಿ ನೌಕರರಿಗೆ ಜಾರಿ ಮಾಡಲು ಹೊರಟಿರುವ ಸರ್ಕಾರ ಸಾಮಾನ್ಯ ಜನ ಪರವೇ?

ಯುಪಿಎ ದರ್ಬಾರ್...

ಪುಟ 13 ರಿಂದ

ಸಿವಿಸಿ ಮುಖ್ಯಸ್ಥರ ವಿಷಯದಲ್ಲಿಯೂ ಪೇಚು

ಯುಪಿಎ ಸರಕಾರಕ್ಕೆ ಈ ವಾರ ಮತ್ತೊಂದು ಪೇಚು ಎದುರಾಗಿದೆ. ಕೇರಳದಲ್ಲಿ ಪಾಮೊಲಿನ್ ಎಣ್ಣೆ ಆಮದು ಹಗರಣದ ತನಿಖೆಯನ್ನು ಮುಂದುವರೆಸುವಂತೆ ಸುಪ್ರಿಂ ಕೋರ್ಟ್ ಆದೇಶವಿತ್ತಿದೆ. 2007ರಲ್ಲಿ ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿ ಕರುಣಾಕರನ್ ಅರ್ಜಿಯ ಮೇರೆಗೆ ಸುಪ್ರಿಂ ಕೋರ್ಟ್ ಈ ವಿಚಾರಣೆಯನ್ನು ನಿಲ್ಲಿಸಿತ್ತು. ಈಗ ಕರುಣಾಕರನ್ ನಿಧನದ ಹಿನ್ನೆಲೆಯಲ್ಲಿ ಅದನ್ನು ಮುಂದುವರೆಸಲು ಅದು ಅವಕಾಶ ಮಾಡಿಕೊಟ್ಟಿದೆ.

1991.-92ರಲ್ಲಿ ಕರುಣಾಕರನ್ ಕೇರಳದ ಯುಡಿಎಫ್ ಮಂತ್ರಿಮಂಡಲದ ಮುಖ್ಯಸ್ಥರಾಗಿದ್ದಾಗ ಪಾಮೊಲಿನ್ ಆಮದಿನಲ್ಲಿ ಸರಕಾರದ ಬೊಕ್ಕಸಕ್ಕೆ 2.32 ಕೋಟಿ ರೂ. ನಷ್ಟವಾಗಿದೆ ಎಂಬ ಆಪಾದನೆಯ ತನಿಖೆ ನಡೆಸಿದ ವಿಚಕ್ಷಣೆ(ವಿಜಿಲೆನ್ಸ್) ಮತ್ತು ಭ್ರಷ್ಟಾಚಾರ-ವಿರೋಧಿ ಕಚೇರಿ 2003ರಲ್ಲಿ ಆಪಾದನೆ ಪಟ್ಟಿಯನ್ನು ಹಾಕಿತ್ತು. ಆದರಲ್ಲಿ ಆಗ ಕೇರಳ ಸರಕಾರದ ಆಹಾರ ಕಾರ್ಯದರ್ಶಿ ಮತ್ತು ಕೇರಳ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ಬೋರ್ಡ್ ಸದಸ್ಯರಾಗಿದ್ದ ಹಾಗೂ ಇತ್ತೀಚೆಗಷ್ಟೇ ಕೇಂದ್ರೀಯ ವಿಚಕ್ಷಣಾ ಆಯೋಗ(ವಿಜಿಲೆನ್ಸ್ ಕಮಿಶನ್-ಸಿವಿಸಿ)ದ ಮುಖ್ಯಸ್ಥರಾಗಿ ನೇಮಕಗೊಂಡಿರುವ ಪಿ.ಜೆ.ಥಾಮಸ್ ಎಂಟನೇ ಆಪಾದಿತ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಈ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯಲು ಪ್ರಯತ್ನಿಸಿತ್ತು. 2007ರಲ್ಲಿ ಕರುಣಾಕರನ್ ಈ ವಿಚಾರಣೆಯನ್ನು ನಿಲ್ಲಿಸುವಂತೆ ಅರ್ಜಿಯನ್ನೂ ಹಾಕಿದ್ದರು. ಈಗ ಅವರ ಸಾವಿನಿಂದ ಆ ಅರ್ಜಿ ತಂತಾನೆ ರದ್ದಾಗಿರುವುದರಿಂದ ತನಿಖೆ ಮುಂದುವರೆಯಬೇಕಾಗಿದೆ.

ಸಿವಿಸಿ ನೇಮಕವಾದಾಗಲೇ ಹಲವು ಟೀಕೆಗಳನ್ನು ಎದುರಿಸಿದ, ಸುಪ್ರಿಂಕೋರ್ಟ್ ಟಿಪ್ಪಣಿಯನ್ನೂ ಎದುರಿಸಬೇಕಾಗಿ ಬಂದಿರುವ ಪಿ.ಜೆ. ಥಾಮಸ್ ಮತ್ತು ಯುಪಿಎ ಸರಕಾರ ಈಗೇನು ಮಾಡುತ್ತಾರೆ ಎಂದು ಕಾದು ನೋಡಬೇಕಾಗಿದೆ.

ಬಿಜೆಪಿ ದರ್ಬಾರ್...

ಪುಟ 12ರಿಂದ

ಮುಖ್ಯವಾಗಿ ಗಮನಿಸಬೇಕಾದ ವಿಷಯ ಅಂದರೆ ಕೆಇಆರ್‌ಸಿ ಮುಂದೆ ಸರ್ಕಾರವು ಪ್ರತಿ ಯೂನಿಟ್ ವಿದ್ಯುತ್‌ಗೆ 75 ಪೈಸೆ ಜಾಸ್ತಿ ಮಾಡಿ ಎಂದು ಮೊದಲು ವಾದ ಮಂಡಿಸಿತ್ತು. ಆದರೆ ಕೆಇಆರ್‌ಸಿ ಒಂದೇ ಬಾರಿಗೆ ಅಷ್ಟು ಪ್ರಮಾಣದ ಏರಿಕೆ ಮಾಡಲು ಹಿಂಜರಿದೋ ಏನೋ ಯೂನಿಟ್‌ಗೆ 30 ಪೈಸೆ ಏರಿಸಲು ತೀರ್ಮಾನಿಸಿತು ಎಂಬುದು. ಇಂಥಾ ವಾಸ್ತವಗಳನ್ನು ಮುಸುಕು ಮಾಡಿ ಚುನಾವಣಾ ಕಾಲದಲ್ಲಿ ಆಡಬಾರದ ನಾಟಕಗಳನ್ನು ಆಡಿ ಬಿಜೆಪಿಗರು ಪಂಚಾಯ್ತಿ ಚುನಾವಣೆಗಳಲ್ಲಿ ಕೊಂಚ ಲಾಭ ಮಾಡಿಕೊಂಡಿರ ಬಹುದು. ಈ ಕಪಟ ನಾಟಕಗಳು ಜನತೆಗೆ ಅರ್ಥವಾಗದಿರುತ್ತದೆಯೇ ? ಹಾಗಾದರೆ ಬಿಜೆಪಿಗರು ಮತ್ತೆಂದೂ ಚುನಾವಣೆಗಾಗಿ ಜನರ ಮುಂದೆ ಬರುವುದೇ ಇಲ್ಲವೇ ? ಜನರನ್ನು ಎಷ್ಟು ಸಾರಿ ಅಂತ ಮೋಸಗೊಳಿಸಲು ಸಾಧ್ಯ !!

JANASHAKTHI KANNADA VARA PATRIKE JAN. 23, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

ಅಂತಾರಾಷ್ಟ್ರೀಯ ಉತ್ಸವಕ್ಕೆ ಕಳೆತಂದ ಜಾನಪದ ಕುಣಿತ
ಶಕ್ತಿಯುತ ಸಾಂಸ್ಕೃತಿಕ ಅಭಿವ್ಯಕ್ತಿ



ಡಾ. ವಿಠ್ಠಲ ಭಂಡಾರಿ

ದಕ್ಷಿಣ ಆಫ್ರಿಕಾದ ಪ್ರಿಟೋರಿಯಾ ಸಮೀಪದ ಲುಕಸ್ ಮೊರಿಪೆ ಸ್ಟೇಡಿಯಂನಲ್ಲಿ ನಡೆದ ಅಂತಾರಾಷ್ಟ್ರೀಯ ವಿದ್ಯಾರ್ಥಿ-ಯುವಜನ ಉತ್ಸವದ ಉದ್ಘಾಟನಾ ಸಮಾರಂಭಕ್ಕೆ ಕಳೆ ಬಂದಿದ್ದೇ ಪ್ರಸಿದ್ಧ ಜುಲು ಬುಡಕಟ್ಟು ಕುಣಿತದ ಮೂಲಕ. ಸುಮಾರು ನೂರಕ್ಕಿಂತ ಹೆಚ್ಚು ಜನರಿರುವ ನೃತ್ಯ ತಂಡ ಸಾಂಪ್ರದಾಯಿಕವಾದ ಚರ್ಮದ ಉಡುಗೆ, ಪ್ರಾಣಿ ತುಪ್ಪಳವನ್ನು ಸಂಕೇತಿಸುವ ಹೆಡ್ ಗೇರ್, ಮುಖವರ್ಣಿಕೆಗಳ ಮೂಲಕ ಜಗತ್ತಿನ ಗಮನ ಸೆಳೆದರು. ಕಿವಿ ಗಡಚಿಕ್ಕುವ ಚರ್ಮವಾದ್ಯಗಳ ಲಯಕ್ಕೆ ಇಡೀ ಕ್ರೀಡಾಂಗಣದಲ್ಲಿ ಹೆಜ್ಜೆ ಹಾಕದವರಿಲ್ಲ. ಅವರ ಹಾಡಿಗೆ ದನಿ ಸೇರಿಸದವರಿಲ್ಲ. ಬಳ್ಳಿಯಂತೆ ಬಳಕುವ, ತೆರೆಯಂತೆ ಸರಿಯುವ, ಪ್ರವಾಹದಂತೆ ಮುನ್ನುಗ್ಗುವ, ಬೇಟೆಯನ್ನು ಬೆನ್ನಟ್ಟುವ, ಬೇಟೆಯಿಂದ ತಪ್ಪಿಸಿಕೊಳ್ಳುವ, ದೇವರನ್ನು ಆರಾಧಿಸುವ ವಿವಿಧ ಭಂಗಿಗಳು, ವಿವಿಧ ಹೆಜ್ಜೆಗಳು ಅವರ ಸಾಂಸ್ಕೃತಿಕ ಅನನ್ಯತೆಗೆ ಸಾಕ್ಷಿಯಾಗಿದ್ದವು.

ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜಾಕೋಬ್ ಜೂಮೋ ಅವರ ಭಾಷಣದ ಮೊದಲು ಮತ್ತು ನಂತರ 3-4 ತಾಸುಗಳ ಕಾಲ ಬೀಳುತ್ತಿರುವ ಮಳೆಯನ್ನೂ ಲೆಕ್ಕಿಸದೇ, ನಡುಗುವ ಚಳಿಯನ್ನು ಧಿಕ್ಕರಿಸಿ ಅವರ ಉತ್ಸಾಹ ಮುಗಿಲು ಮುಟ್ಟಿತ್ತು. ಜಗತ್ತಿನಾದ್ಯಂತ ಬಂದ ಪ್ರತಿನಿಧಿಗಳಿಗೆ ಆಫ್ರಿಕಾದ ಬುಡಕಟ್ಟುಗಳ ಕಲೆಯನ್ನು, ಅದರೊಳಗಡೆ ಅಡಗಿದ ಜೀವನ ಪ್ರೀತಿಯನ್ನು ತೆರೆದು ತೋರಿಸುವ ಆಸೆ ಅವರಲ್ಲಿತ್ತು.

ಒಂದೆಡೆ ಅಮೆರಿಕಾ ಪ್ರೇರಿತ ಪಾಶ್ಚಾತ್ಯ ಸಂಸ್ಕೃತಿಗಳು ಅಭಿವೃದ್ಧಿಶೀಲ ದೇಶಗಳ ಸಾಂಸ್ಕೃತಿಕ ಚಹರೆಗಳ ಮೇಲೆ ದಾಳಿ ಇಡುತ್ತಿರುವಾಗ, ತಮ್ಮ ತಮ್ಮ ಕಲೆ, ಸಾಹಿತ್ಯ, ಪಾರಂಪರಿಕ ಕಲೆಗಳ ಕುರಿತು ಕೀಳರಿಮೆ ಹುಟ್ಟಿಸುತ್ತಿರುವಾಗ 10ದಿನಗಳ ಉತ್ಸವ ಇದಕ್ಕೆ ಸೆಡ್ಡು ಹೊಡೆದಂತೆ ಆಫ್ರಿಕಾ ಖಂಡದ ವಿವಿಧ ದೇಶಗಳಿಂದ, ದಕ್ಷಿಣ ಆಫ್ರಿಕಾದ ವಿವಿಧ ಪ್ರಾವಿನ್ಸ್‌ಗಳಿಂದ ಬಂದ ನೃತ್ಯ ತಂಡಗಳು, ಸಾಂಪ್ರದಾಯಿಕ ಹಾಡುಗಳ ಉಡುಗೆ ತೊಡುಗೆಗಳ ಮೂಲಕ, ವಾದ್ಯ ಪರಿಕರಗಳ ಮೂಲಕ ತಮ್ಮ ಅನನ್ಯತೆಯನ್ನು ಅಭಿವ್ಯಕ್ತಿಸಿದರು.



ದಕ್ಷಿಣ ಆಫ್ರಿಕಾವನ್ನು ಪ್ರವೇಶಿಸಿದ ಸಂದರ್ಭದಿಂದಲೂ ಕಪ್ಪು ಸುಂದರಿ-ಸುಂದರರ ಗುಂಪು ನರ್ತನಗಳೇ ಕಣ್ಣೆದುರಿಗಿದ್ದವು. ಅಲ್ಲಿ ಸೇರಿದ ಕಾರ್ಯಕರ್ತರೂ ಕೂಡ ಹಲವು ಸಂದರ್ಭಗಳಲ್ಲಿ ತಮ್ಮ ಕೆಲಸ ಬಿಟ್ಟು ನರ್ತನದಲ್ಲಿ ತೊಡಗಿರುತ್ತಿರುದ್ದರು. ಉದ್ಘಾಟನೆಯ ಪ್ರತಿ ಘಟ್ಟದಲ್ಲಿಯೂ ಘೋಷಣೆಯುಕ್ತ ನರ್ತನ. ಇದು ಅಲ್ಲಿಯ ಅತಿಥಿಗಳಿಗೂ ಅದೆಷ್ಟು ರೂಢಿಯಾಗಿದೆಯೆಂದರೆ ಅವರ ಭಾಷಣದ ಮಧ್ಯೆ ಮಧ್ಯೆ ನರ್ತನಕ್ಕಾಗಿ, ಹಾಡಿಗಾಗಿ 2-3 ನಿಮಿಷ ಸಮಯ ನೀಡುತ್ತಿದ್ದರು. ಮತ್ತು ಅವರೂ 'ಅಮಾಂಜಾ, ವೀವಾ' ಎಂದು ಘೋಷಣೆ ಕೂಗುತ್ತಿದ್ದರು. ಉದ್ಘಾಟಕರಾದ ಅಧ್ಯಕ್ಷ ಜಕೋಬ್ ಜೂಮಾ, ಪ್ರಿಪರೇಟರಿ ಕಮಿಟಿಯ ಅಧ್ಯಕ್ಷ ಜ್ಯೂಲಿಯಸ್ ಮಲೇಮಾರ ಮಾತುಗಳು ನಡೆಯುತ್ತಿರುವಾಗ ಆಫ್ರಿಕಾದ ಪ್ರತಿನಿಧಿಗಳು ಕೂಗುವ ಘೋಷಣೆಗೆ, ಸಾಮೂಹಿಕ ನರ್ತನಗಳಿಗೆ ಅತಿಥಿಗಳು ಕೆರಳಿಸಬಹುದೆಂದು, ಪೋಲೀಸರು ಬಂದು ಅವರನ್ನು ಗದರಿಸಬಹುದೆಂದುಕೊಂಡೆವು. ಯಾಕೋ ಅವರದು ಅತಿಯಾಯಿತೆಂದು ಅನಿಸಿತು. ಆದರೆ ಅತಿಥಿಗಳು ಸಿಡುಕುವ ಬದಲು ಎಂಜೋಯ್ ಮಾಡುತ್ತಿದ್ದರು. ಸ್ವತಃ ಉದ್ಘಾಟಕರಾದ ಜುಮೋ ಅವರೇ 'ಅಮಾಂಜಾ, ವೀವಾ' ಎಂದು ಘೋಷಣೆ ಕೂಗಿ ಕಾರ್ಯಕರ್ತರನ್ನು ಹುರಿದುಂಬಿಸುತ್ತಿದ್ದರು.

ಒಂದು ರೀತಿಯಲ್ಲಿ ಅವರ ಬದುಕೇ ಈ ಹಾಡು ಕುಣಿತಕ್ಕೆ ಟ್ಯೂನ್ ಆದಂತಿದೆ. ಒಂದು ಸಣ್ಣ ಹಾಡು ಒಂದೆರಡು ರೀದಂ ಕೇಳಿದರೆ ಸಾಕು, ಊಟ ಮಾಡುತ್ತಿದ್ದವರು ಕೆಳಗಿಟ್ಟು ಕುಣಿಯುತ್ತಾರೆ. ಮುಗಿದವರು ಅಲ್ಲೇ ಕೈ-ಕಾಲು ಆಡಿಸುತ್ತಾರೆ. ನಿದ್ದೆ ಮಾಡುತ್ತಿದ್ದವರೂ ಅರೆನಿಮಿಷ ಎದ್ದು ಕುಣಿದು ಏನೂ ಆಗಿಯೇ ಇಲ್ಲ ಎನ್ನುವಂತೆ ಮಲಗಿಬಿಡುತ್ತಾರೆ. ನಾವು ಒಂದೆರಡು ಹೆಜ್ಜೆ ಕುಣಿದರೆ ಸಾಕು, ಸ್ವಲ್ಪ ಮೈ ಕುಲುಕಿಸಿದರೆ ಸಾಕು ಅವರು ಅರೆಘಳಿಗೆ ನಮ್ಮ ಕೈ ಹಿಡಿದು ನರ್ತಿಸಿಯೇ ಮುಂದೆ ಹೋಗುತ್ತಾರೆ.



ಈ ಹಾಡು, ನರ್ತನ ತಮ್ಮ ಬುಡಕಟ್ಟುಗಳಿಂದ ಬಂದ ಸಾಂಪ್ರದಾಯಿಕ ಬಳುವಳಿ ಎನ್ನುತ್ತಾರೆ. ಇದು ಬಿಳಿಯರ ವಿರುದ್ಧ ಪ್ರತಿಭಟನೆಯ, ಹೋರಾಟದ ಒಂದು ಭಾಗವಾಗಿತ್ತು ಎಂದು ನೆನಪಿಸುತ್ತಾರೆ. ಪ್ರತಿ ಹಂತದಲ್ಲಿ ಯಾಕೆ ಕೈ ಕೈಹಿಡಿದು ಸಾಮೂಹಿಕವಾಗಿ ನರ್ತಿಸುತ್ತೀರೆಂದು ಕೇಳಿದಾಗ, 'ಇದು ಬಿಳಿಯರ ವಿರುದ್ಧದ ಪ್ರತಿಭಟನೆ. ಕರಿಯರ ಸಂಘಶಕ್ತಿಯ ಪ್ರತೀಕ' ಎನ್ನುವ ಉತ್ತರ ಬಂತು. ಅವರ ಹಲವು ನರ್ತನದಲ್ಲಿಯೂ ಕೂಡ ಬಿಳಿಯರ ದರ್ಪ-ದೌರ್ಜನ್ಯವನ್ನು ಅಪಹಾಸ್ಯ ಮಾಡುವ, ಕರಿಯರ ಗೆಲುವನ್ನು ಸಂಭ್ರಮಿಸುವ ಧ್ವನಿ ಅಡಗಿದೆ. ಇದರೊಂದಿಗೆ ಬಿಳಿಯರೊಂದಿಗೆ ಪಟ್ಟ ಹಿಂಸೆ, ಅವಮಾನ, ನೋವು, ಪ್ರಾಣ ಸದೃಶವಾಗಿ ಬದುಕಿದ ರೀತಿಗಳೂ ಕೂಡ ಸೂಟು, ಶಂಗಾನ್, ವೆಂಡಾ ಮುಂತಾದ ಬುಡಕಟ್ಟುಗಳ ಕುಣಿತದಲ್ಲಿ ಸೇರಿಕೊಂಡಿವೆ. ಹಲವು ಹಾಡುಗಳಲ್ಲಿ ತಮ್ಮ ಪೂರ್ವಿಕರನ್ನು ನೆನೆಯುತ್ತಾರೆ. ಬಹುತೇಕರು ಬಿಳಿಯರು ಬರುವ ಪೂರ್ವದಲ್ಲಿ ಆಗಿಹೋದ ಬುಡಕಟ್ಟುಗಳ ನಾಯಕರು, ಇನ್ನು ಹಲವರು ಬಿಳಿಯರ ವಿರುದ್ಧದ ಹೋರಾಟದಲ್ಲಿ ಹತರಾದವರು. ಉಳಿದಂತೆ ಅವರಲ್ಲಿ ಸ್ವಾತಂತ್ರ್ಯದ ಬೀಜ ಬಿತ್ತಿದವರು, ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡವರು ಹಾಡಿನಲ್ಲಿ ಸ್ಫೂರ್ತಿಯಾಗಿ ಬರುತ್ತಾರೆ.

ATLEGANG CULTURAL GROUP, THE LESEDI CULTURAL VILLAGE GROUP, MALEDI YOUTH CLUB ಮುಂತಾದ ಸಾಂಸ್ಕೃತಿಕ ತಂಡಗಳು ನಡೆಸಿಕೊಟ್ಟ ಕಾರ್ಯಕ್ರಮಗಳನ್ನು ನೋಡಿದಾಗ ಬಡತನ, ಅವಮಾನದಲ್ಲಿಯೂ ಕಾಪಿಟ್ಟುಕೊಂಡ ಸಾಂಸ್ಕೃತಿಕ ಶ್ರೀಮಂತಿಕೆ ಯಾರನ್ನೂ ಬೆರಗುಗೊಳಿಸುತ್ತದೆ.

ಆಫ್ರಿಕಾದ ಇತರ ದೇಶಗಳಾದ ನಮೀಬಿಯಾ, ಇಥಿಯೋಪಿಯಾಗಳಿಂದ ಬಂದ ತಂಡಗಳೂ ಕೂಡ ಈ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹಾಗೇ ಉಳಿಸಿಕೊಂಡಿವೆ. ಆದರೆ ಇಂತಹ ಪ್ರದರ್ಶನ ಕೊಡುವ ಕೆಲವು ತಂಡಗಳು ಮಾತ್ರ ಉಳಿದುಕೊಂಡಿದ್ದು, ಸಾವಕಾಶವಾಗಿ ಕಡಿಮೆ ಆಗುತ್ತಿರುವ ಸಾಧ್ಯತೆಯ ಬಗ್ಗೆ ಗಮನ ಸೆಳೆಯುತ್ತಾರೆ.



ಆದರೆ ಅಲ್ಲೆಲ್ಲಾ ಇಂತಹ ನರ್ತನವನ್ನು ಹೊಸ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ-ಯುವಜನರಿಗೆ ಹೇಳಿ ಕೊಡುವ ಶಾಲೆಗಳೂ, ತರಬೇತಿ ಕೇಂದ್ರಗಳೂ ಇವೆ, ಕೆಲವು ಸರ್ಕಾರದ ನೆರವಿನಿಂದ ನಡೆದರೆ, ಇನ್ನು ಕೆಲವು ಕಾರ್ಯಕ್ರಮ ನೀಡಿ ಗಳಿಸಿದ

ಪುಟ 4 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027
Published by G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor S.Y.GURUSHANTH